

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 20 ಸೋಮವಾರ 2023

ಸಂಪುಟ: 43 | ಸಂಚಿಕೆ: 330 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ತಿ.ನರಸೀಪುರ ಕ್ಷೇತ್ರದಲ್ಲಿ ಪಂಚರತ್ನ ರಥಯಾತ್ರೆ: ಅಧಿಕಾರ ವಹಿಸಿಕೊಂಡ ಕ್ಷಣವೇ

ಪಂಚರತ್ನ ಯೋಜನೆ ಜಾರಿ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಭರವಸೆ



ತಿ.ನರಸೀಪುರ ತಾಲೂಕಿನ ಮಡವಾಡಿ ಗ್ರಾಮದಲ್ಲಿ ಪಂಚರತ್ನ ರಥಯಾತ್ರೆಗೆ ಚಾಲನೆ ನೀಡಿ, ನೆರೆದಿದ್ದ ಬೃಹತ್ ಜನಸ್ತೋಮವನ್ನುದ್ದೇಶಿಸಿ ಮಾಜಿ ಸಿಎಂ ಕುಮಾರಸ್ವಾಮಿ ಮಾತನಾಡಿದರು. ಶಾಸಕ ಅಶ್ವಿನ್‌ಕುಮಾರ್ ಇತರರಿದ್ದಾರೆ.

ತಿ.ನರಸೀಪುರ, ಮಾ.19(ಎಸ್‌ಕೆ)– ರಾಜ್ಯದ ಜನತೆ ಶ್ರೇಯೋಭಿವೃದ್ಧಿಗಾಗಿ ಜಾರಿಗೆ ತರಲು ಉದ್ದೇಶಿಸಿರುವ ಪಂಚರತ್ನ ಯೋಜನೆ ಅನುಷ್ಠಾನಕ್ಕೆ ತರಲು 5 ವರ್ಷ ಸ್ವತಂತ್ರ ಅಧಿಕಾರ ನೀಡುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಮನವಿ ಮಾಡಿದರು.

ತಾಲೂಕಿನ ಮಡವಾಡಿ ಗ್ರಾಮದಲ್ಲಿ ಪಂಚರತ್ನ ರಥಯಾತ್ರೆಗೆ ಚಾಲನೆ ನೀಡಿ, ತಲಕಾಡು ಗ್ರಾಮಕ್ಕೆ ಆಗಮಿಸಿದ ರಥಯಾತ್ರೆಗೆ ಕಾರ್ಯಕರ್ತರು, ಅಭಿಮಾನಿಗಳು ಅದ್ಧೂರಿ ಸ್ವಾಗತ ನೀಡಿದ ವೇಳೆ ನೆರೆದಿದ್ದ ಬೃಹತ್ ಜನಸ್ತೋಮವನ್ನುದ್ದೇಶಿಸಿ ಅವರು ಮಾತನಾಡಿದರು. ಪಕ್ಷದ ಬಹು ನಿರೀಕ್ಷಿತ ಪಂಚರತ್ನ ಯೋಜನೆ ಜಾರಿಗೆ ತರಲು 2 ಲಕ್ಷ ಕೋಟಿ ರೂ. ಅವಶ್ಯಕತೆ ಇದೆ. ಪಕ್ಷಕ್ಕೆ ಬಹುಮತ ಬಾರದ ಹೊರತು ಯೋಜನೆ ಜಾರಿ ಸಾಧ್ಯವಿಲ್ಲ. ಹಾಗಾಗಿ ನಾಡಿನ ಜನತೆ ಈ ಬಾರಿ ಪ್ರಾದೇಶಿಕ ಪಕ್ಷವಾದ ನಮಗೆ ಬಹುಮತ ನೀಡಬೇಕು. ಜನತೆ ಆಶೀರ್ವಾದ ನೀಡಿದ್ದಲ್ಲಿ, ಪಂಚರತ್ನ ಯೋಜನೆಯನ್ನು ಅಧಿಕಾರ ವಹಿಸಿಕೊಂಡ ಕ್ಷಣವೇ ಜಾರಿಗೊಳಿಸುತ್ತೇನೆ ಎಂದು ಭರವಸೆ ನೀಡಿದರು.

ಪ್ರತಿ ನಿತ್ಯ ನನ್ನನ್ನು ಭೇಟಿ ಮಾಡಲು ಬರುವ ಬಡ ತಾಯಂದಿರು, ಸಮಸ್ಯೆಗಳನ್ನು ಹೊತ್ತು ಕಣ್ಣೀರು ಹಾಕುವುದನ್ನು ನೋಡಿದ್ದೇನೆ. ರೈತರ ವ್ಯವಸಾಯದ ಸಮಸ್ಯೆ ಅರಿತಿದ್ದೇನೆ. ಯುವಕರು ಉದ್ಯೋಗವಿಲ್ಲದೇ ಪರಿತಪಿಸುವುದನ್ನು ಕಂಡಿದ್ದೇನೆ. ಹಲವಾರು ಕುಟುಂಬಗಳಲ್ಲಿ ಬಡತನದಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಸಾಧ್ಯವಾಗದ ಬಗ್ಗೆ ನನಗೆ ಅರಿವಿದೆ ಮತ್ತು ಈಗಲೂ ಮನೆಗಳಿಲ್ಲ ಎಂದು ಅರ್ಜಿಗಳನ್ನು ಕೊಡುತ್ತಿರುವುದನ್ನು ಗಮನಿಸಿದ್ದೇನೆ. ದೇಶ ಮತ್ತು ರಾಜ್ಯದಲ್ಲಿ ಬಡತನ ಮುಂದುವರೆದಿದ್ದು, ಸೀಮಿತ ವರ್ಗದವರು ಮಾತ್ರವೇ ಶ್ರೀಮಂತರಾಗುತ್ತಿದ್ದಾರೆ. ಇದನ್ನು ಅರಿತು ಪಂಚರತ್ನದಂತಹ 5 ಯೋಜನೆಗಳ ಮುಖಾಂತರ ರಾಜ್ಯದ ಗ್ರಾಮದ ದಲಿತ, ▶ 8ನೇ ಪುಟಕ್ಕೆ

ಏನಿದು ಯೋಜನೆ?

2023ರ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬಂದರೆ ಮಾಡುವ ಕಾರ್ಯಗಳನ್ನು ಪಂಚರತ್ನ ಯೋಜನೆ ಎಂದು ಪಟ್ಟಿ ಮಾಡಲಾಗಿದೆ. ಪಂಚರತ್ನ ರಥಯಾತ್ರೆ ಮೂಲಕ ಕುಮಾರಸ್ವಾಮಿ ಈ ಯೋಜನೆಗಳನ್ನು ಜನರಿಗೆ ತಲುಪಿಸುತ್ತಿದ್ದಾರೆ. ಯೋಜನೆಯ ವಿವರಗಳು ಹೀಗಿವೆ.

- **ಶಿಕ್ಷಣವೇ ಆಧುನಿಕ ಶಕ್ತಿ;** ಉತ್ತಮ ಗುಣಮಟ್ಟದ ಹಾಗೂ ವ್ಯವಸ್ಥಿತ ಶಿಕ್ಷಣವನ್ನು ಉಚಿತವಾಗಿ ನೀಡುವ ಯೋಜನೆ.
- **ಆರೋಗ್ಯ ಸಂಪತ್ತು;** ಪ್ರತಿಯೊಂದು ಗ್ರಾಪಂ ವ್ಯಾಪ್ತಿಯಲ್ಲಿ 24x7 ಕಾರ್ಯನಿರ್ವಹಿಸುವ ಸುಸಜ್ಜಿತ ಹೈ–ಟೆಕ್ ಆಸ್ಪತ್ರೆ ನಿರ್ಮಾಣ.
- **ರೈತ ಚೈತನ್ಯ;** ಆಧುನಿಕ ತಂತ್ರಜ್ಞಾನದ ಕೃಷಿ ಪದ್ಧತಿ ಅಳವಡಿಕೆ, ಸರಿಯಾದ ಬೆಳೆ ಶೇಖರಣಾ ವ್ಯವಸ್ಥೆ ಹಾಗೂ ಲಾಭದಾಯಕವಾದ ಮಾರುಕಟ್ಟೆ ವ್ಯವಸ್ಥೆ.
- **ಯುವ ನವ ಮಾರ್ಗ ಹಾಗೂ ಮಹಿಳಾ ಸಬಲೀಕರಣ;** ಯುವಜನತೆ ಹಾಗೂ ಮಹಿಳೆಯರಿಗೆ ಉದ್ಯೋಗ ಪಡೆಯಲು ಅಗತ್ಯ ತರಬೇತಿ ಹಾಗೂ ಮಾರ್ಗದರ್ಶನ.
- **ವಸತಿ ಆಸರೆ;** ವಸತಿ ಇಲ್ಲದವರಿಗೆ ಸರ್ಕಾರದಿಂದಲೇ ವಸತಿ ಕಟ್ಟಿಕೊಡುವ ಯೋಜನೆ.

ಯಾತ್ರೆಗೆ ಅದ್ಧೂರಿ ಸ್ವಾಗತ



ಕ್ಷೇತ್ರ ವ್ಯಾಪ್ತಿಯ ಮಡವಾಡಿ ಗ್ರಾಮಕ್ಕೆ ಪಂಚರತ್ನ ಯಾತ್ರೆಗೆ ಚಾಲನೆ ನೀಡಲು ಆಗಮಿಸಿದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಗೆ ನಿರೀಕ್ಷೆಗೂ ಮೀರಿದ ಸ್ವಾಗತ ದೊರೆಯಿತು. ಶಾಸಕ ಅಶ್ವಿನ್‌ಕುಮಾರ್ ಕುಮಾರಸ್ವಾಮಿಯವರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಪಟಾಕಿ ಸಿಡಿತ ಮುಗಿಲು ಮುಟ್ಟಿತು. ವಿವಿಧ ಕಲಾತಂಡಗಳ ಮೂಲಕ ಕುಮಾರಸ್ವಾಮಿಯವರಿಗೆ ಸ್ವಾಗತ ಕೋರಲಾಯಿತು. ಮಡವಾಡಿಯಿಂದ ಆರಂಭವಾದ ರಥಯಾತ್ರೆ ಕಾವೇರಿಪುರ, ಕುಕ್ಕೂರು ಗ್ರಾಮದ ಮೂಲಕ ತಲಕಾಡು ಪ್ರವೇಶಿಸುತ್ತಿದ್ದಂತೆ ಭರ್ಜರಿ ಸ್ವಾಗತ ದೊರಕಿತು. ಕ್ರೇನ್‌ಗಳ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು. ಬೃಹದಾಕಾರದ ಪೈನಾಪಲ್ ಹಾರ ಹಾಕಿ ಅಭಿಮಾನಿಗಳು ಸಂಭ್ರಮಿಸಿದರು. ಹೆಮ್ಮಿಗೆ ಸೇತುವೆ, ಮಾದಾಪುರ, ಮೂಗೂರು, ತಿ.ನರಸೀಪುರ ಪಟ್ಟಣದಲ್ಲಿ ಕ್ರೇನ್‌ಗಳಲ್ಲೇ ವಿವಿಧ ರೀತಿಯ ಹಾರಗಳನ್ನು ಹಾಕಿ ಸ್ವಾಗತಿಸಲಾಯಿತು. ನಿರೀಕ್ಷೆಗೂ ಮೀರಿದ ಅಭಿಮಾನಿಗಳು, ಕಾರ್ಯಕರ್ತರು ರಥಯಾತ್ರೆಗೆ ಆಗಮಿಸಿದ್ದರಿಂದ ತಲಕಾಡಿನಿಂದ ತಿ.ನರಸೀಪುರದವರೆಗೂ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತು.

ಅಶ್ವಿನ್‌ಗೆ ಮತ್ತೊಮ್ಮೆ ಅವಕಾಶ ನೀಡಿ

ಶಾಸಕ ಅಶ್ವಿನ್‌ಕುಮಾರ್ ತುಂಬಾ ಸರಳ ವ್ಯಕ್ತಿಯಾಗಿದ್ದು, ಎಲ್ಲರ ಕಷ್ಟಕ್ಕೂ ಸ್ಪಂದಿಸುವ ಉತ್ತಮ ಗುಣ ಅವರಲ್ಲಿದೆ. ಯಾವುದೇ ಉದ್ಧಟತನವಿಲ್ಲದೇ ಕ್ಷೇತ್ರದ ಕೆಲಸ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದು, ಇಂತಹ ಶಾಸಕರು ನಿಮಗೆ ಬೇರೆಲ್ಲೂ ಸಿಗುವುದಿಲ್ಲ. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಅವರನ್ನು ಗೆಲ್ಲಿಸುವ ಮೂಲಕ ಅವರಿಗೆ ಮತ್ತೊಮ್ಮೆ ಅವಕಾಶ ಮಾಡಿಕೊಡಿ. **–ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ**

ಯುಗಾದಿಗೆ ಮೊದಲ ಕೈ ಪಟ್ಟಿ ಬಿಡುಗಡೆ



ವಿಜಯಪುರ: ಯುಗಾದಿಗೆ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಲಿದೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಹೇಳಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಸಭೆ ನಡೆಸಲಾಗಿತ್ತು. ಈ ವೇಳೆ 125 ಅಭ್ಯರ್ಥಿಗಳ ಪಟ್ಟಿಯನ್ನು ಅಖೈರುಗೊಳಿಸಲಾಗಿತ್ತು. ಈ ಕುರಿತು ಪ್ರತಿಕ್ರಿಯೆ ನೀಡಿರುವ ಎಂ.ಬಿ.ಪಾಟೀಲ, ಯುಗಾದಿಗೆ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದಿದ್ದಾರೆ.

ಸಿದ್ದರಾಮಯ್ಯ ಸ್ಪರ್ಧೆ ಬಗ್ಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡುವೆ ನಡೆದ ಮಾತುಕತೆ ಬಗ್ಗೆ ಗೊತ್ತಿಲ್ಲ. ಸಿದ್ದರಾಮಯ್ಯ, ಬಾದಾಮಿ, ಕೋಲಾರ ಹಾಗೂ ವರುಣಾ ಕ್ಷೇತ್ರ ಎಲ್ಲಿ ನಿಂತರೂ 40 ಸಾವಿರ ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಂದು ಬೆಂಗಳೂರಲ್ಲಿ ಆಟೋ ಬಂದ್



ಬೆಂಗಳೂರು: ಅನಧಿಕೃತ ರ್‍ಯಾಪಿಡೋ ಬೈಕ್ ಟ್ಯಾಕ್ಸಿ ನಿಷೇಧಕ್ಕೆ ಆಗ್ರಹಿಸಿ ಸೋಮವಾರ ಸಂಪೂರ್ಣ ಆಟೋ ಸಂಚಾರ ಬಂದ್ ಮಾಡಲು ಚಾಲಕರು ನಿರ್ಧರಿಸಿದ್ದಾರೆ. ಭಾನುವಾರ ಮಧ್ಯರಾತ್ರಿ 12ರಿಂದ 24 ಗಂಟೆಗಳ ಕಾಲ ನಗರದಲ್ಲಿ ಆಟೋ ಸಂಚಾರ ಸ್ಥಗಿತಗೊಳ್ಳಲಿದೆ.

ಸೋಮವಾರ ಬೆಳಗ್ಗೆ 11ಕ್ಕೆ ಕಪ್ಪು ಪಟ್ಟಿ ಧರಿಸಿ ಸಿಎಂ ಬೊಮ್ಮಾಯಿಯವರ ರೇಸ್ ಕೋರ್ಸ್ ನಿವಾಸಕ್ಕೆ ಮುತ್ತಿಗೆ ಹಾಕಲು ಚಾಲಕರು ತೀರ್ಮಾನಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ 3 ದಿನಗಳ ಡೆಡ್‌ಲೈನ್ ನೀಡಿ, ಆಟೋ ಚಾಲಕರು ಕಪ್ಪು ಪಟ್ಟಿ ಧರಿಸಿ ಆಕ್ರೋಶ ವ್ಯಕ್ತಪಡಿಸಿದ್ದರು. ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡದ ಹಿನ್ನೆಲೆಯಲ್ಲಿ ಮುಷ್ಕರಕ್ಕೆ ಮುಂದಾಗಿದ್ದಾರೆ. ಬೈಕ್ ಟ್ಯಾಕ್ಸಿಯಿಂದ ನಮಗೆ ಬಾಡಿಗೆ ಸಿಗುತ್ತಿಲ್ಲ. ನಮ್ಮ ಜೀವನಕ್ಕೆ ತೊಂದರೆಯಾಗಿದೆ. ಯೆಲ್ಲೋ ಬೋರ್ಡ್ ಹಾಕಿಕೊಂಡು ಬೈಕ್ ಟ್ಯಾಕ್ಸಿ ಸೇವೆ ನೀಡಲಿ ಎಂದು ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಗರದ 21 ಆಟೋ ಚಾಲಕರ ಸಂಘಟನೆಗಳು ಮುಷ್ಕರಕ್ಕೆ ಬೆಂಬಲ ಸೂಚಿಸಿದ್ದು, 2 ಲಕ್ಷದ 10 ಸಾವಿರ ಆಟೋಗಳ ಸಂಚಾರ ಬಂದ್ ಆಗುವ ಸಾಧ್ಯತೆಯಿದೆ. ಓಲಾ, ಊಬರ್‌ನಲ್ಲೂ ಆಟೋ ಸೇವೆ ಲಭ್ಯವಿರುವುದಿಲ್ಲ. ಆರ್‌ಟಿಓದಿಂದ ರ್‍ಯಾಪಿಡೋ ಬ್ಯಾನ್ ಮಾಡಲು ಸಾರಿಗೆ ಸಚಿವ ಶ್ರೀರಾಮುಲು ವರದಿ ಕೇಳಿದ್ದಾರೆ. ವರದಿ ಕೈ ಸೇರಿದ ತಕ್ಷಣ, ಚುನಾವಣೆಯೊಳಗೆ ಚಾಲಕರಿಗೆ ಸಿಹಿ ಸುದ್ದಿ ಕೊಡುವುದಾಗಿ ಭರವಸೆ ನೀಡಿದ್ದಾರೆ.

ಕ್ಷೇತ್ರ ಆಯ್ಕೆ ಗೊಂದಲ: ಮತ್ತೆ ವರಿಷ್ಠರ ಭೇಟಿಗೆ ನಿರ್ಧಾರ



ಬೆಂಗಳೂರು,ಮಾ.19–ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಲಾರದಿಂದ ಸ್ಪರ್ಧಿಸಬೇಕೇ ಇಲ್ಲವೇ ಮೈಸೂರಿನ ವರುಣಾ ಕ್ಷೇತ್ರದಿಂದ ಸ್ಪರ್ಧಿಸಬೇಕೇ ಅಥವಾ ಎರಡೂ ಕ್ಷೇತ್ರದಿಂದ ಸ್ಪರ್ಧೆಗಿಳಿಯಬೇಕೇ ಎಂಬ ಬಗ್ಗೆ ಮಾಜಿ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವರಿಷ್ಠರ ಸಲಹೆ ಪಡೆಯಲು ನಿರ್ಧರಿಸಿದ್ದಾರೆ.

ಮೂಲಗಳ ಪ್ರಕಾರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂದಿನ ವಾರ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ, ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬ ಬಗ್ಗೆ ಅಂತಿಮ ತೀರ್ಮಾನ ಮಾಡಲಿದ್ದಾರೆ ಎಂದು ಹೇಳಲಾಗಿದೆ. ನಾಳೆ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ರಾಜ್ಯಕ್ಕೆ ಆಗಮಿಸಲಿದ್ದು, ರಾಜ್ಯ ಕಾಂಗ್ರೆಸ್ ಬೆಳಗಾವಿಯಲ್ಲಿ ಆಯೋಜಿಸಿರುವ ▶ 8ನೇ ಪುಟಕ್ಕೆ

ಅಕ್ರಮ ಗಣಿಗಾರಿಕೆ: ಇಡಿಯಿಂದ 5.21 ಕೋಟಿ ಆಸ್ತಿ ಜಪ್ತಿ

ಬೆಂಗಳೂರು, ಮಾ.19– ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಬೆಂಗಳೂರು ವಲಯ ಕಚೇರಿಯು ಮಿನರಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಮತ್ತು ಅದರ ಅಧಿಕಾರಿಗಳಿಗೆ ಸೇರಿದ 5.21 ಕೋಟಿ ರೂಪಾಯಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, ಜಪ್ತಿ ಮಾಡಲಾದ ಆಸ್ತಿಗಳು ಆರೋಪಿಗಳ ಒಡೆತನದ ಆರು ಸ್ಥಿರಾಸ್ತಿಗಳ ರೂಪದಲ್ಲಿವೆ. ವಿಶೇಷ ತನಿಖಾ ತಂಡ ಮತ್ತು ಕರ್ನಾಟಕ ಲೋಕಾಯುಕ್ತ ದಾಖಲಿಸಿದ ಎಫ್‌ಐಆರ್ ಆಧಾರದ ಮೇಲೆ ಇ.ಡಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ತನಿಖೆ ಆರಂಭಿಸಿದೆ.



ಅಪರಿಚಿತ ಸರ್ಕಾರಿ ನೌಕರರು ಮತ್ತು ಇತರ ಅಪರಿಚಿತ ವ್ಯಕ್ತಿಗಳ ಮಿನರಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಅನ್ನು ಗಣಿ ಮತ್ತು ಖನಿಜಗಳ ಅಭಿವೃದ್ಧಿ ನಿಯಂತ್ರಣ ಕಾಯ್ದೆ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆಯ ವಿವಿಧ ವಿಭಾಗಗಳ ಅಡಿಯಲ್ಲಿ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನಗಳ ಆಧಾರದ ಮೇಲೆ ತನಿಖೆ ನಡೆಸಲಾಗುವುದು. ಅಕ್ರಮವಾಗಿ ಗಣಿಗಾರಿಕೆ ಮಾಡಿದ ಕಬ್ಬಿಣದ ಅದಿರಿನ ವ್ಯಾಪಾರಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಪಿಎಂಎಲ್‌ಎ ▶ 8ನೇ ಪುಟಕ್ಕೆ

ಕರ್ನಾಟಕ ಸಂಘ: ಪುಸ್ತಕ ಬಹುಮಾನಕ್ಕೆ ಆಹ್ವಾನ

ಶಿವಮೊಗ್ಗ, ಮಾ. 19– ನಗರದ ಪ್ರತಿಷ್ಠಿತ ಕರ್ನಾಟಕ ಸಂಘವು 2022ನೇ ಸಾಲಿನಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾದ ಕನ್ನಡ ಪುಸ್ತಕಗಳಿಗೆ ಬಹುಮಾನ ನೀಡಲು ಲೇಖಕರಿಂದ ಮತ್ತು ಪ್ರಕಾಶಕರಿಂದ ಕೃತಿಗಳನ್ನು ಆಹ್ವಾನಿಸಿದೆ.

ಕಾದಂಬರಿ (ಕುವೆಂಪು ಬಹುಮಾನ), ಅನುವಾದ (ಎಸ್.ವಿ.ಪರಮೇಶ್ವರ ಭಟ್ಟ), ಮಹಿಳಾ ಸಾಹಿತ್ಯ (ಎಂ.ಕೆ.ಇಂದಿರಾ), ಮುಸ್ಲಿಂ ಬರಹಗಾರರು (ಪಿ.ಲಂಕೇಶ್), ಕವನ ಸಂಕಲನ (ಡಾ.ಜಿ.ಎಸ್. ಶಿವರುದ್ರಪ್ಪ), ಅಂಕಣ ಬರಹಗಾರರು (ಡಾ.ಹಾ.ಮಾ. ನಾಯಕ), ಸಣ್ಣ ಕಥಾ ಸಂಕಲನ (ಡಾ.ಯು.ಆರ್.ಅನಂತಮೂರ್ತಿ), ನಾಟಕ (ಡಾ.ಕೆ.ವಿ.ಸುಬ್ಬಣ್ಣ), ಪ್ರವಾಸ ಸಾಹಿತ್ಯ (ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ), ವಿಜ್ಞಾನ ಸಾಹಿತ್ಯ (ಹಸೂಡಿ ವೆಂಕಟಶಾಸ್ತ್ರಿ), ಮಕ್ಕಳ ಸಾಹಿತ್ಯ (ಡಾ.ನಾ.ಡಿಸೋಜ), ವೈದ್ಯ ಸಾಹಿತ್ಯ (ಡಾ.ಎಚ್.ಡಿ.ಚಂದ್ರಪ್ಪ ಗೌಡ) ಬಹುಮಾನಗಳನ್ನು ನೀಡಲಾಗುತ್ತದೆ. ಸಂಘದಿಂದ ಈ ಹಿಂದೆ ಬಹುಮಾನ ಪಡೆದವರು ಅದೇ ವಿಭಾಗಕ್ಕೆ ಸ್ಪರ್ಧಿಸುವಂತಿಲ್ಲ. ಮರುಮುದ್ರಣಗೊಂಡ ಮತ್ತು ಸಂಪಾದಿತ ಕೃತಿಗಳಿಗೆ ಅವಕಾಶವಿಲ್ಲ.

ಆಸಕ್ತರು ಕೃತಿಯ 4 ಪ್ರತಿಗಳನ್ನು ಕಳಿಸಬೇಕು. ಅಂಕಣ ಬರಹವಾಗಿದ್ದಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದಕ್ಕೆ ದಾಖಲೆ ಕಳಿಸಬೇಕು. ಕೃತಿಗಳೊಂದಿಗೆ ಸ್ವವಿವರ, ವಿಳಾಸ, ಮೊಬೈಲ್ ಫೋನ್ ಸಂಖ್ಯೆ, ಯಾವ ಪ್ರಕಾರಕ್ಕೆ ಅರ್ಜಿ ಎಂಬುದನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದಿರಬೇಕು. ಬಹುಮಾನವು ತಲಾ 10 ಸಾವಿರ ರೂಪಾಯಿ ಹಾಗೂ ಫಲಕ ಒಳಗೊಂಡಿರುತ್ತದೆ. ಕೃತಿಗಳನ್ನು ಏಪ್ರಿಲ್ 15ರೊಳಗೆ ಖುದ್ದಾಗಿ ಇಲ್ಲವೆ ಗೌರವ ಕಾರ್ಯದರ್ಶಿ, ಕರ್ನಾಟಕ ಸಂಘ, ಬಿ.ಎಚ್.ರಸ್ತೆ, ಶಿವಮೊಗ್ಗ – 577 201 ಇಲ್ಲಿಗೆ ಕಳಿಸಬಹುದು. ಮಾಹಿತಿಗೆ 08182–277406 ಇಲ್ಲವೆ 9980159696 ಸಂಪರ್ಕಿಸಬಹುದು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಮೈಸೂರು, ಮಾ. 19– ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಹುಣಸೂರು ರಸ್ತೆಯಲ್ಲಿರುವ ಲಿಂಗದೇವರುಕೊಪ್ಪಲಿನ 'ಜ್ಞಾನ ಸರೋವರ ರಿಟ್ರೀಟ್ ಸೆಂಟರ್'ನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ವೇಳೆ ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್.ತ್ರಿಪುರಾಂತಕ, ಸೋಮಾನಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ.ಬಿ.ಎನ್.ಆಶಾ, ಸಾರ್ವಜನಿಕ ಶಿಕ್ಷಣ ಇಲಾಖೆ ವಿಶ್ರಾಂತ ಉಪ ನಿರ್ದೇಶಕಿ ಮಂಜುಳಾ, ದಕ್ಷಿಣ ಪೂರ್ವ ಏಷಿಯಾ ಕೇಂದ್ರಗಳ ನಿರ್ದೇಶಕಿ ರಾಜಯೋಗಿನಿ ಬಿಕೆ ಮೀರಾಜಿ, ಮೈಸೂರು ಉಪ ವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿಕೆ ಲಕ್ಷ್ಮೀಜಿ, ಬಿಕೆ ಮಂಜುಳ, ಬಿಕೆ ಶಿವಲೀಲ ಹಾಗೂ ಇತರರು ಹಾಜರಿದ್ದರು.

ಪದಾಧಿಕಾರಿಗಳ ನೇಮಕ

ಮೈಸೂರು, ಮಾ. 19– ಮೈಸೂರಿನ ಹೆಬ್ಬಾಳು ಕಾಲೋನಿಯಲ್ಲಿರುವ ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿ ದ್ರಾವಿಡ (ಪೌರಕಾರ್ಮಿಕ) ಯುವಕರ ಅಭಿವೃದ್ಧಿ ಮಹಾ ಸಂಘದ 9ನೇ ಉಪ ಶಾಖೆಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಕಾರ್ಯಾಧ್ಯಕ್ಷರಾಗಿ ಆರ್.ಮಹಾದೇವ, ಕಾರ್ಯದರ್ಶಿಯಾಗಿ ಬಿ.ಚಲುವ, ಸಹಕಾರ್ಯದರ್ಶಿಯಾಗಿ ಮಣಿಕಂಠ, ಖಜಾಂಚಿಯಾಗಿ ಬಸವರಾಜು, ಸಂಚಾಲಕರಾಗಿ ಎಂ.ಹರೀಶ, ಎಂ.ರವಿ, ನಿರ್ದೇಶಕರಾಗಿ ಆರ್.ಚಲುವ, ಆರ್.ಮುರುಗೇಶ್, ಆರ್.ನಟರಾಜ, ಆರ್.ರಮೇಶ, ಆರ್.ಮಂಜು, ಆರ್.ಗಣೇಶ, ಎಂ.ನಟರಾಜ, ಎಸ್.ಚಲುವರಾಜು, ಸದಸ್ಯರಾಗಿ ಬಿ.ರವಿಕುಮಾರ್, ಎಸ್.ಲೋಕೇಶ್, ಆರ್.ಮಹದೇವ, ಎಸ್.ಸುರೇಶ, ಹೆಚ್.ಎಸ್.ಚೇತನ್‌ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.



ಮೈಸೂರು ತಾಲೂಕಿನ ಮೆಲ್ಲಹಳ್ಳಿಯ ಸ.ಹಿ.ಪ್ರಾ. ಶಾಲೆಯ ಶಿಕ್ಷಕಿ ಎನ್.ಅನುಪಮ ಅವರು ಮುಖ್ಯ ಶಿಕ್ಷಕಿಯಾಗಿ ಪದನ್ನೋತಿ ಹೊಂದಿದ ನಿಮಿತ್ತ ಅವರನ್ನು ಅಭಿನಂದಿಸಿ, ಬೀಳ್ಕೊಡಲಾಯಿತು. ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ.ಸತೀಶ್ ಜವರೇಗೌಡ, ಮುಖ್ಯ ಶಿಕ್ಷಕಿ ಕೆ.ವಿ.ಪುಷ್ಪಲತಾ ಇನ್ನಿತರರು ಉಪಸ್ಥಿತರಿದ್ದರು.

ನಿಧನ



ಬಿ.ಕೆ.ವೆಂಕಟನಾರಾಯಣ


ಮೈಸೂರು, ಮಾ.19– ಮೈಸೂರಿನ ಜೆ.ಪಿ.ನಗರ ನಿವಾಸಿ, ನಿವೃತ್ತ ಶಿಕ್ಷಕ ಬಿ.ಕೆ.ವೆಂಕಟನಾರಾಯಣ(68) ಭಾನುವಾರ ಸಂಜೆ ನಿಧನರಾದರು. ಮೃತರು ಪತ್ನಿ ಸುನಂದ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಮಾ.20) ಬೆಳಗ್ಗೆ 10.30ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂಜನಗೂಡು ತಾಲೂಕಿನಲ್ಲಿ ಮುಖ್ಯಶಿಕ್ಷಕರಾಗಿ, ಸಿಆರ್‌ಪಿಯಾಗಿ ಸೇವೆ ಸಲ್ಲಿಸಿದ್ದ ವೆಂಕಟನಾರಾಯಣ ಸಂಸ್ಕೃತಿ ಚಿಂತಕರು ಆಗಿದ್ದರು. ಇವರ ನಿಧನಕ್ಕೆ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾಧ್ಯಕ್ಷ ಮುರಳೀಧರ್, ಬನ್ನೂರು ಕೆ.ರಾಜು ಸಂತಾಪ ಸೂಚಿಸಿದ್ದಾರೆ.

ಕವಿತಾ ಕೃಷ್ಣ




ಮೈಸೂರು, ಮಾ.19– ಮೈಸೂರು ವಿಜಯನಗರದ ಮೆಕ್ಯಾನಿಕ್ ಕೃಷ್ಣಪ್ಪ ಅವರ ಧರ್ಮಪತ್ನಿ ಕವಿತಾ ಕೃಷ್ಣ(62) ಅವರು ಇಂದು ಬೆಳಗ್ಗೆ ನಿಧನರಾದರು. ಕಾಂಗ್ರೆಸ್ ಮಹಿಳಾ ಘಟಕದ ಪ್ರಮುಖರಾಗಿದ್ದ ಇವರು, ಚಾಮುಂಡಿಬೆಟ್ಟ ಟ್ರಸ್ಟ್, ಕರ್ನಾಟಕ ಮಕ್ಕಳು ಸಂಸ್ಕೃತ ವೇದಿಕೆ ಹಾಗೂ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯಲ್ಲೂ ಸೇವೆ ಸಲ್ಲಿಸಿದ್ದರು. ಮೃತರು ಪತಿ ಕೃಷ್ಣಪ್ಪ, ಪುತ್ರರಾದ ರಾಘವೇಂದ್ರ ಪ್ರಸನ್ನ ಹಾಗೂ ಕೆ.ಭರತ್, ಸೊಸೆಯಂದಿರಾದ ಕೆ.ಜಿ.ಚೈತ್ರ, ಎಂ.ವಿ.ಪ್ರೀತಿ, ಮೊಮ್ಮಕ್ಕಳಾದ ಶೌರ್ಯ, ಆರ್ಯನ್, ಈಶಾನ್, ಶಿನ್ಯನ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನ್ಯೂಜಿಲೆಂಡ್‌ನಲ್ಲಿ ನೆಲೆಸಿರುವ ಪುತ್ರ ರಾಘವೇಂದ್ರ ಆಗಮಿಸಿದ ಬಳಿಕ ಮಂಗಳವಾರ(ಮಾ.21) ಮಧ್ಯಾಹ್ನ 12.30ಕ್ಕೆ ಚಾಮುಂಡಿಬೆಟ್ಟ ತಪ್ಪಲಿನಲ್ಲಿರುವ ಸುಡುವ ಸ್ಮಶಾನದಲ್ಲಿ ಕವಿತಾ ಕೃಷ್ಣ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಚೆಂದಿರ ಜಿ.ಪೆಮ್ಮಯ್ಯ


ಮೈಸೂರಿನ ಹೂಟಗಳ್ಳಿ ನಿವಾಸಿ ಚೆಂದಿರ ಜಿ.ಪೆಮ್ಮಯ್ಯ(69) ಅವರು ಇಂದು ಮುಂಜಾನೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಸ್ನೇಹಿತರು, ಬಂಧು–ಬಳಗವನ್ನು ಅಗಲಿದ್ದಾರೆ. ವಿಜಯನಗರ ನಾಲ್ಕನೇ ಹಂತದ ಮುಕ್ತಿಧಾಮದಲ್ಲಿ ಮಧ್ಯಾಹ್ನ ಮೃತರ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖಮ್ರುನ್ನೀಸಾ



ಮೈಸೂರಿನ ಶಕ್ತಿನಗರದ ಲೇಟ್ ಕೆ.ಅಬ್ದುಲ್ ಜಲೀಲ್ ಅವರ ಪತ್ನಿ ಖಮ್ರುನ್ನೀಸಾ(74) ಅವರು ಇಂದು ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರರು, ಪುತ್ರಿ, ಅಳಿಯ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶಕ್ತಿನಗರದ ಮೊಹಮ್ಮದೀಯ ಮಸೀದಿಯಲ್ಲಿ ಮಧ್ಯಾಹ್ನ ಪ್ರಾರ್ಥನೆ, ನಮಾಜ್–ಇ–ಜನಾಜ್ ನಂತರ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಹೊನ್ನಪ್ಪ ಜಿ.ನಾಯಕ

ಮೈಸೂರಿನ ರಾಮಕೃಷ್ಣನಗರ ನಿವಾಸಿ ಹೊನ್ನಪ್ಪ ಜಿ.ನಾಯಕ (73) ಅವರು ಶನಿವಾರ ನಿಧನರಾದರು. ಮೃತರು ಪತ್ನಿ ವಿಜಯ, ಪುತ್ರ ಮಂಜುನಾಥ್, ಪುತ್ರಿ ಸೌಮ್ಯಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಮೈಸೂರು ಜಿಲ್ಲಾ ಘಟಕ ಉದ್ಘಾಟನೆ

ಒಕ್ಕಲಿಗ ಸಮುದಾಯದ ಮೀಸಲಾತಿ ಹೆಚ್ಚಿಸಿ

ಸ್ಫಟಿಕಪುರಿ ಮಹಾಸಂಸ್ಥಾನ ಮಠಾಧೀಶ ಶ್ರೀ ನಂಜಾವಧೂತ ಮಹಾ ಸ್ವಾಮೀಜಿ ಆಗ್ರಹ

ಮೈಸೂರು, ಮಾ.19 (ಆರ್‌ಕೆ)– ಒಕ್ಕಲಿಗ ಸಮುದಾಯ ಮೀಸಲಾತಿ ಹೆಚ್ಚಿಸುವಂತೆ ಸರ್ಕಾರಗಳಿಗೆ ಒತ್ತಡ ಹೇರಬೇಕೆಂದು ಮೂರು ಪ್ರಮುಖ ಪಕ್ಷಗಳ ಸಮಾಜ ಮುಖಂಡರಿಗೆ ಶಿರಾ ತಾಲೂಕಿನ ಸ್ಫಟಿಕಪುರಿ ಮಹಾಸಂಸ್ಥಾನ ಮಠಾಧೀಶರಾದ ಶ್ರೀ ನಂಜಾವಧೂತ ಮಹಾಸ್ವಾಮೀಜಿ ಅವರು ಇಂದಿಲ್ಲಿ ಸಲಹೆ ನೀಡಿದ್ದಾರೆ.

ಮೈಸೂರಿನ ಜಯನಗರದ ಹೊಸ ಕೋರ್ಟ್ ಮುಂಭಾಗದ ನೇಗಿಲಯೋಗಿ ಸೇವಾ ಸಭಾ ಭವನದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾ ಘಟಕ ಉದ್ಘಾಟಿಸಿದ ಬಳಿಕ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಒಕ್ಕಲಿಗ ಸಮುದಾಯದ ಪ್ರಮುಖರಿಗೆ 'ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮಿ ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡುತ್ತಿದ್ದರು. ಇದೇ ಸಂದರ್ಭ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದ ಶ್ರೀಗಳು, ನೂತನ ಜಿಲ್ಲಾ ಸಂಘದ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ನೀಡಿದರು.

ರಾಜ್ಯದಲ್ಲಿ ಅಧಿಕ ಸಂಖ್ಯೆಯಲ್ಲಿರುವ ಸಮುದಾಯದಲ್ಲೂ ಬಡವರು, ವಂಚಿತರಿದ್ದಾರೆ. ಎಲ್ಲಾ ಸಮುದಾಯಗಳ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕೆಂಬ ಕೂಗು ಹಲವು ವರ್ಷಗಳಿಂದಿದ್ದರೂ, ಯಾವುದೇ ಸರ್ಕಾರ ಈವರೆಗೆ ಅನುಷ್ಠಾನಗೊಳಿಸಿಲ್ಲ ಎಂದ ಶ್ರೀಗಳು, ಈಗಲಾದರೂ, ಶೇ.16ರಷ್ಟು ಮೀಸಲಾತಿ ನೀಡಬೇಕೆಂದು ಪ್ರಮುಖ ಮೂರೂ ಪಕ್ಷಗಳ ಒಕ್ಕಲಿಗ ಮುಖಂಡರು ತಮ್ಮ ಅಧಿನಾಯಕರ ಮೇಲೆ ಒತ್ತಡ ಹೇರಬೇಕೆಂದು ಸಮಾರಂಭದಲ್ಲಿ ಉಪಸ್ಥಿತರಿದ್ದ ಬಿಜೆಪಿಯ ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ, ಜೆಡಿಎಸ್‌ನ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರಿಗೆ ಸಲಹೆ ನೀಡಿದರು.



ಸಮಾರಂಭದಲ್ಲಿ ಒಕ್ಕಲಿಗ ಸಮುದಾಯದ ಹಲವು ಸಾಧಕರಿಗೆ ಡಾ. ಬಾಲಗಂಗಾಧರನಾಥಸ್ವಾಮಿ ಸೇವಾ ರತ್ನ ಪ್ರಶಸ್ತಿ ನೀಡಿ, ಆತ್ಮೀಯವಾಗಿ ಗೌರವಿಸಲಾಯಿತು.

ಈ ಸಂದರ್ಭ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಬೆಂಗಳೂರು ನಿರ್ಮಾತೃ ಕೆಂಪೇಗೌಡ, ವಿಧಾನಸೌಧ ನಿರ್ಮಿಸಿದ ಕೆಂಗಲ್ ಹನುಮಂತಯ್ಯ, ಮೈಸೂರು–ಬೆಂಗಳೂರು ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ವಿಸ್ತರಿಸಿದ ಎಸ್.ಎಂ.ಕೃಷ್ಣ, ರಾಜ್ಯದ ಅಣೆಕಟ್ಟೆ, ನೀರಾವರಿ ಯೋಜನೆಗಳ ಜಾರಿಗೊಳಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ನಾಡಿಗೆ ನೀಡಿದ ಕೊಡುಗೆಯನ್ನು ಮರೆಯಲಾಗದು ಎಂದು ನುಡಿದರು.

ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಡಾ. ಅಂಜನಪ್ಪ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಖ್ಯಾತ ಮನೋವೈದ್ಯ ಡಾ. ಬಿ.ಎನ್. ರವೀಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸುಯೋಗ ಆಸ್ಪತ್ರೆ ಸಂಸ್ಥಾಪಕ ಡಾ.ಎಸ್.ಪಿ.ಯೋಗಣ್ಣ, ಬಿಲ್ಡರ್ ಎಂ.ಎಲ್.ನಾಗೇಶಮೂರ್ತಿ, ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಸುರೇಶ್ ಗೌಡ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು ಸೇರಿದಂತೆ ಒಕ್ಕಲಿಗ ಸಮುದಾಯದ ಹಲವು ಸಾಧಕರಿಗೆ ಡಾ.ಬಾಲಗಂಗಾಧರನಾಥ ಸ್ವಾಮಿ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ನಾಗಣ್ಣ ಬಾಣಸವಾಡಿ ಗೌರವಾಧ್ಯಕ್ಷ ಸಿ.ಜಿ. ಗಂಗಾಧರ್, ಉಪಾಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಮಹಿಳಾ ಅಧ್ಯಕ್ಷೆ ಸುಮಿತ್ರ ರಮೇಶ್, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಲಿಂಗದೇವರು ಕೊಪ್ಪಲಲ್ಲಿ ಕುಸ್ತಿ ಪಂದ್ಯಾವಳಿ



ಮೈಸೂರು ತಾಲೂಕಿನ ಲಿಂಗದೇವರ ಕೊಪ್ಪಲಿನಲ್ಲಿ ಆಯೋಜಿಸಿದ್ದ ಕುಸ್ತಿ ಪಂದ್ಯಾವಳಿಯನ್ನು ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ ಉದ್ಘಾಟಿಸಿದರು.

ಮೈಸೂರು, ಮಾ.19(ಎಂಟಿವೈ)– ಮೈಸೂರು ತಾಲೂಕಿನ ಲಿಂಗದೇವರ ಕೊಪ್ಪಲಿನಲ್ಲಿ ಶ್ರೀ ಜೋಡಿ ಮಾರಮ್ಮ ದೇವರ ಹಬ್ಬದ ಅಂಗವಾಗಿ ನಡೆದ ಕುಸ್ತಿ ಪಂದ್ಯಾವಳಿ ಯಶಸ್ವಿಯಾಗಿ ನೆರವೇರಿತು.

ಕುಸ್ತಿ ಪಂದ್ಯಾವಳಿಯನ್ನು ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ ಉದ್ಘಾಟಿಸಿದರು. ಕೊಲ್ಲಾಪುರದ ಪೈ.ಇಂದ್ರಜಿತ್ ಮಗ್ದವ್ ಮತ್ತು ಪೂನಾದ ಚಂದಗೇರಿ ಪೈ. ಪವನ್ ಅವರು ಮಾರ್ಪಿಟ್ ಕುಸ್ತಿಯಲ್ಲಿ ಪೈ.ಇಂದ್ರಜೀತ್ ಮಗ್ದವ್ ಜಯ ಗಳಿಸಿದರು. ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಪೈಲ್ವಾನರು ಸೆಣೆಸಾಡಿದರು. ಪಂದ್ಯಾವಳಿ ಒಟ್ಟು 57 ಜೊತೆ ಕಾಟಾ ಕುಸ್ತಿಗಳು ನಡೆದವು. ಇದರಲ್ಲಿ ಎರಡು ಜೊತೆ ಮಹಿಳಾ ಕುಸ್ತಿಗಳು ನಡೆದವು. ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯರಾದ ಅರುಣ್‌ಕುಮಾರ್, ಬೀರಿಹುಂಡಿ ಬಸವಣ್ಣ, ಮುಖಂಡರಾದ ಹಳೆಕಾಮನಕೊಪ್ಪಲು ಕರೀಗೌಡ, ಸಿ.ಎಂ. ಸಿದ್ದರಾಮೇಗೌಡ, ಮಹಾದೇವ್, ಸೆಂಟ್ರಿಂಗ್ ರವಿಕುಮಾರ್, ನಾಗೇಶ್, ಶಿವೇಗೌಡ, ಕರಕನಹಳ್ಳಿ ಮಂಜು, ನಾಗವಾಲ ನರೇಂದ್ರ, ಹರೀಶ ಮೊಗ್ಗಣ್ಣ, ಕೆಂಪನಾಯ್ಕ, ಉದಯ್, ಗಾಂಧಿಕುಮಾರ್, ಹೊಸಳ್ಳಿ ಶಿವಣ್ಣ, ನಿವೃತ್ತ ಪೈಲ್ವಾನರುಗಳು ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು.

ಯುಗಾದಿ ಪ್ರಯುಕ್ತ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಭಾರೀ ರಿಯಾಯ್ತಿ ಮಾರಾಟ



ಮೈಸೂರು,ಮಾ.19–ಯುಗಾದಿ ಪ್ರಯುಕ್ತ ಮೈಸೂರಿನ ಬಿ.ಎನ್.ರಸ್ತೆಯ ಪೈ ವಿಸ್ತಾ ಹೋಟೆಲ್ ಸಭಾಂಗಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಗುಣಮಟ್ಟದ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಪ್ರದರ್ಶನ ಮತ್ತು ಭಾರೀ ರಿಯಾಯ್ತಿ ಮಾರಾಟವನ್ನು ಮಾ.22ರವರೆಗೆ ಏರ್ಪಡಿಸಲಾಗಿದೆ. ಮಹಿಳೆಯರು, ಪುರುಷರು, ಮಕ್ಕಳ ಸಾವಿರಾರು ವಿಧದ ರೆಡಿಮೇಡ್ ಗಾರ್ಮೆಂಟ್ಸ್‌ಗಳ ಬೆಲೆಯಲ್ಲಿ ಭಾರೀ ರಿಯಾಯ್ತಿ ಪಡೆಯಬಹುದು. ಪ್ಯಾಂಟ್, ಟಿ–ಶರ್ಟ್, ಲೋವರ್, ಟಾಪ್, ಕುರ್ತೀಸ್, ನೈಟಿ 150ರಿಂದ 300 ರೂ., ಕುರ್ತೀಸ್‌ಗಳು 499ರಿಂಧ 999ರೂ. ಬೆಲೆ ಇದೆ. 11,999 ರೂ. ಬೆಲೆಯ ಬಿಗ್ ಬ್ರಾಂಡ್ ಗಾರ್ಮೆಂಟ್ಸ್‌ಗಳು 1,999 ರೂ.ಗೆ ಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪರಿಸರ ಪ್ರೇಮಿಗಳಿಂದ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಅಭಿಯಾನ



ಮೈಸೂರು, ಮಾ.19 (ಎಂಟಿವೈ)– ಚಾಮುಂಡಿಬೆಟ್ಟದಲ್ಲಿ ಭಾನುವಾರ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳೊಂದಿಗೆ 70ಕ್ಕೂ ಹೆಚ್ಚು ಪರಿಸರ ಪ್ರೇಮಿಗಳು ಪಾಲ್ಗೊಂಡು ಅಪಾರ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ ಪರಿಸರ ಪ್ರಜ್ಞೆ ಪ್ರದರ್ಶಿಸಿದರು.

ಅರಣ್ಯ ಇಲಾಖೆ ಮಾರ್ಚ್ 3ರಿಂದ 21ರವರೆಗೆ ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ವಲಯವಾಗಿಸಲು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ ಅಭಿಯಾನ ನಡೆಸುತ್ತಿದ್ದು, ಪ್ರತಿದಿನವೂ ಚಾಮುಂಡಿಬೆಟ್ಟದ ಮುಖ್ಯ ರಸ್ತೆಗಳ ಬದಿಯಲ್ಲಿ ನಿರಂತರವಾಗಿ ಪರಿಸರ ಮಾರಕ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸುವ ಕಾರ್ಯಾಚರಣೆ ನಡೆಸುತ್ತಿದೆ. ಭಾನುವಾರ ಬೆಳಗ್ಗೆ 7.30ರಿಂದ 9.30ರವರೆಗೆ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಚಾಮುಂಡಿಬೆಟ್ಟ ಉಳಿಸಿ ಸಮಿತಿ ಹಾಗೂ ಪರಿಸರ ಬಳಗದ 70ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಚಾಮುಂಡಿಬೆಟ್ಟದ ವಿವಿಧ ರಸ್ತೆಗಳ ಬದಿಯಲ್ಲಿ ಪ್ರವಾಸಿಗರು, ವಾಹನ ಸವಾರರು ಬೀಸಾಡಿ ಹೋಗಿದ್ದ ತ್ಯಾಜ್ಯ ಸಂಗ್ರಹಿಸಿದರು.

ಕಳೆದ ಎರಡು ವಾರದಿಂದ ಸತತವಾಗಿ ತ್ಯಾಜ್ಯ ಸಂಗ್ರಹ ಅಭಿಯಾನ ನಡೆಯುತ್ತಿದ್ದರೂ ಭಾನುವಾರ ನಡೆದ ಅಭಿಯಾನದಲ್ಲಿ ಸಾಕಷ್ಟು ಪ್ರಮಾಣದ ತ್ಯಾಜ್ಯ ಸಂಗ್ರಹಿಸಲಾಯಿತು. ಸ್ವಚ್ಛತಾ ಅಭಿಯಾನದಲ್ಲಿ ಆರ್‌ಎಫ್‌ಓ ಧನ್ಯಶ್ರೀ, ಡಿಆರ್‌ಎಫ್‌ಓ ಸತೀಶ್ ಕುಮಾರ್, ಅರಣ್ಯ ಇಲಾಖೆ ಸಿಬ್ಬಂದಿಗಳಾದ ಅಪ್ಪಣ್ಣ, ಗಗನ್, ಸತೀಶ್, ಚಾಮುಂಡಿಬೆಟ್ಟ ಉಳಿಸಿ ಸಮಿತಿಯ ಪರಶುರಾಮೇಗೌಡ, ಲೀಲಾ ಶಿವಕುಮಾರ್, ಪ್ರೊ. ಯು.ಎನ್.ರವಿಕುಮಾರ್, ಅನುಪಮಾ, ಪೂರ್ಣಿಮಾ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ನಾಳೆ ಅನ್ನಸಂತರ್ಪಣೆ, ಹುಲಿವಾಹನ ಮೆರವಣಿಗೆ

ಮೈಸೂರು,ಮಾ.19–ಮೈಸೂರಿನ ಕನ್ನೇಗೌಡನ ಕೊಪ್ಪಲು ಹೊಸಬೀದಿಯಲ್ಲಿರುವ ಶ್ರೀ ಏಳು ಮಲೆಮಹದೇಶ್ವರಸ್ವಾಮಿ ಸಂಘದ ವತಿಯಿಂದ ಮಾ.21ರಂದು ಮಧ್ಯಾಹ್ನ 12 ಗಂಟೆಗೆ ಕೆ.ಜಿ.ಕೊಪ್ಪಲು ಮುಖ್ಯ ರಸ್ತೆಯಲ್ಲಿರುವ ಶ್ರೀ ಮಲೆಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಅಂದು ಸಂಜೆ 7 ಗಂಟೆಗೆ ಹುಲಿ ವಾಹನ ಮೆರವಣಿಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನೇಮಕ



ಮೈಸೂರು, ಮಾ.19– ಮೈಸೂರು ನಗರ ಜಿಲ್ಲಾ ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ವಿಭಾಗದ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷರನ್ನಾಗಿ ಎನ್.ಆರ್. ಮೊಹಲ್ಲಾ (ಗಣೇಶ ನಗರ)ದ ಎಂ. ವನಜಾಕ್ಷಿ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.3.2023 ಸೋಮವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜನಿ" ಭರತ ಭೂಮಿಯನ್ನು ಅಳಿದ ಸಾಹಸಗಾತೆ, ಪ್ರಸ್ತುತಿ– ಡಾ. ಗಜಾನನ ಶರ್ಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಕೆ.ಬಿ. ಸುನೀತಾ ಆಚಾರ್ಯ, ನಿತಿನ್ ರಾಜಾರಾಂ ಶಾಸ್ತ್ರಿ, ಜಿ. ಪುಷ್ಪಲತಾ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 7.25 ಭಾವಗೀತೆ: ಪಂಚಮ್ ಹಳಿಬಂಡಿ, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಲಯ ಸಂಭ್ರಮ– ಮೋರ್ಚಿಂಗ್ ವಾದ್ಯದ ಇತಿಹಾಸ, ಬೆಳವಣಿಗೆ ಹಾಗೂ ಪ್ರಾಮುಖ್ಯತೆ ತಿಳಿಸಿಕೊಡುತ್ತಾರೆ ವಿದ್ವಾನ್ ವಿ.ಎಸ್. ರಮೇಶ್, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ.

ಮಧ್ಯಾಹ್ನ: 12.30 ದೇವರನಾಮ: ಸುಚೇತನ್ ರಂಗಸ್ವಾಮಿ, ಪದ್ಮಾ ಅಡಿಗ, 12.45 ನಮ್ಮ ಆರೋಗ್ಯ: ಬಾಯಿಯ ಆರೋಗ್ಯ ರಕ್ಷಣೆಗೆ ಅನುಸರಿಸಬೇಕಾದ ಕ್ರಮಗಳು ಕುರಿತು ಡಾ. ಸ್ಮಿತಾ ಜೆ.ಡಿ. ಅವರೊಂದಿಗೆ ಮಾತುಕತೆ, 1.20 ಭಾವಗೀತೆ– ಸಿಂಚನಾ ಎನ್., 3.00 ಜಿ. ಉಷಾ– ಹಾಡುಗಾರಿಕೆ.

ಸಂಜೆ: 6.50 ಕೃಷಿರಂಗ: 'ಕಿಸಾನ್ ವಾಣಿ' ಸಾವಯವ ಹಾಗೂ ರಾಸಾಯನಿಕ ಮುಕ್ತ ಬೆಲ್ಲದ ತಯಾರಿಕೆಯಲ್ಲಿ ತೊಡಗಿರುವ ಸಿ. ಚೆಲುವರಾಜು ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎಸ್.ಸಿ.ಹೇಮಕುಮಾರ್. **ರಾತ್ರಿ** 9.30 ಹಳ್ಳಿ ಹಾಡು: ಯಡನಹಳ್ಳಿ ಮತ್ತು ದೊಡ್ಡಮ್ಮನಗುಡಿಯ ಸಿದ್ದಮ್ಮ ಮತ್ತು ಸಂಗಡಿಗರು, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು.

■ **ನಮ್ಮ ಮೈಸೂರು ಫೌಂಡೇಷನ್:** ಪಾರಂಪರಿಕ ಶೈಲಿ ಶೌಚಾಲಯ ಉದ್ಘಾಟನೆ ಕಾರ್ಯಕ್ರಮ, ಉದ್ಘಾಟನೆ: ಮೇಯರ್ ಶಿವಕುಮಾರ್, ಉಪಸ್ಥಿತರು: ಶಾಸಕ ಎಲ್.ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಉಪ ಮೇಯರ್ ಡಾ.ಜಿ.ರೂಪಾ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಪಾಲಿಕೆ ಸದಸ್ಯರಾದ ಎಂ.ಡಿ.ನಾಗರಾಜು, ಮಾಜಿ ಮೇಯರ್ ಅಯೂಬ್‌ಖಾನ್, ಅಶ್ವಿನಿ ಅನಂತ್, ಸ್ಥಳ: ಸಿ.ವಿ.ರಂಗಾಚಾರ್ಲು ಸ್ಮಾರಕ ಭವನ(ಪುರಭವನ) ಆವರಣ, ಸಮಯ: ಬೆಳಗ್ಗೆ 11ಕ್ಕೆ

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಮೈಸೂರು:** 5ನೇ ಘಟಿಕೋತ್ಸವ, ಪದವಿ ಪ್ರಮಾಣ ಪತ್ರ ಹಾಗೂ ಪದಕ ಪ್ರದಾನ: ಜೆಎಸ್‌ಎಸ್ ವಿವಿಯ ಕುಲಾಧಿಪತಿಗಳೂ ಆದ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಘಟಿಕೋತ್ಸವ ಭಾಷಣ: ಇಶಾ ಫೌಂಡೇಷನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ, ಪ್ರತಿಜ್ಞಾವಿಧಿ ಬೋಧನೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್‌ಸೂರಮಠ, ಸ್ಥಳ: ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಬನ್ನಿಮಂಟಪ, ಸಮಯ: ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಫಣೀಂದ್ರಾಚಾರ್ಯ ಅವರಿಂದ ಭಗವದ್ಗೀತೆಯ 6ನೇ ಅಧ್ಯಾಯ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮೀಪುರಂ, ಸಮಯ: ಸಂಜೆ 5ಕ್ಕೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣ

ಶೇ.50 ರಿಯಾಯಿತಿಯಲ್ಲಿ 13.32 ಕೋಟಿ ರೂ. ಸಂಗ್ರಹ

ಮೈಸೂರಲ್ಲಿ 6,34,872 ಪ್ರಕರಣ ಇತ್ಯರ್ಥ

ಮೈಸೂರು, ಮಾ.19(ಆರ್‌ಕೆ)– ಮೈಸೂರು ನಗರ ವ್ಯಾಪ್ತಿಯಲ್ಲಿ ಬಾಕಿ ಉಳಿದಿದ್ದ ಸಂಚಾರ ನಿಯಮ ಉಲ್ಲಂಘನೆಯ 25,51,048 ಪ್ರಕರಣಗಳಲ್ಲಿ ಸರ್ಕಾರ ಶೇ.50ರಷ್ಟು ರಿಯಾಯಿತಿ ನೀಡಿದ ಹಿನ್ನೆಲೆಯಲ್ಲಿ ಮಾರ್ಚ್ 18ರ ಕಡೇ ದಿನದವರೆಗೆ ಒಟ್ಟು 6,34,872 ಪ್ರಕರಣಗಳು ಇತ್ಯರ್ಥವಾಗಿವೆ. ಆ ಪ್ರಕರಣಗಳಲ್ಲಿ ಬಾಕಿ ಉಳಿದಿದ್ದ 127 ಕೋಟಿ, 82 ಲಕ್ಷ 93 ಸಾವಿರದ 700 ರೂ. ದಂಡದ ಪೈಕಿ ವಾಹನ ಮಾಲೀಕರು 13 ಕೋಟಿ, 32 ಲಕ್ಷದ 51 ಸಾವಿರದ 450 ರೂ.ಗಳ ದಂಡದ ಹಣವನ್ನು ಪಾವತಿಸಿದ್ದಾರೆ. ಅದರನ್ವಯ ಒಟ್ಟು 19,16,176 ಇ–ಚಲನ್ ಪ್ರಕರಣಗಳು ಬಾಕಿ ಉಳಿದಿದ್ದು, 114,50,42,250 ರೂ.ಗಳ ದಂಡದ ಹಣವನ್ನು ಪಾವತಿಸಬೇಕಾಗಿದೆ.

ಫೆಬ್ರವರಿ 3 ರಿಂದ 11ರವರೆಗೆ ಮೊದಲ ಬಾರಿ ಶೇ.50ರಷ್ಟು ರಿಯಾಯಿತಿ ನೀಡಿದ್ದ ವೇಳೆ 4,63,167 ಪ್ರಕರಣಗಳಲ್ಲಿ ಒಟ್ಟು 9,49,10,300 ರೂ. ಹಣವನ್ನು ಪಾವತಿಸಿದ್ದ ವಾಹನ ಮಾಲೀಕರು, 2ನೇ ಸಲವೂ ಈ ರಿಯಾಯಿತಿಯನ್ನು ವಿಸ್ತರಿಸಿದಾಗ ಮಾರ್ಚ್ 4 ರಿಂದ 18ರವರೆಗೆ 1,71,705 ಪ್ರಕರಣಗಳಲ್ಲಿ 3,83,41,150 ರೂ. ದಂಡ ರೂಪದ ಹಣ ಪಾವತಿಸಿದ್ದಾರೆ.

ಈ ಎರಡೂ ಅವಕಾಶಗಳನ್ನು ನೀಡಿದ ನಂತರವೂ, ಇನ್ನೂ 19,16,176 ಪ್ರಕರಣಗಳಲ್ಲಿ ಒಟ್ಟು 114,50,42,250 ರೂ.ಗಳ ದಂಡ ರೂಪದ ಹಣ ವಸೂಲಾಗಬೇಕಿದೆ. ನಿನ್ನೆ (ಮಾ.18) ರಿಯಾಯಿತಿಗೆ ಕಡೇ ದಿನ 44,222 ಇ–ಚಲನ್ ಪ್ರಕರಣಗಳಲ್ಲಿ 1,32,88,600 ರೂ.ಗಳನ್ನು ಪಾವತಿಸಿ ರಶೀದಿ ಪಡೆದಿದ್ದಾರೆ. ಬಾಕಿ ಉಳಿದಿದ್ದ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥಗೊಳಿಸಲೆಂದು ಸರ್ಕಾರವು ಶೇ.50ರಷ್ಟು ರಿಯಾಯಿತಿ ಘೋಷಿಸಿದ್ದನ್ನು ಬಹಳಷ್ಟು ಮಂದಿ ಸದುಪಯೋಗಪಡಿಸಿಕೊಂಡಿದ್ದಾರೆ ಎಂದು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಅವಕಾಶ ನೀಡಿ ಅವಧಿಯಲ್ಲಿ ದಂಡ ಪಾವತಿಸಲಾಗದ ಹಲವು ಮಂದಿ ಮತ್ತೊಂದು ಬಾರಿ ರಿಯಾಯಿತಿ ನೀಡಿದರೆ ತಮಗೆ ಪ್ರಕರಣ ಇತ್ಯರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಂಡ್ಯದಲ್ಲಿ ಡಿಆರ್‌ಎಂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ



ಮಂಡ್ಯದ ಗಾಂಧಿನಗರದ ನೂರಡಿ ರಸ್ತೆಯಲ್ಲಿ ನಿರ್ಮಿಸಿರುವ ಡಿಆರ್‌ಎಂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯನ್ನು ಮಂಡ್ಯ ಶಾಸಕ ಎಂ.ಶ್ರೀನಿವಾಸ್ ಕಳೆದ ಶುಕ್ರವಾರ ಉದ್ಘಾಟಿಸಿದರು. ಆಸ್ಪತ್ರೆ ನಿರ್ದೇಶಕರಾದ ಡಾ.ಬಿ.ಎಚ್.ಮಂಜುನಾಥ್ ಮತ್ತು ಡಿ.ಟಿ.ಪ್ರಕಾಶ್, ಡಾ.ಗೌತಮ್, ಡಾ.ಎಚ್.ಎಸ್.ರವಿ, ಡಾ.ಪ್ರಶಾಂತ್, ಡಾ.ಸಂತೋಷ್, ಡಾ.ಕಿರಣ್, ಡಾ.ಅರವಿಂದ್, ಡಾ.ಪ್ರಸಾದ್, ಘಟಕದ ಮುಖ್ಯಸ್ಥ ಚಿದು, ಪ್ರಧಾನ ವ್ಯವಸ್ಥಾಪಕ ಲೋಕೇಶ್, ಆಡಳಿತಾಧಿಕಾರಿ ಲಾವಣ್ಯ, ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

'ಟಿಪ್ಪು ನಿಜಕನಸುಗಳು' ನಾಟಕದ 50ನೇ ಪ್ರದರ್ಶನ

ಮೈಸೂರು ರಂಗಾಯಣದಲ್ಲಿ ಸಂಭ್ರಮಾಚರಣೆ

ಮೈಸೂರು,ಮಾ.19(ಪಿಎಂ)– 'ಟಿಪ್ಪು ನಿಜಕನಸುಗಳು' ನಾಟಕದ ಹೌಸ್‌ಫುಲ್ ಪ್ರದರ್ಶನ ಮುಂದುವರೆದಿದ್ದು, ಭಾನುವಾರ ಮೈಸೂರು ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ರಂಗಾಯಣದ 'ಟಿಪ್ಪು ನಿಜಕನಸುಗಳು–ಸತ್ಯದ ಅನಾವರಣ' ನಾಟಕದ ಸುವರ್ಣ ಪ್ರದರ್ಶನದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ನಾಟಕದ 50ನೇ ಪ್ರದರ್ಶನದ ಎಲ್ಲಾ ಟಿಕೆಟ್‌ಗಳು ಬಿಕರಿಯಾಗಿವೆ ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಟಿಪ್ಪು ನಿಜಕನಸುಗಳು ನಾಟಕ 20 ಜಿಲ್ಲೆಗಳಲ್ಲಿ ಪ್ರದರ್ಶನ ಕಂಡಿದ್ದು, ಎಲ್ಲೆಡೆಯೂ ಟಿಕೆಟ್ ಸೋಲ್ಡ್‌ಔಟ್ ಆಗಿದೆ. 45 ಸಾವಿರ ಜನ ಈ ನಾಟಕ ನೋಡಿದ್ದಾರೆ. ನನ್ನ ಈ ನಾಟಕದ ಕೃತಿ 12 ಆವೃತ್ತಿ ಮುದ್ರಣಗೊಂಡಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಟಿಪ್ಪು ಜಯಂತಿ ಮಾಡದೇ ಹೋಗಿದ್ದರೆ, ಕೊಡಗಿನಲ್ಲಿ ಪ್ರತಿಭಟನೆಗಳು ನಡೆಯುತ್ತಿರಲಿಲ್ಲ. ಕುಟ್ಟಪ್ಪ ಸಾವನ್ನಪ್ಪುತ್ತಿರಲಿಲ್ಲ. ಜೊತೆಗೆ 2018ರಲ್ಲಿ ಸಿದ್ದರಾಮಯ್ಯನವರು ಚಾಮುಂಡೇಶ್ವರಿಯಲ್ಲಿ ಸೋಲುತ್ತಿರಲಿಲ್ಲ. ಟಿಪ್ಪು ಚಾಮುಂಡೇಶ್ವರಿಯ ಅನೇಕ ದೇವಾಲಯಗಳನ್ನು ಕೆಡವಿದ್ದರಿಂದ ಸಿದ್ದರಾಮಯ್ಯ ಸೋತರು. ಟಿಪ್ಪು ಎಂದರೆ ಸಿದ್ದರಾಮಯ್ಯ ಅಂತರಂಗದಲ್ಲಿ ಗಡಗಡ ನಡುಗುತ್ತಾರೆ. ಹಾಗಾಗಿ ಈ ನಾಟಕದ ಯಶಸ್ಸಿನ ಎಲ್ಲಾ ಕ್ರೆಡಿಟ್ ಸಿದ್ದರಾಮಯ್ಯನವರಿಗೆ ಸಲ್ಲಬೇಕು ಎಂದರು.

ನನ್ನ ಸರ್ಕಾರ, ಸಚಿವರಿಗೆ ವಿಶೇಷ ಅನ್ನಿಸಲಿಲ್ಲ: ಕೆಲವು ನಾಟಕಗಳ ಸಂಬಂಧ 'ವಿಶೇಷ ನಾಟಕ' ಎಂದು ಸರ್ಕಾರದ ಅನುದಾನ ಕೋರುತ್ತೇವೆ. 'ಮಲೆಗಳಲ್ಲಿ ಮದುಮಗಳು' ನಾಟಕಕ್ಕೆ ಅನುದಾನ ನೀಡಲಾಗಿತ್ತು. 'ರಾಮಾಯಣ ದರ್ಶನಂ'ಗೆ 90 ಲಕ್ಷ ಕೊಡಲಾಗಿತ್ತು. 'ಪರ್ವ'ಕ್ಕೆ ಒಂದು ಕೋಟಿ ಅನುದಾನ ದೊರೆಯಿತು. ಅಂತೆಯೇ ಟಿಪ್ಪು ನಿಜಕನಸುಗಳು ನಾಟಕಕ್ಕೂ ವಿಶೇಷ ನಾಟಕ ಎಂದು ಅನುದಾನ ಕೋರಿ ಸರ್ಕಾರಕ್ಕೆ ಪತ್ರ ಬರೆದೆ. ಆದರೆ ನನ್ನ ಸರ್ಕಾರ, ಸಚಿವರಿಗೆ ಈ ನಾಟಕ ವಿಶೇಷ ಅನ್ನಿಸಲಿಲ್ಲ. ಹಾಗಾಗಿ ಅನುದಾನ ಬರಲಿಲ್ಲ ಎಂದು ವಿಷಾದಿಸಿದರು.

ಟಿಪ್ಪು ನಾಟಕ ಪ್ರದರ್ಶನಕ್ಕೂ ಮುನ್ನ ಹಿರಿಯ ರಂಗಕರ್ಮಿಗಳಾದ ಸೇತುರಾಂ, ಬಿ.ವಿ.ರಾಜಾರಾಂ ಅವರನ್ನೆಲ್ಲಾ ಸೇರಿಸಿ ನಾಟಕ ಓದಿಸಿದಾಗ, ಅವರು ಚೆನ್ನಾಗಿದೆ ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಲು ಸಲಹೆ ನೀಡಿದರು. ಇದಾದ ನಂತರ ಟಿಪ್ಪು ನಿಜಕನಸುಗಳು ನಾಟಕ ಪ್ರದರ್ಶನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್‌ಕುಮಾರ್ ಅವರಿಗೆ ಪತ್ರ ಬರೆದೆ. ಅದಕ್ಕೆ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಅನುಮತಿ ಪಡೆಯುವಂತೆ ಹೇಳಿದರು. ಅವರ ಅನುಮತಿ ಪಡೆಯಲು ಕುಳಿತಿದ್ದರೆ ಈ ನಾಟಕ ಪ್ರದರ್ಶನವನ್ನೇ ಕಾಣುತ್ತಿರಲಿಲ್ಲ ಎಂದು ತಿಳಿಸಿದರು.

ಸಿದ್ದರಾಮಯ್ಯ ಸ್ಪರ್ಧೆ ಮಾಡುತ್ತೇನೆ ಎಂದಿದ್ದ ಕಾರಣಕ್ಕೇನೋ ಕೋಲಾರದಲ್ಲಿ ಟಿಪ್ಪು ನಿಜಕನಸುಗಳ ಪ್ರದರ್ಶನಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. 500 ಜನ ಪ್ರೇಕ್ಷಕರಿಗೆ ಸಾವಿರ ಜನ ಪೊಲೀಸರನ್ನು ನಿಯೋಜಿಸಲಾಗಿತ್ತು. ನನ್ನ ಭದ್ರತೆಗೆ ನಾಲ್ಕು ಜನ ಪೊಲೀಸರು. ನಾಟಕ ಪ್ರದರ್ಶನಕ್ಕೆ ಹೋದೆಡೆಯೆಲ್ಲಾ ನಮ್ಮ ಪರಿವಾರದ ಸ್ನೇಹಿತರು ಊಟ–ವಸತಿ ಕೊಟ್ಟರು ಎಂದು ಹೇಳಿದರು.

ಶಾಲಾ ಪಠ್ಯ ಪುಸ್ತಕದಲ್ಲಿ ಎತ್ತರದ ಭಾರೀ ಗಾತ್ರ ಹುಲಿ ಬಾಯಿಗೆ ಟಿಪ್ಪು ಕೈ ಹಾಕಿರುವಂತಹ ಚಿತ್ರ ಕೊಡಲಾಗಿತ್ತು. ಎಲ್ಲಿಯಾದರೂ ಹೀಗೆ ಹುಲಿ ಬಾಯಿಗೆ ಕೈ ಹಾಕಲು ಸಾಧ್ಯವೇ? ಇದು ಕಾಲ್ಪನಿಕ–ಸುಳ್ಳು ಎಂದು ಯಾರೂ ಹೇಳಿಲ್ಲವೇಕೆ? ಎಂದು ಅಡ್ಡಂಡ ಸಿ.ಕಾರ್ಯಪ್ಪ ಪ್ರಶ್ನಿಸಿದರು. ಹುಲಿ ಹತ್ತಿರ ಹೋಗಲು ಸಾಧ್ಯವೇ? ಹುಲಿಯ ಒಂದು ಹೊಡೆತಕ್ಕೆ ಸಮಾಧಿಯಾಗುತ್ತೇವೆ ಅಷ್ಟೇ ಎಂದು ಹೇಳಿದರು.

2006ರಲ್ಲಿ ಉರಿಗೌಡ ಮತ್ತು ನಂಜೇಗೌಡ ಹೆಸರು ಹೆಚ್.ಡಿ.ದೇವೇಗೌಡ ಅವರು ಬಿಡುಗಡೆ ಮಾಡಿದ ಪುಸ್ತಕದಲ್ಲೇ ಇದೆ. ಹೆಚ್.ಡಿ.ಕುಮಾರಸ್ವಾಮಿಯವರೇ ಅಧಿಕಾರದಲ್ಲಿ ಇದ್ದಾಗ ದೇ.ಜವರೇಗೌಡರ ಸಂಪಾದಕತ್ವದ ಪುಸ್ತಕದಲ್ಲಿ ಉರಿಗೌಡ ಮತ್ತು ನಂಜೇಗೌಡ ಹೆಸರು ಉಲ್ಲೇಖವಿದೆ. ಆದರೆ ನಾನು ಮಾಡಿದ ಸೃಷ್ಟಿ ಎಂದು ಅಪ್ಪ ಮಕ್ಕಳೆಲ್ಲಾ ಬಾಯಿ ಬಡಿಯುತ್ತಿದ್ದಾರೆ. ಉರಿಗೌಡ, ನಂಜೇಗೌಡ ಇತಿಹಾಸ ಪಾತ್ರಗಳೂ ಹೌದು. ಟಿಪ್ಪು ಕೊಂದಿದ್ದು ಹೌದು ಎಂದು ಪ್ರತಿಪಾದಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು (ಕೆಬಿಜಿ) ಮಾತನಾಡಿ, ಟಿಪ್ಪು ನಾಟಕದ ಬಗ್ಗೆ ಇಷ್ಟೊಂದು ಗೊಂದಲ, ಕಳವಳ ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಬೇರೆ ಬೇರೆ ನಾಟಕಕಾರರು ಬೇರೆ ಬೇರೆ ರೀತಿಯಲ್ಲಿ ಬರೆಯುತ್ತಾರೆ. ಅದರಲ್ಲಿ ತಪ್ಪೇನಿದೆ? ಪ್ರತಿಯೊಬ್ಬರಿಗೂ ಅವರ ತಿಳುವಳಿಕೆಯ ಆಧಾರದ ಮೇಲೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ. ಅಂತೆಯೇ ಷೇಕ್ಸ್‌ಪೀಯರ್, ಜೂಲಿಯಸ್ ಸೀಸರ್ ಕುರಿತು ಒಂದು ನಾಟಕ ಬರೆದರು. ಬರ್ನಾರ್ಡ್ ಶಾ ಕೂಡ ಅದೇ ವಿಷಯ ಕುರಿತಂತೆ ತಮ್ಮ ಅಭಿಪ್ರಾಯದಲ್ಲಿ ನಾಟಕ ಬರೆದರು ಎಂದರು.

ಸದರಿ ನಾಟಕದಲ್ಲಿರುವ ನಾಯಕನು ಸೇರಿದ ಜನಾಂಗಕ್ಕಾಗಲಿ, ಧರ್ಮಕ್ಕಾಗಲಿ ಯಾವ ನಿಂದನೆ ಇಲ್ಲದೆ ನಾಟಕವನ್ನು ಪ್ರದರ್ಶನ ಮಾಡಿದರೆ ತಪ್ಪೇನಿದೆ? ಇದು ಟಿಪ್ಪು ಕೇಂದ್ರಿತವಾದ ಒಂದು ನಾಟಕ ಅಷ್ಟೇ. ಟಿಪ್ಪು ಚರಿತ್ರೆಯ ಒಂದು ಭಾಗ. ಅವನು ಒಬ್ಬ ಹೆಸರಾಂತ ಸುಲ್ತಾನ್. ಒಬ್ಬರಿಗೆ ಒಂದೊಂದು ರೀತಿಯಲ್ಲಿ ಅಭಿಪ್ರಾಯಗಳು ಇರುತ್ತವೆ. ಅಂತಹ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದರಲ್ಲಿ ತಪ್ಪೇನು ಇಲ್ಲ. ತಮಗೆ ಸರಿ ಕಾಣದ್ದನ್ನು ಪುರಾವೆ ಮೂಲಕ ಅಭಿಪ್ರಾಯ ವ್ಯಕ್ತಪಡಿಸಲು ಎಲ್ಲರಿಗೂ ಮುಕ್ತ ಅವಕಾಶ ಇದ್ದೇ ಇರುತ್ತದೆ ಎಂದು ತಿಳಿಸಿದರು.

ನಮ್ಮ ದೇಶದಲ್ಲಿ ಇರುವ ರಾಜಕೀಯ ವಿದ್ಯಮಾನ ನೋಡಿದರೆ ಏನಾದರೂ ವಿವಾದ ಸೃಷ್ಟಿ ಮಾಡಲೇಬೇಕು ಎಂದು ಕೆಲವರು ನಿರ್ಧರಿಸಿರುತ್ತಾರೆ. ಆ ಕಾರಣದಿಂದಲೇ ಈ ನಾಟಕ ಕುರಿತು ವಿವಾದ ಆಗಿದೆ. ಯಾವುದೇ ಸಂಸ್ಥೆ ಅಥವಾ ಸಮಾಜವಾಗಲಿ, ನೇರ ದಾರಿಯಲ್ಲಿ ಹೋಗಲು ಸಾಧ್ಯವಿಲ್ಲ. ಅಡೆತಡೆಗಳು ಇದ್ದೇ ಇರುತ್ತವೆ. ಇಂತಹ ಅಡೆತಡೆಗಳನ್ನು ಸರಿಪಡಿಸಿಕೊಂಡು ಮುಂದೆ ಹೋಗುವುದನ್ನು ಕಲಿಯಬೇಕು. ಇಂದು ನಮ್ಮ ದೇಶದ ಮಟ್ಟದಲ್ಲೂ ಇಂತಹ ಆಶಾದಾಯಕ ಬೆಳವಣಿಗೆ ಆಗುತ್ತಿದ್ದು, ರಂಗಾಯಣದಂತಹ ಸಂಸ್ಥೆಯಲ್ಲೂ ಆಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಹಿರಿಯ ಪತ್ರಕರ್ತ ರವೀಂದ್ರ ಜೋಶಿ ಮಾತನಾಡಿ, ರಂಗಭೂಮಿ ನಶಿಸುತ್ತಿದೆ ಎಂಬ ಕೂಗು ಕೇಳಿ ಬರುತ್ತಿದ್ದು, ಇಂತಹ ಸನ್ನಿವೇಶದಲ್ಲಿ ಟಿಪ್ಪು ನಿಜಕನಸುಗಳು 50ನೇ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಇಂತಹ ಸಕಾರಾತ್ಮಕ ಬೆಳವಣಿಗೆ ಏಕಾಯಿತು ಎಂದು ನಾವು ಆಲೋಚನೆ ಮಾಡಬೇಕು. ವ್ಯಾಪಕ ಪ್ರಚಾರ ಮಾಡಿದರೂ ನಾಟಕ ನೋಡಲು ಜನ ಬರುವುದಿಲ್ಲ ಎನ್ನುವ ಸಂದರ್ಭದಲ್ಲಿ ಟಿಪ್ಪು ನಿಜಕನಸುಗಳು ಹೌಸ್‌ಫುಲ್ ಆಗುತ್ತಿದೆ. ಇದನ್ನು ನಾವು ಆಲೋಚನೆ ಮಾಡಬೇಕು. ಅಂದರೆ ಸತ್ಯ ಮಾತನಾಡಿದರೆ ಜನ ಸ್ವೀಕರಿಸುತ್ತಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಎಂ.ಅಶೋಕ್‌ಕುಮಾರ್ ಹಾಜರಿದ್ದರು.



ಮೈಸೂರು ರಂಗಾಯಣದ ಭೂಮಿಗೀತ ರಂಗಮಂದಿರದ ಅಂಗಳದಲ್ಲಿ ಭಾನುವಾರ 'ಟಿಪ್ಪು ನಿಜಕನಸುಗಳು' ನಾಟಕವು ರಾಜ್ಯದ ವಿವಿಧ ಭಾಗಗಳಲ್ಲಿ ಪ್ರದರ್ಶನ ಕಂಡಿರುವ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿ ಹಾಗೂ ಛಾಯಾಚಿತ್ರ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರದರ್ಶನದಲ್ಲಿರುವ ಛಾಯಾಚಿತ್ರ ಮತ್ತು ಪತ್ರಿಕಾ ವರದಿಗಳ ಕುರಿತು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ಮಾಹಿತಿ ನೀಡಿದರು. ಚಿತ್ರದಲ್ಲಿ ಹಿರಿಯ ಪತ್ರಕರ್ತ ರವೀಂದ್ರ ಜೋಶಿ, ಶಿಕ್ಷಣ ತಜ್ಞ ಎಂ.ಅಶೋಕ್‌ಕುಮಾರ್ ಮತ್ತಿತರರನ್ನು ಕಾಣಬಹುದು.

ಆಶ್ರಯ ಫಲಾನುಭವಿಗಳಿಗೆ ಅಂಚೆ ಮೂಲಕ ಮಂಜೂರಾತಿ ಪತ್ರ

ಕೆ.ಆರ್.ಕ್ಷೇತ್ರದಲ್ಲಿ 6207 ಮನೆ ನಿರ್ಮಾಣಕ್ಕೆ ಸಂಕಲ್ಪ

ಮೈಸೂರು, ಮಾ.19(ಎಸ್‌ಬಿಡಿ)– ದಶಕದ ನಿರಂತರ ಪರಿಶ್ರಮದ ಫಲವಾಗಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿಂದು 6207 ಮನೆ ನಿರ್ಮಾಣದ ಸಂಕಲ್ಪ ಕೈಗೂಡಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಮೈಸೂರಿನ ಕರ್ನಾಟಕ ವಸ್ತು ಪ್ರದರ್ಶನ ಆವರಣದಲ್ಲಿ ಭಾನುವಾರ ಆಶ್ರಯ ಮನೆಗಳ ಮಂಜೂರಾತಿ ಪತ್ರವನ್ನು ಅಂಚೆ ಮೂಲಕ ರವಾನಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸ್ವಾತಂತ್ರ್ಯ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದೆಹಲಿ ಕೆಂಪು ಕೋಟೆ ಮೇಲೆ ನಿಂತು ದೂರದೃಷ್ಟಿಯ ಪ್ರಧಾನಮಂತ್ರಿ ಆವಾಸ್ ಯೋಜನೆ ಘೋಷಿಸಿದ್ದು, ಸ್ವಂತ ಸೂರಿಲ್ಲದವರಿಗೆ ವರದಾನವಾಗಿದೆ ಎಂದರು.

ಕೃಷ್ಣರಾಜ ಕ್ಷೇತ್ರದಲ್ಲಿ ಸೂರಿಲ್ಲದವರಿಗೆ ಸೂರು ಕಲ್ಪಿಸುವ ಗುರಿಯೊಂದಿಗೆ ಕಳೆದ 11 ವರ್ಷಗಳ ಹಿಂದೆ ಯೋಜನೆ ರೂಪಿಸಲಾಯಿತು. ಇದಕ್ಕಾಗಿ ನಗರದ ಲಲಿತಾದ್ರಿಪುರ, ಗೊರೂರು ಹಾಗೂ ಮಳಲವಾಡಿಯಲ್ಲಿ ಭೂಮಿ ಖರೀದಿಸಲಾಯಿತು. ಆದರೆ, ಭೂಮಾಲೀಕರು ಹೆಚ್ಚಿನ ಪರಿಹಾರ ಕೋರಿ ಹೈಕೋರ್ಟ್ ಮೊರೆ ಹೋದರು. ಅಲ್ಲಿ ಸರ್ಕಾರದ ಪರವಾಗಿ ತೀರ್ಪು ಬಂದಿತ್ತು ನಂತರ ಅವರು ಸುಪ್ರೀಂ ಕೋರ್ಟ್ ಮೊರೆ ಹೋದರು. ಬಳಿಕ ರಾಜೀ ಮೂಲಕ ಭೂಮಾಲೀಕರು ಹಾಗೂ ಸರ್ಕಾರದ ನಡುವೆ ಇದ್ದ ಸಮಸ್ಯೆ ಬಗೆಹರಿಸಲಾಯಿತು. ಪ್ರತೀ ಎಕರೆ ಭೂಮಿಗೆ ಹೆಚ್ಚುವರಿ ಹಣ ನೀಡಿ ರಾಜ್ಯಪಾಲರ ಹೆಸರಿಗೆ ಭೂಮಿ ನೋಂದಣಿ ಮಾಡಿಸಲಾಯಿತು. ಇದೆಲ್ಲಾ ಒಂದು ದಿನದಲ್ಲಿ ಆದ ಕೆಲಸವಲ್ಲ, ಸತತ ಹನ್ನೊಂದು ವರ್ಷಗಳ ಪರಿಶ್ರಮ ಇದೆ ಎಂದು ತಿಳಿಸಿದರು.

ದಶಕದ ಪರಿಶ್ರಮದ ಫಲವಾಗಿ ಮನೆ ನಿರ್ಮಾಣಕ್ಕೆ ಇದೀಗ ಕಾಲ ಕೂಡಿಬಂದಿದೆ. ಯುಗಾದಿ ಉಡುಗೊರೆಯಾಗಿ ಹಬ್ಬದ ಮುನ್ನಾ ದಿನವೇ ಮಂಜೂರಾತಿ ಪತ್ರ ಅಂಚೆ ಮೂಲಕ ನಿಮ್ಮ ಕೈಸೇರಲಿದೆ. ಈ ಹಿಂದೆ ಒಮ್ಮೆ ಆಶ್ರಯ ಮನೆಗಳ ಮಂಜೂರಾತಿ ಪತ್ರ ಕೊಡುವ ಕಾರ್ಯಕ್ರಮದ ಸ್ಥಳದಲ್ಲೇ ಮೂರ್ನಾಲ್ಕು ಮಂದಿ ಮಂಜೂರಾತಿ ಪತ್ರ ಕೊಡಿಸುವ ಆಮಿಷವೊಡ್ಡಿ 4 ಸಾವಿರ ಕಮಿಷನ್ ವ್ಯವಹಾರ ನಡೆಸಿದ್ದು ಗಮನಕ್ಕೆ ಬಂದಿತ್ತು. ಆ ರೀತಿಯ ಘಟನೆ ಮರುಕಳಿಸಬಾರದೆಂಬ ಕಾರಣದಿಂದ ಮಂಜೂರಾತಿ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗುತ್ತಿದೆ. ಇಲ್ಲಿ ಯಾರೂ ಕೂಡ ಫಲಾನುಭವಿಗಳಿಂದ ಹಣ ವಸೂಲಿ ಮಾಡುವ ಪ್ರಮೇಯವೇ ಇರುವುದಿಲ್ಲ ಎಂದು ಹೇಳಿದರು.

ಐದು ಸಾವಿರ ಮನೆಗಳ ನಿರ್ಮಾಣ ಯೋಜನೆ ಪ್ರಗತಿಯಲ್ಲಿದೆ. ಇದಕ್ಕಾಗಿ ಪ್ರಧಾನಮಂತ್ರಿಗಳ ಮೂಲಕ ಒಂದೂವರೆ ಲಕ್ಷ ರೂ., ಹಾಗೂ ಮುಖ್ಯಮಂತ್ರಿಗಳ ಮೂಲಕ ಒಂದು ಲಕ್ಷ ರೂ. ಫಲಾನುಭವಿಗಳ ಖಾತೆಗೆ ಸಂದಾಯವಾಗಲಿದೆ. ಇನ್ನುಳಿದ ಶೇ.10ರಷ್ಟು ಹಣವನ್ನು ಫಲಾನುಭವಿಗಳು 20 ವರ್ಷಗಳ ಕಾಲಮಿತಿಯಲ್ಲಿ ಪಾವತಿಸಬೇಕಿದೆ. ಇದಕ್ಕಾಗಿ ಶೇ.10ರ ಬಡ್ಡಿ ದರದಲ್ಲಿ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನೂ ಕಲ್ಪಿಸಿಕೊಡಲಾಗಿದೆ. ಆ ಬಡ್ಡಿಯ ಮೊತ್ತದಲ್ಲೂ ಶೇ.6ರಷ್ಟನ್ನು ಪ್ರಧಾನಮಂತ್ರಿಗಳ ಮೂಲಕವೇ ಪಾವತಿಯಾಗಲಿದ್ದು, ಶೇ.4ರಷ್ಟನ್ನು ಮಾತ್ರ ಫಲಾನುಭವಿಗಳು ಕಟ್ಟಬೇಕಾಗುತ್ತದೆ ಎಂದರು.

ದೇಶದ ವಿಧಾನಸಭಾ ಕ್ಷೇತ್ರಗಳ ಪೈಕಿ ಅತೀ ಹೆಚ್ಚು ಫಲಾನುಭವಿಗಳಿಗೆ ಮನೆ ಕಲ್ಪಿಸಿದ ಕೀರ್ತಿಗೆ ಇಂದು ಕೃಷ್ಣರಾಜ ವಿಧಾನಸಭಾ ಕ್ಷೇತ್ರ ಭಾಜನವಾಗಿದೆ. ಇದರ ಹಿಂದೆ ಜನರ ಆಶೀರ್ವಾದ ಇದೆ. ಮನೆಯಿಲ್ಲದವರ ಬಗ್ಗೆ ಪರಿಶೀಲಿಸಿದ ವೇಳೆ ಇನ್ನೂ ಆರು ಸಾವಿರ ಮಂದಿಯನ್ನು ಗುರುತಿಸಲಾಗಿತ್ತು. ಈ ಬಗ್ಗೆ ಇತ್ತೀಚೆಗಷ್ಟೇ ಪ್ರಧಾನ ಮಂತ್ರಿಗಳ ಗಮನಕ್ಕೆ ತರಲಾಗಿದ್ದರಿಂದ ಹೆಚ್ಚುವರಿ 6 ಸಾವಿರ ಮನೆಗಳನ್ನು ಕ್ಷೇತ್ರಕ್ಕೆ ಕಲ್ಪಿಸಿದರು. ಇದಕ್ಕಿಂತ ಸೌಭಾಗ್ಯ ಮತ್ತೇನಿದೆ. ರಾಜಕೀಯ ಬಿಡುವ ಮುನ್ನ ಸೂರಿಲ್ಲದವರಿಗೆ ಮನೆ ಕಲ್ಪಿಸಬೇಕೆಂಬ ನನ್ನ ಅಮ್ಮನ ಆಸೆ ಹಾಗೂ ಪ್ರಧಾನಮಂತ್ರಿಗಳ ಆಸೆಯನ್ನು ಪೂರೈಸಿದ ಆತ್ಮತೃಪ್ತಿ ನನ್ನದಾಗಿದೆ. ಮುಂದಿನ ಆರು ತಿಂಗಳಲ್ಲಿ ಎಲ್ಲರಿಗೂ ಮನೆ ಕೀಲಿಕೈ ಸಿಗಲಿದೆ. 2024ರ ಡಿಸೆಂಬರ್ 30ರೊಳಗೆ ಎಲ್ಲರಿಗೂ ಹಕ್ಕುಪತ್ರ ನೀಡುವ ಗುರಿ ಇಟ್ಟುಕೊಳ್ಳಲಾಗಿದೆ. ಅಗತ್ಯ ಮೂಲ ಸೌಕರ್ಯದೊಂದಿಗೆ ಅತ್ಯಂತ ವ್ಯವಸ್ಥಿತವಾಗಿ ಮನೆ ನಿರ್ಮಿಸಿಕೊಡಲಾಗುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ನಗರ ಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಸೌಮ್ಯ ಉಮೇಶ್, ನಗರ ಪಾಲಿಕೆ ಎಡಿಸಿ ರೂಪಾ, ಮುಖಂಡರಾದ ಪೀತಾಂಬರ ಸ್ವಾಮಿ, ಹಂಸರಾಜ್, ವಿದ್ಯಾ ಅರಸ್, ಗೌರಿ, ಹೇಮಂತ್, ಛಾಯಾದೇವಿ ಮತ್ತಿತರರು ಉಪಸ್ಥಿತರಿದ್ದರು.





ಮೈಸೂರು ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪು ನಿಜಕನಸುಗಳು' ನಾಟಕದ 50ನೇ ಪ್ರದರ್ಶನ ಭಾನುವಾರ ಯಶಸ್ವಿಯಾಗಿ ನಡೆಯಿತು. ನಾಟಕ ವೀಕ್ಷಣೆಗೆ ಆಗಮಿಸಿದ ಪ್ರೇಕ್ಷಕರಿಗೆ ಸಿಹಿ ವಿತರಿಸಿ, ಸ್ವಾಗತಿಸಲಾಯಿತು.

ರೋಹನ್ ಬೋಪಣ್ಣ ಜೋಡಿಗೆ ಪರಿಬಾಸ್ ಕಿರೀಟ



ಇಂಡಿಯನ್ ವೆಲ್ಸ್, ಅಮೆರಿಕ, ಮಾ.19– ಕನ್ನಡಿಗ ರೋಹನ್ ಬೋಪಣ್ಣ ಅವರು ಬಿಎನ್‌ಪಿ ಪರಿಬಾಸ್ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಇದರೊಂದಿಗೆ ಎಟಿಪಿ ಮಾಸ್ಟರ್ಸ್ 1000 ಟೂರ್ನಿಯಲ್ಲಿ ಚಾಂಪಿಯನ್ ಆದ ಅತೀ ಹಿರಿಯ ಆಟಗಾರ ಎನಿಸಿಕೊಂಡಿದ್ದಾರೆ.

ಶನಿವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಭಾರತದ 43 ವರ್ಷದ ಬೋಪಣ್ಣ ಮತ್ತು ಆಸ್ಟ್ರೇಲಿಯಾದ 35 ವರ್ಷದ ಮ್ಯಾಟ್ ಎಬ್ಡೆನ್ ಜೋಡಿಯು 6–3, 2–6, 10–8ರಿಂದ ನೆದರ್ಲೆಂಡ್ಸ್‌ನ ವೆಸ್ಲಿ ಕೂಲೊಫ್ ಬ್ರಿಟನ್‌ನ ನೀಲ್ ಸ್ಕುಪ್‌ಸ್ಕಿ ಅವರನ್ನು ಪರಾಭವಗೊಳಿಸಿದರು. ವೆಸ್ಲಿ ಮತ್ತು ನೀಲ್ ಇಲ್ಲಿ ಅಗ್ರ ಶ್ರೇಯಾಂಕ ಪಡೆದಿದ್ದರು.

ಇದು ನಿಜವಾಗಿಯೂ ವಿಶೇಷ ಕ್ಷಣ. ಇದನ್ನು ಟೆನಿಸ್‌ನ ಸ್ವರ್ಗ ಎಂದು ಕರೆಯುತ್ತಾರೆ. ಬಹಳ ವರ್ಷಗಳಿಂದ ನಾನು ಇಲ್ಲಿಗೆ ಬರುತ್ತಿದ್ದು, ಹಲವು ಚಾಂಪಿಯನ್‌ಗಳನ್ನು ನೋಡುತ್ತಿದ್ದೇನೆ. ನಾನು ಮತ್ತು ಮ್ಯಾಟ್ ಇಲ್ಲಿ ಪ್ರಶಸ್ತಿ ಜಯಿಸಿದ್ದು ಸಂತಸ ತಂದಿದೆ ಎಂದು ತಮ್ಮ 10ನೇ ಎಟಿಪಿ ಮಾಸ್ಟರ್ಸ್ 1000 ಟೂರ್ನಿಯ ಫೈನಲ್ ಆಡಿದ ಬೋಪಣ್ಣ ಹೇಳಿದರು.

ಬೋಪಣ್ಣ ಅವರು ಇಲ್ಲಿ ಪ್ರಶಸ್ತಿ ಜಯಿಸುವ ಮೂಲಕ ಕೆನಡಾದ ಡೇನಿಯಲ್ ನೆಸ್ಟರ್ ಅವರ ಸಾಧನೆ ಮೀರಿದ್ದಾರೆ. 2015ರಲ್ಲಿ ಡೇನಿಯಲ್ ಅವರು ಸಿನ್ಸಿನಾಟಿ ಮಾಸ್ಟರ್ಸ್‌ನಲ್ಲಿ ಪ್ರಶಸ್ತಿ ಜಯಿಸಿದಾಗ ಅವರ ವಯಸ್ಸು 42 ಆಗಿತ್ತು.

ನಾನು ಡ್ಯಾನಿ ನೆಸ್ಟರ್ ದಾಖಲೆ ಮೀರಿದ್ದಕ್ಕೆ ಅವರ ಕ್ಷಮೆ ಕೇಳಿದೆ ಎಂದು ಬೋಪಣ್ಣ ನಗೆ ಚಟಾಕಿ ಹಾರಿಸಿದರು.

ಬೋಪಣ್ಣ ಅವರಿಗೆ ಇದು ಐದನೇ ಮಾಸ್ಟರ್ಸ್ 1000 ಡಬಲ್ಸ್ ಕಿರೀಟವಾಗಿದೆ. 2017ರಲ್ಲಿ ಕೊನೆಯ ಬಾರಿ ಜಯಿಸಿದ್ದು ಮಾಂಟೆ ಕಾರ್ಲೊ ಪ್ರಶಸ್ತಿ. ಸದ್ಯ ಅವರ ಬಳಿ 24 ಟೂರ್ ಮಟ್ಟದ ಟ್ರೋಫಿಗಳಿವೆ.

ಬೋಪಣ್ಣ ಮತ್ತು ಎಬ್ಡೆನ್ ಸೆಮಿಫೈನಲ್‌ನಲ್ಲಿ, ಕಳೆದ ಆವೃತ್ತಿಯ ಚಾಂಪಿಯನ್‌ಗಳಾದ ಅಮೆರಿಕದ ಜಾನ್ ಇಸ್ನೆರ್ ಮತ್ತು ಜಾಕ್ ಸಾಕ್ ಅವರನ್ನು ಸೋಲಿಸಿದ್ದರು. ಕ್ವಾರ್ಟರ್‌ಫೈನಲ್‌ನಲ್ಲಿ ಕೆನಡಾದ ಫೆಲಿಕ್ಸ್ ಅಗರ್ ಅಲಿಯಾಸಿಮ್ ಡೆನಿಸ್ ಶಪವಲೊವ್ ಸವಾಲು ಮೀರಿದ್ದರು. ಡಬಲ್ಸ್ ರ‍್ಯಾಂಕಿಂಗ್‌ನಲ್ಲಿ ಬೋಪಣ್ಣ ಈಗ 11ನೇ ಸ್ಥಾನಕ್ಕೇರಿದ್ದಾರೆ.

ನೋಟೀಸ್

ಹುಣಸೂರಿನ ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯ
EX No. 50/2019
ಡಿಕ್ರಿ ಹೋಲ್ಡರ್ : ಕಮಲ್ ಸಾಬ್
ವಿರುದ್ಧ
ತೀರ್ಪು ಋಣಿಗಳು: ಶ್ರೀಮತಿ ತಾಹಿರಾಬಿ
ಮೃತ ವಾರಸುದಾರರು
ನಜೀಮಾ ಮತ್ತು ಇತರರು

ಮೇಲ್ಕಂಡ ಪ್ರಕರಣದಲ್ಲಿ 2 ರಿಂದ 5ನೇ ತೀರ್ಪು ಋಣಿಗಳಾದ ಶ್ರೀಮತಿ ಪರ್ವೀನ್ ಬಿನ್ ಸಮೀಉಲ್ಲಾ, ಶ್ರೀಮತಿ ನಜರೀನ್ ಬಿನ್ ಸಮೀಉಲ್ಲಾ, ಶ್ರೀಮತಿ ಶಕೀಲ್ ಬಿನ್ ಸಮೀಉಲ್ಲಾ, ವಾಸ: ಮದ್ದುಸಾಬ್ ಮೊಹಲ್ಲಾ, ಸೇತುವೆ, ಹುಣಸೂರು, ನೂರುಲ್ಲಾ ಬಿನ್ ಬಾಬ್‌ಜಾನ್, ವಾಸ: ರಹಮತ್ ಮೊಹಲ್ಲಾ, ಹುಣಸೂರು ಅರ್ಶಿಯಾಬಾನು ಬಿನ್ ಲೇಟ್: ಶಫಿಉಲ್ಲಾ, ವಾಸ: ಮಸೀದಿ ಬಳಿ, ಶಬ್ಬೀರ್ ನಗರ, ಹುಣಸೂರು, ವಹೀದಾಬೇಗಂ ಬಿನ್ ಬಾಬಾಜಾನ್, ಶಬ್ಬೀರ್‌ನಗರ, ಹುಣಸೂರು ಮತ್ತು ಶ್ರೀಮತಿ ನೂರ್ ಬಿನ್ ಬಾಬ್‌ಜಾನ್, ಕೋಂ ಬಾಬು ವಾಸ: ಗೌಡಿಕೆರೆ ಗ್ರಾಮ, ಹನಗೋಡು ಹೋಬಳಿ, ಹುಣಸೂರು ತಾಲ್ಲೂಕು, ಆದ ನೀವುಗಳು ಮೇಲ್ಕಂಡ ಪ್ರಕರಣದಲ್ಲಿ 2 ರಿಂದ 5, 12, 14 ಮತ್ತು 15ನೇ ತೀರ್ಪುಋಣಿಗಳಾಗಿದ್ದು, ನ್ಯಾಯಾಲಯದಿಂದ ಕಳುಹಿಸಿದ ನೋಟೀಸನ್ನು ಸ್ವೀಕರಿಸದ ಕಾರಣ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ,

ಮೇಲ್ಕಂಡ ಪ್ರಕರಣವು ದಿನಾಂಕ: 12–04–2023ರಂದು ಸುನಾವಣೆಗೆ ಇದ್ದು, ಸದರಿ ದಿನಾಂಕದಂದು ನೀವುಗಳು ಖುದ್ದು ಯಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಯಾವುದೇ ತಕರಾರು ಇದ್ದಲ್ಲಿ ಸಲ್ಲಿಸಬಹುದಾಗಿದ್ದು, ನೀವು ಗೈರು ಹಾಜರಾದಲ್ಲಿ ನಿಮ್ಮ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಮುಂದಿನ ನಡುವಳಿಕೆ ಅನುಸರಿಸಲಾಗುವುದು.

ನ್ಯಾಯಾಲಯದ ಅನುಮತಿ ಮೇರೆಗೆ
ಸ್ಥಳ: ಹುಣಸೂರು **Sd/- Senior Judge (Jr. Dn.)**
ದಿನಾಂಕ: 15–3–23 **SJMFC** ನ್ಯಾಯಾಲಯ, ಹುಣಸೂರು

ಸಾರ್ವಜನಿಕರಿಗೆ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀಮತಿ ಸುನಿತ ಮತ್ತು ಶ್ರೀಮತಿ ನೀಲಮ್ಮರವರು ಶ್ರೀಮತಿ ಚಿಕ್ಕಮಣಿ ಮತ್ತು ಇತರರ ವಿರುದ್ಧ ಮಾನ್ಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು ಇಲ್ಲಿ ಅಸಲು ದಾವಾ ಸಂಖ್ಯೆ 429/2023ರ ದಾವೆಯನ್ನು ಷೆಡ್ಯೂಲ್ ಸ್ವತ್ತಿನಲ್ಲಿ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಗಾಗಿ ದಾವೆ ಹೂಡಿದ್ದು, ಸದರಿ ದಾವೆಯಲ್ಲಿ ಪ್ರತಿವಾದಿಗಳಾದ ಹೆಚ್.ವಿ ರಾಘವ (20ನೇ ಪ್ರತಿವಾದಿ), ಬಾಲಚಂದ್ರ.ಸಿ(40ನೇ ಪ್ರತಿವಾದಿ), ಹೆಚ್.ಆರ್. ಸತ್ಯನಾರಾಯಣ (47ನೇ ಪ್ರತಿವಾದಿ) ಶೇಷಾದ್ರಿ (54ನೇ ಪ್ರತಿವಾದಿ), ಎಸ್.ಜಗದೀಶ್ @ ಶಕ್ತಿ ಜೀವನ್. ಎಂ (56ನೇ ಪ್ರತಿವಾದಿ), ವೆಂಕಟರಮಣ ಶೆಟ್ಟಿ (59ನೇ ಪ್ರತಿವಾದಿ), ಎ.ಅಬ್ದುಲ್ ಮಜೀದ್ ಸಾಹೇಬ್ (60ನೇ ಪ್ರತಿವಾದಿ) ರವರುಗಳ ವಿರುದ್ಧ ದಾವಾ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಬಾರದೆಂದು ತಡೆ ಯಾಜ್ಞೆ ಆದೇಶವಾಗಿರುತ್ತದೆ. ಷೆಡ್ಯೂಲ್ ಸ್ವತ್ತನ್ನು ಬೇರೆ ಯಾರಾದರೂ ಖರೀದಿ ಮಾಡಿದರೆ ಈ ಮಾರಾಟವು ಕ್ರಮ ಬದ್ಧವಾಗಿರುವುದಿಲ್ಲ ಅಥವಾ ಊರ್ಜಿತವಾಗುವುದಿಲ್ಲ. ಒಂದು ವೇಳೆ ಷೆಡ್ಯೂಲ್ ಸ್ವತ್ತನ್ನು ಬೇರೆ ಯಾರಾದರೂ ಖರೀದಿಸಿದರೆ ಅದಕ್ಕೆ ನಮ್ಮ ಕಕ್ಷಿದಾರರು ಹೊಣೆಗಾರರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲೂಕು ವರುಣಾ ಹೋಬಳಿ ಸರ್ಕಾರಿ ಉತ್ತನಹಳ್ಳಿ ಗ್ರಾಮದ ಸರ್ವೇ ನಂ.142, ಹೊಸ ನಂ.142/1, 2, 3, 4, 5 ಮತ್ತು 6 ರಲ್ಲಿರುವ ಒಟ್ಟು ವಿಸ್ತೀರ್ಣ 27 ಎಕರೆ 33 ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಯಾಂದಳ್ಳಿ ಎಲ್ಲೆ, ಪಶ್ಚಿಮಕ್ಕೆ: ಕಟ್ಟೆ ಮಾದಯ್ಯರವರ ಜಮೀನು, ಉತ್ತರಕ್ಕೆ: ಬಸವಯ್ಯರವರ ಜಮೀನು, ದಕ್ಷಿಣಕ್ಕೆ: ಮಾರ ಶೆಟ್ಟಹಳ್ಳಿ ಎಲ್ಲೆ

ಸಹಿ/– **ಪ್ರದೀಪ್ ಸಿ.ಕೆ.**, ವಕೀಲರು
ಕೆ.ಪಿ.ಲಾ ಅಸೋಸಿಯೇಟ್ಸ್
#2, ಸಂತೋಷ್ ಕಾಂಪ್ಲೆಕ್ಸ್
ರಾಜೇಂದ್ರ ನಗರ ಮುಖ್ಯರಸ್ತೆ,
ಎನ್.ಆರ್.ಮೊಹಲ್ಲಾ, ಮೈಸೂರು 07.
ಮೊಬೈಲ್ **7795721358**
ದಿನಾಂಕ: 18–03–2023
ಮೈಸೂರು

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ, ನಿಮಗೆ ಒಂದ್ ವಿಷಯ ಗೊತ್ತಾಯ್ತಾ?
ಗಂಡ : ಏನು?
ಹೆಂಡತಿ : ನಮ್ಮಿಬ್ರ ಮದ್ವೆ ಮಾಡ್ಸಿದ್ರಲ್ಲ ಆ ಬ್ರೋಕರ್ ಶಿವಯ್ಯ ಇವತ್ತು ಸತ್ತು ಹೋದ್ರಂತೆ ಕಣ್ರೀ.
ಗಂಡ : ಮಾಡಿದ್ದುಣ್ಣೋ ಮಾರಾಯ ಅಂತ ಅವರವರ ಪಾಪ ಕರ್ಮ ಅವ್ರು ಯಾವತ್ತಾದರೂ ಅನುಭವಿಸಬೇಕು ಬಿಡೆ.

ಮೈಸೂರು ಮಿತ್ರ

ಸೋಮವಾರ, 20 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಅನುಭವವೇ ಜಗತ್ತಿನ ಸರ್ವಶ್ರೇಷ್ಠ ಶಿಕ್ಷಕ. ಉಸಿರಾಡುವವರೆಗೂ ಕಲಿಕೆ, ಜ್ಞಾನಾರ್ಜನೆಯೇ ಜೀವನದ ಗುರಿಯಾಗಿರಲಿ'. –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಚ್ಚುಹೊಳೆ ಬರುವಾಗ ಹೂವಿನ ತೋಟ ಅಡ್ಡವೇ!

ನಿಮ್ಮ ಪತ್ರಗಳು

ನಮ್ಮ ಬುದ್ಧಿ ನಮ್ಮ ಕೈಯಲ್ಲಿರಲಿ...

ಮಾನ್ಯರೆ,

ಬಂಧುಗಳೇ, ವಿಧಾನಸಭೆ ಸಾರ್ವತ್ರಿಕ ಚುನಾವಣೆ ಹೊಸ್ತಿಲಲ್ಲಿದ್ದೇವೆ. ರಾಜಕೀಯ ಪಕ್ಷಗಳು ಅದಾಗಲೇ ಅಬ್ಬರದ ಪ್ರಚಾರ ನಡೆಸಿವೆ. ಎಲ್ಲಾ ಪಕ್ಷಗಳ ನಾಯಕರು ವಿವಿಧ ಯಾತ್ರೆ ಹೆಸರಿನಲ್ಲಿ ರಾಜ್ಯ ಸುತ್ತಿ ಮತಭಿಕ್ಷೆ ಕೇಳಿದ್ದಾರೆ. ಹಲವೆಡೆ ಉಡುಗೊರೆ ಹಂಚಿಕೆಯೂ ಜೋರಾಗಿ ನಡೆದಿದೆ. ಚುನಾವಣೆ ವೇಳಾಪಟ್ಟಿ ಪ್ರಕಟವಾದ ನಂತರ ರಾಜಕೀಯ ಜಿದ್ದಾಜಿದ್ದಿ ವೇಗ ಪಡೆಯಲಿದೆ. ರಾಜಕಾರಣಿಗಳ ನಾಲಿಗೆ ಹಿಡಿತ ಕಳೆದುಕೊಳ್ಳುತ್ತದೆ. ಪರಸ್ಪರ ಕೆಸರೆರಚಾಟದ ಜೊತೆಗೆ ಸಮಾಜದ ಸ್ವಾಸ್ಥ್ಯ ಕದಡಬಹುದಾದ ಆಕ್ರೋಶಭರಿತ ಹೇಳಿಕೆಗಳು ಸಾಮಾನ್ಯವಾಗಿಬಿಡುತ್ತವೆ. ಪ್ರಚೋದನಕಾರಿ ಮಾತುಗಳಿಂದ ಜನ ಬಡಿದಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕುಟುಂಬಗಳಲ್ಲೇ ಒಡಕುಂಟಾಗಿ ದೂರಾಗುವ ಸಂಭವವನ್ನೂ ತಳ್ಳಿ ಹಾಕಲಾಗದು. ಅದೇನೇ ಇರಲಿ ನಮ್ಮ ಬುದ್ಧಿ ನಮ್ಮ ಕೈಯಲ್ಲಿರಬೇಕು. ಚುನಾವಣೆಯಲ್ಲಿ ಗೆಲ್ಲುವುದೊಂದೇ ರಾಜಕೀಯ ಪಕ್ಷಗಳ ಗುರಿ ಎನ್ನುವ ಅರಿವು ನಮ್ಮಲ್ಲಿರಬೇಕು. ಯಾವುದೇ ಪಕ್ಷವನ್ನು ಬೆಂಬಲಿಸುವುದು ವೈಯಕ್ತಿಕ ವಿಚಾರ. ಆದರೆ ಇತರರನ್ನೂ ಸೆಳೆಯಲು ಅನುಸರಿಸುವ ಮಾರ್ಗಗಳ ಬಗ್ಗೆ ಎಚ್ಚರವಿರಲಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮತ ಚಲಾವಣೆ ಮಹತ್ವದ ಹಕ್ಕು. ಈ ವೇಳೆ ಯಾವುದೇ ಮುಲಾಜಿಗೆ ಒಳಗಾಗದೆ ಇದ್ದವರಲ್ಲಿ ಸೂಕ್ತ ಅಭ್ಯರ್ಥಿಗೆ ನಮ್ಮ ಮೌಲ್ಯಯುತ ಮತ ಚಲಾಯಿಸೋಣ. ಅದನ್ನು ಹಣ, ಉಡುಗೊರೆಗೆ ಮಾರಾಟ ಮಾಡಿ, ನಮ್ಮ ಆತ್ಮಸಾಕ್ಷಿಗೆ ವಂಚನೆ ಮಾಡುವುದು ಬೇಡ ಎನ್ನುವುದು ನನ್ನ ಮನವಿ.

– ಷಣ್ಮುಖ, ಮೈಸೂರು

ವಜಾಗೊಂಡಿರುವ ಕೆಎಸ್ಆರ್‌ಟಿಸಿ ನೌಕರರನ್ನು ಪುನರ್‌ನೇಮಕ ಮಾಡಿ

ಮಾನ್ಯರೆ,

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಂದು ಬೃಹತ್ ಸಂಸ್ಥೆಯಾಗಿದ್ದು, ಲಕ್ಷಾಂತರ ಕಾರ್ಮಿಕರು ಸೇವೆ ಸಲ್ಲಿಸುತ್ತಿರುವುದಲ್ಲದೆ, ಶೇ. 90ರಷ್ಟು ಪ್ರಯಾಣಿಕರು ಸಾರಿಗೆ ಬಸ್‌ಗಳನ್ನೇ ಅವಲಂಬಿತರಾಗಿದ್ದಾರೆ. ಆದರೆ ಇಂದು ಸಂಸ್ಥೆಯಲ್ಲಿ ನೌಕರರ ಕೊರತೆಯಿಂದ ಸಂಸ್ಥೆಯು ಅಪಾರ ನಷ್ಟವನ್ನು ಅನುಭವಿಸುತ್ತಿರುವುದಲ್ಲದೆ, ಮಾರ್ಗ ಅನುಸೂಚಿಗಳ ರದ್ದತಿಯಿಂದ ಪ್ರಯಾಣಿಕರಿಗೂ ತುಂಬಾ ತೊಂದರೆಯಾಗುತ್ತಿದೆ. ಇಂದು ಸಂಸ್ಥೆಯು ನಷ್ಟ ಅನುಭವಿಸಲು ಪ್ರಾಮಾಣಿಕ ಅಧಿಕಾರಿಗಳ ಕೊರತೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಇಂದು ಸಂಸ್ಥೆಯಲ್ಲಿ ಬಹಳ ನೌಕರರು ಅಧಿಕಾರಿಗಳ ಕಿರುಕುಳಕ್ಕೆ ಬಲಿಯಾಗಿ ಕ್ಷುಲ್ಲಕ ಕಾರಣಕ್ಕೆ ಸಂಸ್ಥೆಯಿಂದ ವಜಾಗೊಂಡಿರುತ್ತಾರೆ. ಅಧಿಕಾರಿಗಳು ದುರಾಡಳಿತ ಹಾಗೂ ಕಾರ್ಮಿಕರ ಮೇಲೆ ಸೇಡಿನ ಮನೋಭಾವ ಪ್ರದರ್ಶಿಸಿ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತೆ ಕಾರ್ಮಿಕರ ಮೇಲೆ ವಜಾ ಎಂಬ ಅಸ್ತ್ರವನ್ನು ಪ್ರಯೋಗಿಸಿರುತ್ತಾರೆ. ಇಂತಹ ಸನ್ನಿವೇಶದಲ್ಲಿ ಕಾರ್ಮಿಕರ ಕೊರತೆಯಿಂದ ಸಂಸ್ಥೆಯು ನಷ್ಟ ಅನುಭವಿಸುತ್ತಿದ್ದರೂ ಅಧಿಕಾರಿ ವರ್ಗದವರು ಯಾವುದೇ ನೌಕರರನ್ನು ಕರ್ತವ್ಯಕ್ಕೆ ನೇಮಿಸಿಕೊಳ್ಳದೆ ಸಂಸ್ಥೆಯನ್ನು ನಷ್ಟದ ಕೂಪಕ್ಕೆ ತಳ್ಳುತ್ತಿದ್ದಾರೆ. ಸಂಸ್ಥೆಯಿಂದ ವಜಾಗೊಂಡಿರುವ ನೌಕರರನ್ನು ಪುನರ್‌ನೇಮಕ ಮಾಡಿಕೊಂಡು ಸಂಸ್ಥೆಯ ಆದಾಯವು ಹೆಚ್ಚಿಸುವಂತೆ ಕ್ರಮ ಕೈಗೊಂಡು ಘಟಕಗಳಲ್ಲಿ ಮಾರ್ಗ ಅನುಸೂಚಿಗಳು ರದ್ಧತಿಯನ್ನು ತಪ್ಪಿಸಿ ಪ್ರಯಾಣಿಕರಿಗೆ ಹೆಚ್ಚಿನ ಸಾರಿಗೆ ಸೇವೆಯನ್ನು ಒದಗಿಸುವ ಮೂಲಕ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಿರೆಂದು ಆಶಿಸೋಣವೇ?

– ಎನ್.ಆರ್. ವಿಜಯಕುಮಾರ್, ಮಾನಸಿನಗರ, ಮೈಸೂರು.

ಚುನಾವಣೆಗೂ ಮುನ್ನ ಸಮೀಕ್ಷೆಗೆ ಬೀಳಲಿ ಬೀಗ!

ಮಾನ್ಯರೆ,

ನಮ್ಮ ಭಾರತ ದೇಶದ ಪ್ರಜಾಪ್ರಭುತ್ವದ ಪರಿಕಲ್ಪನೆಯಲ್ಲಿ ಗೌಪ್ಯ ಮತದಾನ ಅನ್ನುವುದು ಒಂದು ಅತ್ಯದ್ಭುತ ವಿಧಾನವಾಗಿದೆ. ಚುನಾವಣಾ ಸಂದರ್ಭದಲ್ಲಿ ನಾವು ನಮ್ಮ ಮತದಾನದ ಹಕ್ಕನ್ನು ಅತ್ಯಂತ ಗೌಪ್ಯವಾಗಿ ಚಲಾಯಿಸಬಹುದು. ಅದು ಯಾರಿಗೂ ತಿಳಿಯುವುದಿಲ್ಲ. ಮುಕ್ತವಾಗಿ ಮತ್ತು ಧೈರ್ಯವಾಗಿ ಯಾರ ಹಂಗಿಗೂ ಒಳಗಾಗದೆ, ಯಾರಿಗೂ ನೇರವಾಗಿ ನೋಯಿಸದೆ ನಮ್ಮ ಮತವನ್ನು ಅತ್ಯಂತ ವಿವೇಚನೆಯಿಂದ ಚಲಾಯಿಸಬಹುದು. ಇದರಲ್ಲಿ ಪ್ರಜಾಪ್ರಭುತ್ವದ ಪ್ರಾಮಾಣಿಕತೆ, ಮುಕ್ತತೆ, ಮಹತ್ವ ಮತ್ತು ಸೌಂದರ್ಯ ಅಡಗಿದೆ.

ದುರಂತವೆಂದರೆ ಎಲೆಕ್ಟ್ರಾನಿಕ್ ಸುದ್ದಿ ಮಾಧ್ಯಮಗಳು ಸುಮಾರು 2–3 ತಿಂಗಳ ಹಿಂದಿನಿಂದಲೂ ಮತ್ತು ಬಹಿರಂಗವಾಗಿ ಜನರ ಮುಂದೆ ಕ್ಯಾಮರಾ ಮತ್ತು ಮೈಕ್ ಹಿಡಿದು ನಿಮ್ಮ ಮತ ಯಾರಿಗೆ ನೀಡುವಿರಿ ಮತ್ತು ಯಾಕೆ ಎಂದು ಕೇಳಿ ಮತದಾನದ ಪಾವಿತ್ರ್ಯತೆ ಮತ್ತು ಗಾಂಭೀರ್ಯವನ್ನು ಹಾಳು ಮಾಡುತ್ತಿರುವುದಲ್ಲದೇ ಅನೇಕ ಉತ್ತಮ ಸಂಬಂಧಗಳನ್ನು ಹಾಳು ಮಾಡಿ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿವೆ. ಸುದ್ದಿ ಮಾಧ್ಯಮಗಳು ಸಾಂಕೇತಿಕವಾಗಿ ಜನರ ನಾಡಿಮಿಡಿತ ಗ್ರಹಿಸುತ್ತೇವೆ ಎಂದು ಅವರು ಸಮರ್ಥಿಸಿಕೊಳ್ಳಬಹುದು. ಆದರೆ ಮತದಾರನ ಮತವನ್ನು ಬಹಿರಂಗ ಮಾಡುವುದು ಎಷ್ಟು ಸರಿ? ಕಾನೂನಾತ್ಮಕವಾಗಿ ಮತ್ತು ತಾಂತ್ರಿಕವಾಗಿ ಸರಿ ಇರಬಹುದು. ಆದರೆ ಸಾಮಾಜಿಕವಾಗಿ ಮತ್ತು ಪ್ರಜಾಪ್ರಭುತ್ವದ ಮುಕ್ತತೆಯ ದೃಷ್ಟಿಯಿಂದ ಇದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಡಾ.ಹೆಚ್.ಸಿ. ಮಹದೇವಪ್ಪನವರ ನಡೆ ಸ್ವಾಗತಾರ್ಹ

ಮಾನ್ಯರೆ,



ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್. ಧ್ರುವನಾರಾಯಣ್ ಅವರ ಹಠಾತ್ ನಿಧನಕ್ಕೆ ಮಿಡಿದಿರುವ ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪನವರು, ಧ್ರುವನಾರಾಯಣ್ ಪುತ್ರ ದರ್ಶನ್ ಅವರಿಗೆ ಬೆಂಬಲ ಸೂಚಿಸಿ ಸ್ಪರ್ಧೆಯಿಂದ ಹಿಂದೆ ಸರಿದಿರುವುದು ಸ್ವಾಗತಾರ್ಹ. ನಾಲ್ಕೈದು ದಶಕಗಳ ರಾಜಕಾರಣದಲ್ಲಿರುವ ಮಾಜಿ ಸಚಿವರು ಹಾಗೂ ಹಿರಿಯ ರಾಜಕಾರಣಿ ಡಾ. ಹೆಚ್.ಸಿ. ಮಹದೇವಪ್ಪನವರು ಮಾಜಿ ಸಂಸದರ ನಿಧನದಿಂದ ನಂಜನಗೂಡು ಕ್ಷೇತ್ರದ ಕಾಂಗ್ರೆಸ್ ಪಕ್ಷದ ಟಿಕೆಟ್‌ನಿಂದ ಹುಟ್ಟಿಕೊಂಡಿದ್ದ ಊಹಾ–ಪೋಹಗಳನ್ನು ಗಮನಿಸಿ ಟಿಕೆಟ್ ಆಕಾಂಕ್ಷೆಯಿಂದ ಹಿಂದೆ ಸರಿದು ತಮ್ಮ ಬದ್ಧತೆಯನ್ನು ತೋರಿಸಿಕೊಟ್ಟಿದ್ದಾರೆ. ಧ್ರುವನಾರಾಯಣ್ ಅವರ ಕುಟುಂಬಕ್ಕೆ ನೈತಿಕವಾಗಿ ಬೆಂಬಲವಾಗಿ ನಿಲ್ಲುವ ಮಾತುಗಳನ್ನು ಆಡಿದ್ದಾರೆ. ದರ್ಶನ್ ಅವರನ್ನು ನನ್ನ ಮಗ ಇದ್ದಂತೆ ಹೇಳಿ ತಮ್ಮ ಹಿರಿತನಕ್ಕೆ ಸಲ್ಲುವ ಗೌರವದ ಮಾತನಾಡಿರುವುದು ಶ್ಲಾಘನೀಯ.


–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಬದುಕ ಸವೆಸಬೇಡ; ಸವಿದು ನೋಡ !



> ❝ ಜೀವನ ಪ್ರೀತಿ ಒಂದಿದ್ದರೆ ಬದುಕಿನ ಹಲವಾರು ಮಜಲುಗಳನ್ನು ಅನುಭವಿಸಿ ಸಂತೋಷಪಡಬಹುದು. ಕಷ್ಟ, ನೋವು, ಸಂಕಟ, ದುಃಖ ಇವುಗಳೆಲ್ಲಾ ಎಲ್ಲರ ಬದುಕೆಂಬ ಪುಸ್ತಕದಲ್ಲಿ ಇರುವ ಪಾಠಗಳು. ಆದರೆ ಅದೇ ಪುಸ್ತಕದಲ್ಲಿ ಸಂತೋಷ, ನೆಮ್ಮದಿ, ತೃಪ್ತಿ, ಆಹ್ಲಾದ... ಈ ಪಾಠಗಳು ಸಹ ಇರುತ್ತವೆ. ಆದರೆ ಆ ಪಾಠಗಳನ್ನು ಓದಿ ಬದುಕಿಗೆ ಅನ್ವಯಿಸಿಕೊಳ್ಳುವವರು ಕಡಿಮೆ. ಭವಿಷ್ಯದಲ್ಲಿ ಭದ್ರತೆಯೇ ಇಲದ, ಪ್ರತಿ ಹೊತ್ತಿನ ಕೂಳನ್ನು ಸಂಪಾದಿಸುವ ಅನಿವಾರ್ಯತೆ ಇರುವ ಪ್ರಾಣಿಪಕ್ಷಿಗಳು ಸಂತೋಷ ಪಡಬೇಕಾದ ಸಮಯದಲ್ಲಿ ಇರುವ ಕಷ್ಟ, ನಷ್ಟಗಳನ್ನೆಲ್ಲಾ ಬದಿಗೊತ್ತಿ ಆನಂದಿಸುತ್ತವೆ. ಇಂಗ್ಲಿಷ್ ಭಾಷೆಯಲ್ಲಿ ಅನಾಮಿಕರೊಬ್ಬರ ಮಾತು ಹೀಗಿದೆ **'Add Life to your Days, Not days to your Life'**. ಈ ಮಾತು ಎಷ್ಟೊಂದು ಮಾರ್ಮಿಕವಾಗಿದೆ ನೋಡಿ. ನಾವು ಜೀವಿಸುವ ಪ್ರತಿದಿನದಲ್ಲಿಯೂ ಜೀವಂತಿಕೆ ಇರಬೇಕು. ಯಾಂತ್ರಿಕವಾಗಿ ದಿನ ದೂಡುವುದು ಮೂರ್ಖತನ.

ನನ್ನಂಥ ನತದೃಷ್ಟ ಬೇರಾರು ಇಲ್ಲ, ನನಗೇ ಹೀಗಾಗಬೇಕೇ? ನನ್ನದೂ ಒಂದು ಬದುಕೇ?, ನನ್ನ ಕಷ್ಟ ಯಾರಿಗೂ ಬೇಡಪ್ಪ, ಇನ್ನು ಎಷ್ಟು ವರ್ಷ ಹೀಗೆ ಬದುಕಬೇಕು?, ನಿತ್ಯ ಅನುಭವಿಸುವ ನೋವಿಗಿಂತ ಒಮ್ಮೆ ಬರುವ ಸಾವೇ ಸುಖ... ಹೀಗೆ ನಕಾರಾತ್ಮಕವಾಗಿ ಮಾತನಾಡುತ್ತಾ, ಹತಾಶೆಯನ್ನು ಹೊರಹಾಕುವ ಹಲವಾರು ಮಂದಿಯನ್ನು ದಿನವೂ ನೋಡುತ್ತೇವೆ. ಅನ್ಯರ ಬದುಕನ್ನು ಕಂಡು ಅವರು ಅಷ್ಟು ಸುಂದರವಾಗಿ ಬದುಕನ್ನು ರೂಪಿಸಿಕೊಂಡಿದ್ದಾರೆ, ನನ್ನ ಬದುಕೇಕೆ ಇಷ್ಟು ಕುರೂಪ ಎಂದು ತಮ್ಮನ್ನೇ ತಾವು ಶಪಿಸಿಕೊಳ್ಳುವವರು ಅನೇಕರಿದ್ದಾರೆ. ತನ್ನ ಬದುಕು ಹಸನಾಗಿಲ್ಲ ಎಂಬುದು ಅವರ ಒಟ್ಟಾರೆ ಅಭಿಪ್ರಾಯ. ಅವರುಗಳು ದಿನನಿತ್ಯದ ಬದುಕಿನಲ್ಲಿ ಅನಾಯಾಸವಾಗಿ ಸಿಗುವ ಸಂತೋಷದ ಕ್ಷಣಗಳನ್ನು ಅನುಭವಿಸುವುದ ಬಿಟ್ಟು, ದುಃಖ ಪಡಲು ಅನೇಕ ಕಾರಣಗಳನ್ನು ಹುಡುಕುತ್ತಿರುತ್ತಾರೆ. ಸಂತೋಷಗಳನ್ನು ಬದಿಗೊತ್ತಿ, ಎಷ್ಟೋ ವರ್ಷಗಳ ಹಿಂದೆ ನಡೆದಿರುವ ಒಂದು ಕಹಿ ಘಟನೆಯನ್ನು ನೆನೆದು ಶೋಕಿಸುವುದು ಕೆಲವರಿಗೆ ಅಭ್ಯಾಸವಾಗಿದೆ. ಸುಂದರವಾಗಿ ಇರುವ ಬದುಕನ್ನು ಸವಿಯುವ ಬದಲು ಬರೀ ಕೊರಗುತ್ತಾ ಸವೆಸುವುದರಲ್ಲೇ ತಮ್ಮ ಜೀವಿತಾವಧಿಯನ್ನು ಕಳೆದುಬಿಡುವುದು ವಿಪರ್ಯಾಸದ ಸಂಗತಿ.

ಜೀವನ ಪ್ರೀತಿ ಒಂದಿದ್ದರೆ ಬದುಕಿನ ಹಲವಾರು ಮಜಲುಗಳನ್ನು ಅನುಭವಿಸಿ ಸಂತೋಷ ಪಡಬಹುದು. ಕಷ್ಟ ನೋವು, ಸಂಕಟ, ದುಃಖ ಇವುಗಳೆಲ್ಲಾ ಎಲ್ಲರ ಬದುಕೆಂಬ ಪುಸ್ತಕದಲ್ಲಿ ಇರುವ ಪಾಠಗಳು. ಆದರೆ ಅದೇ ಪುಸ್ತಕದಲ್ಲಿ ಸಂತೋಷ, ನೆಮ್ಮದಿ, ತೃಪ್ತಿ, ಆಹ್ಲಾದ... ಈ ಪಾಠಗಳು ಸಹ ಇರುತ್ತವೆ. ಆದರೆ ಆ ಪಾಠಗಳನ್ನು ಓದಿ ಬದುಕಿಗೆ ಅನ್ವಯಿಸಿಕೊಳ್ಳುವವರು ಕಡಿಮೆ. ಭವಿಷ್ಯದಲ್ಲಿ ಭದ್ರತೆಯೇ ಇಲ್ಲದ ಪ್ರತಿ ಹೊತ್ತಿನ ಕೂಳನ್ನು ಸಂಪಾದಿಸುವ ಅನಿವಾರ್ಯತೆ ಇರುವ ಪ್ರಾಣಿಪಕ್ಷಿಗಳು ಸಂತೋಷ ಪಡಬೇಕಾದ ಸಮಯದಲ್ಲಿ ಇರುವ ಕಷ್ಟ, ನಷ್ಟಗಳನ್ನೆಲ್ಲಾ ಬದಿಗೊತ್ತಿ ಆನಂದಿಸುತ್ತವೆ. ಮನುಷ್ಯ ಮಾತ್ರ ಆನಂದದ ಸವಿರುಚಿ ನೋಡದೆ ನೋವಿನ ಕಹಿರುಚಿಯನ್ನೇ ಹೆಚ್ಚು ನೋಡುವ ಮೂಲಕ 'ಬದುಕೆಂದರೆ ಬರೀ ಕಹಿ ಒಗರು' ಎಂದು ನಿತ್ಯ ಶಪಿಸುತ್ತಾ ದಿನದೂಡುತ್ತಾನೆ. ಒಬ್ಬ ವ್ಯಕ್ತಿ ಜೀವಂತವಾಗಿದ್ದಾನೆ ಎಂದರೆ ಅದು ಬದುಕಲ್ಲ, ಅವನ ಬದುಕಿನಲ್ಲಿ ಜೀವಂತಿಕೆ ಇರಬೇಕು. ಎಷ್ಟೋ ಜನ ಜೀವಂತ ಶವದ ರೀತಿ ಬದುಕನ್ನು ಸವೆಸುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ ಅನಾಮಿಕರೊಬ್ಬರ ಮಾತು ಹೀಗಿದೆ 'Add Life to your Days, Not days to your Life'. ಈ ಮಾತು ಎಷ್ಟೊಂದು ಮಾರ್ಮಿಕವಾಗಿದೆ ನೋಡಿ. ನಾವು ಜೀವಿಸುವ ಪ್ರತಿದಿನದಲ್ಲಿಯೂ ಜೀವಂತಿಕೆ ಇರಬೇಕು. ಯಾಂತ್ರಿಕವಾಗಿ ದಿನ ದೂಡುವುದು ಮೂರ್ಖತನ.

ಸಂತೋಷವನ್ನು ಮುಂದೂಡುವ ಮೂರ್ಖರನ್ನು ಸಹ ಕಾಣಬಹುದು. ಬದುಕಿನಲ್ಲಿ ನೋವು–ನಲಿವುಗಳು ಸಹಜ. ಅವುಗಳನ್ನು ಬಂದಾಗ ಅನುಭವಿಸುತ್ತಾ, ಸ್ಪಂದಿಸುತ್ತಾ ಮುಂದೆ ನಡೆಯುವವನೇ ಜಾಣ. ಬದುಕಿನ ಹಾದಿಯಲ್ಲಿ ಅನೇಕ ಒತ್ತಡಗಳು ಬರುತ್ತವೆ. ಒತ್ತಡಗಳನ್ನು ಸರಿಯಾಗಿ ನಿರ್ವಹಿಸಿಕೊಂಡು ಮುಂದೆ ಸಾಗುವುದು ಸಹಜ ಬದುಕಿನ ಲಕ್ಷಣ. ನೋವೇ ಬೇಡ, ನನಗೆ ಸಂತೋಷ ಮಾತ್ರ ಬೇಕು ಎನ್ನುವುದು ಅಸಹಜವಾದ ಭಾವ. ಮಗುವೊಂದು ಭೂಮಿಗೆ ಕಾಲಿಡಬೇಕಾದರೆ ತಾಯಿಯ ಜೀವ ಒಂಬತ್ತು ತಿಂಗಳು ತನ್ನ ಒಡಲಲ್ಲಿ ಇರಿಸಿಕೊಂಡು ನೋವನ್ನು ಅನುಭವಿಸಲೇ ಬೇಕು. ಮಗು ಜನನವಾದ ನಂತರ ತಾಯಿಗೆ ನೋವಿನಲ್ಲೂ ನಗುವು ಇರುತ್ತದೆ. ಅದು ಪ್ರಕೃತಿಯ ನಿಯಮ. ನೋವು ಎಂಬುದು ಬೇಡ ನನಗೆ ನಲಿವು ಮಾತ್ರ ಬೇಕು ಎನ್ನುವ ಮನೋಭಾವವು 'ನನಗೆ ಗರ್ಭ ಧರಿಸುವುದು ಬೇಡ, ಆದರೆ ನನ್ನದೇ ಮಗು ಬೇಕು' ಎಂದು ತಾಯಿಯೊಬ್ಬಳು ಬಯಸಿದಂತಾಗುತ್ತದೆ. ನೋವನ್ನೇ ಅನುಭವಿಸದ ವ್ಯಕ್ತಿ ಒಬ್ಬ ಇದ್ದಾನೆ ಎಂದರೆ ಅವನು ಮೃತಪಟ್ಟ ವ್ಯಕ್ತಿಯಾಗಿರುತ್ತಾನೆ. ಆದ್ದರಿಂದ ನೋವು ನಲಿವುಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಹೊಂದಬೇಕು.

ಎಷ್ಟೋ ಜನ ತಮ್ಮ ಕೈಯಲ್ಲಿರುವ ವಜ್ರದ ಬೆಲೆಯನ್ನು ಅರಿಯದೆ ಕೇವಲ ಕಲ್ಲಿಗಾಗಿ ಆಸೆ ಪಡುತ್ತಾರೆ. ಅಂದರೆ ಜೀವನವನ್ನು ಅನನ್ಯ ರೀತಿಯಲ್ಲಿ ಅನುಭವಿಸಲು ಆರೋಗ್ಯ ಹಾಗೂ ದೃಢಕಾಯ ಬಹುಮುಖ್ಯ. ಅಮೂಲ್ಯವಾದ ಆರೋಗ್ಯ ಇರುವುದು ಒಂದು ಭಾಗ್ಯ. ಅದರ ಅರಿವೇ ಇರದೆ ಕ್ಷುಲ್ಲಕ ಸಂಗತಿಗಳಿಗಾಗಿ ಆಸೆ ಪಟ್ಟು ಇರುವ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ನೆಮ್ಮದಿಯ ಬದುಕನ್ನು ಕಾಣಬಹುದಾಗಿದ್ದರೂ, ತನಗೆ ಅವಶ್ಯವಿಲ್ಲದ ಸಂಗತಿಗಳಿಗೆ ಮೋಹ ಪಟ್ಟು ಇರುವ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಬಹುತೇಕ ಮಂದಿಯ ಸಮಸ್ಯೆ ಇದು. ತಮ್ಮ ಬದುಕನ್ನು ಅನ್ಯರ ಬದುಕಿನೊಂದಿಗೆ ಹೋಲಿಸಿಕೊಳ್ಳುವುದು. ಅವರ ಬದುಕನ್ನು ಅನುಸರಿಸಲು ಬಯಸುವುದು. ಹಾಗೆಯೇ ಅನ್ಯರ ಮೆಚ್ಚಿಸಲು ತಮ್ಮ ಶಕ್ತಿ ಹಾಗೂ ಸಾಮರ್ಥ್ಯ ಮೀರಿ ಸಾಲ ಮಾಡುವುದು. ನಮ್ಮ ಬದುಕು ನಮಗೆ ಮೆಚ್ಚುಗೆಯಾಗಬೇಕೆ ವಿನಃ ಮತ್ತಾರಿಗೂ ಅಲ್ಲ. ಅನ್ಯರನ್ನು ಮೆಚ್ಚಿಸಲು ನಮ್ಮ ಬದುಕು ನಾಟಕವೂ ಅಲ್ಲ, ಧಾರಾವಾಹಿಯೂ ಅಲ್ಲ, ಸಿನಿಮಾವಂತೂ ಅಲ್ಲವೇ ಅಲ್ಲ. ನೋಡುವವರ ಮೆಚ್ಚಿಸಿ ಚಪ್ಪಾಳೆ ಗಿಟ್ಟಿಸಿಕೊಳ್ಳುವುದರಿಂದ ಬರುವ ಭಾಗ್ಯವಾದರೂ ಏನು? ನಮಗಾಗಿ ಬದುಕುವುದ ಕಲಿಯಬೇಕು. ನಮಗಾಗಿ ಬದುಕಿದರೆ ನಮ್ಮ ಬದುಕು ಸ್ವರ್ಗ, ಪರರ ಮೆಚ್ಚಿಸಲು ಬದುಕಿದರೆ ಅದು ನರಕವೇ ಸರಿ.

ನನ್ನ ಬಳಿ ಅದು ಇಲ್ಲ, ಇದು ಇಲ್ಲ. ಅನ್ಯರ ಬಳಿ ಏನೆಲ್ಲಾ ಇದೆ ಎಂದು ಕೊರಗುತ್ತಾ, ಇರುವ ಬೆಲೆಬಾಳುವ ಸಂಗತಿಗಳನ್ನು ಗುರುತಿಸಿ ಅನುಭವಿಸದೇ ಇರುವವರು ಅನೇಕ ಮಂದಿ. ಸಂತೋಷ ಕೇವಲ ಸಂಗ್ರಹಿಸುವ ವಸ್ತುಗಳಲ್ಲಿ ಇರುವುದಾಗಿದ್ದರೆ ಸಿರಿವಂತರ ಮನೆಯಲ್ಲಿ ಸಂತೋಷ ಮನೆ ಮಾಡಬೇಕಿತ್ತು. ಸಂತೋಷ ಎಂಬುದು ಬಾಹ್ಯ ಸಂಗತಿ ಅಲ್ಲವೇ ಅಲ್ಲ, ಅದೊಂದು ಆಂತರಿಕ ಅನುಭೂತಿ. ಸಂತೋಷ ಪಡುವ ಮನಸ್ಸಿರುವವನು ಒಂದು ಇಳಿ ಸಂಜೆ ನದಿ ತೀರದಲ್ಲಿ ನದಿಯ ಹರಿವನ್ನು ನೋಡುತ್ತಾ, ಪ್ರಕೃತಿಯಲ್ಲಿನ ಸೊಬಗನ್ನು ಸವಿಯುತ್ತಾ ಮೈಮರೆತು ಸಂತೋಷಿಸುತ್ತಾನೆ. ದುಃಖ ಪಡುವವನಿಗೆ ಸಮುದ್ರ ತೀರಕ್ಕೆ ಕರೆದುಕೊಂಡು ಹೋದರೂ, ಅಲ್ಲಿ ಖುಷಿ ಪಡಲು ಅನೇಕ ಸಂಗತಿಗಳಿದ್ದರೂ, ಅವನು ಅವುಗಳನ್ನು ಗಮನಿಸದೇ ಸಮುದ್ರದ ನೀರು ಕುಡಿಯಲು ಯೋಗ್ಯವಲ್ಲ, ಅದು ಉಪ್ಪು ನೀರು ಎಂದು ದೂರುತ್ತಾ ದುಃಖಿಸುವುದನ್ನು ಮುಂದುವರಿಸುತ್ತಾನೆ. ಖುಷಿ ಪಡುವವನಿಗೆ ಸಣ್ಣ–ಸಣ್ಣ ಸಂಗತಿಗಳು ಅಮಿತಾನಂದವನ್ನು ನೀಡುತ್ತವೆ. ದುಃಖ ಪಡುವವನಿಗೆ ಸೃಷ್ಟಿಕರ್ತ ಬ್ರಹ್ಮನೇ ಬಂದರೂ ಅವನನ್ನು ಖುಷಿಯಾಗಿ ಇಡಲಾರ.

ಧನಾತ್ಮಕ ಆಲೋಚನೆಗಳು ಮನುಷ್ಯನನ್ನು ಸಂತೋಷವಾಗಿಡಲು ಸಹಕರಿಸುತ್ತವೆ. ಮನುಷ್ಯ ವಾಸ್ತವಕ್ಕಿಂತ ಕಲ್ಪನೆಯಲ್ಲಿಯೇ ತುಂಬಾ ಯಾತನೆ ಅನುಭವಿಸುತ್ತಾನೆ. ಅನೇಕರು ಋಣಾತ್ಮಕ ಆಲೋಚನೆಗಳಿಂದ ಮುಂದೆ ತಾವು ಮಾಡಬಹುದಾದ ಕೆಲಸಗಳನ್ನು ಪರಿಪೂರ್ಣವಾಗಿ ಮಾಡದೆ ಗೊಂದಲ ಮಾಡಿಕೊಳ್ಳುತ್ತಾರೆ. ಅನಗತ್ಯವಾಗಿ ಯೋಚನೆ ಮಾಡುತ್ತಾ, ತಾವು ಅಸಂತೋಷವಾಗಿರುವುದಲ್ಲದೆ ತನ್ನೊಟ್ಟಿಗಿರುವವರಿಗೂ ಕಿರಿಕಿರಿ ಆಗುವಂತೆ ಮಾಡಿಬಿಡುತ್ತಾರೆ. ಎಷ್ಟೋ ಜನ ದೇವಸ್ಥಾನಕ್ಕೆ ಹೋದರೂ ಅಲ್ಲಿಯೂ ನೆಮ್ಮದಿ ಕಂಡುಕೊಳ್ಳದೆ ಇರುವ ನೆಮ್ಮದಿಯನ್ನು ಹಾಳುಮಾಡಿಕೊಳ್ಳುವ ಜಾಯಮಾನದವರಾಗಿರುತ್ತಾರೆ. ಕೆಲವರು ದೇವಸ್ಥಾನದಲ್ಲಿ ಕೇವಲ ದೇವರನ್ನು ಕಂಡು ಪುನೀತರಾಗದೆ, ಧ್ಯಾನದಿಂದ ಆನಂದ ಅನುಭವಿಸದೆ ದೇವಸ್ಥಾನಕ್ಕೆ ಬಂದಿರುವವರನ್ನು ಕಂಡು ಈರ್ಷೆ ಪಟ್ಟು ಇರುವ ಮನಃಶಾಂತಿಯನ್ನು ಹಾಳು ಮಾಡಿಕೊಳ್ಳುತ್ತಾರೆ. ಅವರು ಕಾರಿನಲ್ಲಿ ಬಂದಿದ್ದರು, ಅವರು ಇಷ್ಟು ಗ್ರಾಂ ಬಂಗಾರ ಹಾಕಿಕೊಂಡಿದ್ದರು, ಅವರು ಹುಂಡಿಗೆ ಸಾವಿರಾರು ರೂಪಾಯಿ ಕಾಣಿಕೆ ಹಾಕಿದರು ಎಂದು ಅನಗತ್ಯವಾದ ವಿಷಯಗಳಿಗೆ ಆದ್ಯತೆ ನೀಡಿ ದೇವಸ್ಥಾನಕ್ಕೆ ಹೋದ ಉದ್ದೇಶವನ್ನೇ ಮರೆತು ಮೂರ್ಖರಾಗುತ್ತಾರೆ.

ಗುರಿ ತಲುಪಲು ಬದುಕೆಂಬುದು ನೈಸ್ ಆಗಿರುವ, ನೇರವಾಗಿರುವ ಹೆದ್ದಾರಿಯಲ್ಲ. ಅನೇಕ ಅನಿರೀಕ್ಷಿತ ತಿರುವುಗಳನ್ನು ಹೊಂದಿರುವ, ಹಳ್ಳಕೊಳ್ಳಗಳನ್ನು ಹೊಂದಿರುವ ಕಲ್ಲುಮಣ್ಣುಗಳ ಹಾದಿ. ಅದರಲ್ಲಿ ಪರಿಶ್ರಮದಿಂದ ನಡೆದು ಆತ್ಮ ಸಂತೋಷವನ್ನು ಪಡೆದುಕೊಳ್ಳುವವರು ಅನೇಕರಿದ್ದಾರೆ. ಕೆಲವರು ಮಾತ್ರ ಕಲ್ಲುಮಣ್ಣಿನ ದಾರಿಯನ್ನು ಶಪಿಸುತ್ತಾ ತಮ್ಮ ಗುರಿ ಮುಟ್ಟುವಲ್ಲಿ ವಿಫಲರಾಗುತ್ತಾರೆ. ಅನೇಕ ಮನೆಗಳಲ್ಲಿ ಗಮನಿಸಿರಬಹುದು, ಮನೆಗೆಲಸದವರು ಖುಷಿಯಾಗಿರುವಷ್ಟು, ಆ ಮನೆಯ ಮಾಲೀಕರು ಖುಷಿಯಾಗಿರುವುದಿಲ್ಲ. ಕೆಲಸದವರು ತಮ್ಮ ಪುಟ್ಟ ಪ್ರಪಂಚದಲ್ಲಿ ಅತೀವವಾದ ಖುಷಿಯನ್ನು ಅನುಭವಿಸುತ್ತಾರೆ, ಕಡಿಮೆ ನಿರೀಕ್ಷೆಗಳು, ಕಿರು ಆಸೆಗಳು, ಹೊತ್ತೊತ್ತಿಗೆ ಊಟ ನಿದ್ರೆ ದೊರಕಿದಲ್ಲಿ ಸ್ವರ್ಗ ಸುಖವನ್ನು ಅನುಭವಿಸುತ್ತಾರೆ. ಆದರೆ ಮನೆಯ ಯಜಮಾನನಿಗೆ ಹೆಚ್ಚು ನಿರೀಕ್ಷೆಗಳು, ದುರಾಸೆ, ಹೊತ್ತೊತ್ತಿಗೆ ಊಟ, ನಿದ್ರೆ ಇರುವುದಿಲ್ಲ. ಯಜಮಾನ ಕೊಟ್ಟ ಹಳೆ ಬಟ್ಟೆ ಉಟ್ಟು ಕೆಲಸದವರು ಸಂಭ್ರಮಿಸುತ್ತಾರೆ. ಆದರೆ ಹೊಸ ಬಟ್ಟೆ ಧರಿಸುವ ಯಜಮಾನನ ಮುಖದಲ್ಲಿ ಸಂಭ್ರಮವೇ ಇರುವುದಿಲ್ಲ. ಇದಲ್ಲವೆ ವಿಪರ್ಯಾಸ, ಎಲ್ಲವೂ ಇದ್ದು ಏನೂ ಖುಷಿ ಅನುಭವಿಸದ ಯಜಮಾನ, ಏನೂ ಇಲ್ಲದಿದ್ದರೂ ಎಲ್ಲದರಲ್ಲೂ ಖುಷಿ ಕಾಣುವ ಕೆಲಸಗಾರ.

ಕೊರತೆಗಳು ಯಾರಿಗಿಲ್ಲ ಹೇಳಿ. ಪ್ರಾಣಿ ಪಕ್ಷಿಗಳದ್ದೂ ನಿತ್ಯವೂ ಹೋರಾಟದ ಬದುಕೆ. ಪ್ರಕೃತಿ ವಿಕೋಪಗಳಿಗೆ ನಲುಗಿಹೋಗುವ ಅವುಗಳಿಗೆ ಬದುಕು ಒಂದು ಅದೃಷ್ಟ ಪರೀಕ್ಷೆಯಂತೆ ಇರುತ್ತದೆ. ಆದರೆ ಮನುಷ್ಯನಿಗೆ ಎಲ್ಲವೂ ಸರಿಯಿದ್ದರೂ ಏನಾದರೂ ಕೊರತೆ ಹುಡುಕುವ ಮನೋಭಾವ ಇದ್ದಂತಿದೆ. ಯಾರು ಪರಿಪೂರ್ಣರಲ್ಲ, ಎಲ್ಲರಿಗೂ ಒಂದಲ್ಲ ಒಂದು ಕೊರತೆ ಇರುತ್ತದೆ. ಹೋರಾಟವಿಲ್ಲದ ಬದುಕಿನಲ್ಲಿ ಸ್ವಾರಸ್ಯವೇ ಇರುವುದಿಲ್ಲ. ಕುಳಿತು ತಿಂದವ ಬೇಗ ಸಾಯುತ್ತಾನೆ, ದುಡಿದು ತಿಂದವ ಹೆಚ್ಚು ದೃಢಕಾಯನಾಗಿ ಆರೋಗ್ಯವಂತನಾಗಿ ವಯೋಸಹಜವಾಗಿ ಸಾಯುತ್ತಾನೆ.

ಬದುಕನ್ನು ಬಂದಂತೆ ಸ್ವೀಕರಿಸುವುದು ಜಾಣತನ. ಅನ್ಯರ ಬದುಕಿನ ಜೊತೆ ಹೋಲಿಕೆ ಸಲ್ಲ, ಪೈಪೋಟಿಯೂ ಸಲ್ಲ. ಏಕೆಂದರೆ ಅವರ ಬದುಕಿನ ಗುರಿ ಹಾಗೂ ಮಾರ್ಗಗಳೇ ಬೇರೆ ಇರುತ್ತವೆ. ನಮ್ಮ ಬದುಕಿನ ಗುರಿ ಮುಟ್ಟಲು ಪ್ರಯತ್ನಿಸಬೇಕು. ಯಶಸ್ಸು ಸಿಕ್ಕ ಮೇಲೆ ಸಂಭ್ರಮಿಸಲು ಯೋಜಿಸಬಾರದು. ಯಶಸ್ಸಿನ ಹಾದಿಯನ್ನು ಸಂಭ್ರಮಿಸುವುದು ಒಳ್ಳೆಯದು. ಏಕೆಂದರೆ ನಾಳೆ ಎಂಬುದು ನಮ್ಮ ಕೈಯಲ್ಲಿಲ್ಲ, ಇರುವ ಇಂದಿನ ದಿನವನ್ನು ಸುಂದರ ಮಾಡಿಕೊಳ್ಳುವವನು ಪೆದ್ದನಲ್ಲ. ಏನಂತೀರಿ?

ಪದ ತಾಂಬೂಲ : ಜೀವನ ಸಾಗಿಸಲು ಅದು ಸರಕಲ್ಲ, ಅದೊಂದು ಅಪೂರ್ವ ಭಾವಯಾನ

ಗುಬ್ಬಚ್ಚಿಗಳ ಸಂರಕ್ಷಣೆಗೆ ಜನಜಾಗೃತಿ



ಮೈಸೂರು, ಮಾ.19(ಆರ್‌ಕೆ)– ನಶಿಸುತ್ತಿರುವ ಗುಬ್ಬಚ್ಚಿಗಳ ಸಂತತಿ ಉಳಿಸುವ ಕುರಿತಂತೆ ಜೀವ ದಯಾ ಜೈನ ಚಾರಿಟಿ ಮತ್ತು ಪೀಪಲ್ ಫಾರ್ ಅನಿಮಲ್ಸ್ ಸಂಯುಕ್ತಾಶ್ರಯದಲ್ಲಿ ಇಂದು ಮೈಸೂರಿನ ಸಿದ್ಧಾರ್ಥ ಬಡಾವಣೆಯಲ್ಲಿರುವ ಸಿಐಟಿಬಿ ಕಲ್ಯಾಣ ಮಂಟಪದಲ್ಲಿ ಜನಜಾಗೃತಿ ಕಾರ್ಯಕ್ರಮ ನಡೆಯಿತು.

ವಿಶ್ವ ಗುಬ್ಬಚ್ಚಿ ದಿನಾಚರಣೆ (ಮಾ.20) ಅಂಗವಾಗಿ ಏರ್ಪಡಿಸಿದ್ದ ಅರಿವು ಕಾರ್ಯಕ್ರಮವನ್ನು ಉಪಮೇಯರ್ ಡಾ.ಜಿ. ರೂಪಾ ಉದ್ಘಾಟಿಸಿದರು.

ನಗರ ಪ್ರದೇಶಗಳಲ್ಲಿ ಬೆಳೆಯುತ್ತಿರುವ ಕಾಂಕ್ರಿಟ್ ಕಟ್ಟಡ, ಹೆಚ್ಚುತ್ತಿರುವ ವಾಹನಗಳ ಸಂಖ್ಯೆ, ಶಬ್ದಮಾಲಿನ್ಯ, ವಾಯು ಮಾಲಿನ್ಯದಿಂದಾಗಿ ಗುಬ್ಬಚ್ಚಿಗಳ ಸಂತತಿ ನಶಿಸುತ್ತಿದ್ದು, ಅದರಿಂದ ನಿಸರ್ಗ ಹಾಗೂ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದರು.

ನೈಸರ್ಗಿಕ ಸಂಪನ್ಮೂಲಗಳು ಕಡಿಮೆಯಾಗುತ್ತಿದ್ದು, ಮೊಬೈಲ್, ಇಂಟರ್‌ನೆಟ್ ಹಾಗೂ ಟಿವಿ ಸಿಗ್ನಲ್‌ಗಳಿಂದ ಎಲೆಕ್ಟ್ರೋ ಮ್ಯಾಗ್ನಟಿಕ್ ರೇಡಿಯೇಷನ್ ಉತ್ಪತ್ತಿಯಾಗುತ್ತಿರುವ ಕಾರಣ ಗುಬ್ಬಚ್ಚಿ ಸೇರಿದಂತೆ ಪಕ್ಷಿ ಸಂಕುಲ ನಾಶವಾಗುತ್ತಿದ್ದು, ಈಗಲೂ ನಾವು ಅವುಗಳನ್ನು ಉಳಿಸಿ ಸಂರಕ್ಷಿಸಬೇಕು ಎಂದು ತಿಳಿಸಿದರು.

ನಾನಿನ್ನೂ ಬದುಕಿದ್ದೇನೆ. ಸಹಾಯ ಮಾಡಿ (I am still alive- Save me) ಎಂಬ ಹೆಸರಿನ ಕಾರ್ಯಕ್ರಮದಲ್ಲಿ ಗುಬ್ಬಚ್ಚಿ ಸಂರಕ್ಷಣೆ ಕುರಿತ ಕಿರುಚಿತ್ರ ಪ್ರದರ್ಶನ, ಗುಬ್ಬಚ್ಚಿ ಬೋರ್ಡ್ ಗೇಮ್ ಬಿಡುಗಡೆ ಹಾಗೂ ಚಿತ್ರ ಸ್ಪರ್ಧೆ ಏರ್ಪಡಿಸಲಾಗಿತ್ತು. ಗುಜರಾತ್, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ರಾಜಸ್ಥಾನ ರಾಜ್ಯಗಳ ಪಕ್ಷಿ ಮನೆ (Bird houses) ಗಳನ್ನು ಈ ವೇಳೆ ಪ್ರದರ್ಶಿಸಲಾಗಿತ್ತು.

ಅಂತಾರಾಷ್ಟ್ರೀಯ ಭಾರತೀಯ ಜೈನ ಮಿಲನ ಉಪಾಧ್ಯಕ್ಷ ಪ್ರಸನ್ನ ಕುಮಾರ್ ಜೈನ್, ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್ ಮುಖ್ಯ ಕಾರ್ಯದರ್ಶಿ ಗೌತಮ್ ಸಲೇಚ, ಭಾರತೀಯ ಜೈನ್ ಸಂಘಟನೆ ಕರ್ನಾಟಕ ಘಟಕದ ಉಪಾಧ್ಯಕ್ಷ ಪ್ರಕಾಶ್ ಗುಲೇಚ ಹಾಗೂ ಕೋಕಿಲಾ ಜೈನ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮಣ್ಣಿನಿಂದ ತಯಾರಿಸಿದ ಪಕ್ಷಿ ಮನೆಗಳನ್ನು ಇದೇ ವೇಳೆ ಆಸಕ್ತ ಪಕ್ಷಿ ಪ್ರೇಮಿಗಳಿಗೆ ವಿತರಿಸಲಾಯಿತು.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಮಾ.19– 2022–23ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರೆಸಿಕೊಂಡು ಹೋಗಲು ಇಲಾಖಾ ವತಿಯಿಂದ ಮರಗೆಲಸದ ಉಪಕರಣಗಳನ್ನು ಪಡೆಯಲು ಇಚ್ಛಿಸಿದಲ್ಲಿ, ಅನುಬಂಧದಲ್ಲಿರುವ ಮಾಹಿತಿಯಂತೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು https://mysore.nic.in ಅಪ್ಲೋಡ್ ಮಾಡಿ ಅನ್‌ಲೈನ್ ಮೂಲಕ ಮಾ.26ರೊಳಗೆ ಅರ್ಜಿ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ, ಮೈಸೂರಿನ ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗದ ತಾಲೂಕು ಕೈಗಾರಿಕಾ ಕೈಗಾರಿಕಾ ವಿಸ್ತರಣಾಧಿಕಾರಿಗಳು, ಉಪನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ.

ಉಚಿತ ತಪಾಸಣಾ, ಚಿಕಿತ್ಸಾ ಶಿಬಿರ

ಮೈಸೂರು,ಮಾ.19– ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಹೊರರೋಗಿ ವಿಭಾಗದಲ್ಲಿ (ರೂಮ್ ನಂ.10) ಮಾ.24 ರಿಂದ 'ಹುಳುಕಡ್ಡಿ ಅಥವಾ ಗಜಕರ್ಣಕ್ಕೆ (Fungal/Tinea Infection)' ಸಂಬಂಧಿಸಿದ ತೊಂದರೆಗಳಿಗೆ ತಪಾಸಣಾ ಮತ್ತು ಉಚಿತ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ ಡಾ.ಡಯಾನ ಟಿ.ಎಲ್. (8618167579) ಅವರನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಳದಿ ಆಕರ್ಷಣೆ....



ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ ಹಳದಿ ಆಕರ್ಷಣೆ.... ಮುಸ್ಸಂಜೆ ವೇಳೆಯಲ್ಲಿ ಮನ ಸೆಳೆಯುವ ಹೂಗಳ ರಾಶಿ...! ರಸ್ತೆ ಡಿವೈಡರ್‌ನಲ್ಲಿರುವ ಪೆಲ್ಟೋಫೋರಂ ಮರಗಳಿಂದ ಉದುರಿರುವ ಹಳದಿ ಬಣ್ಣದ ಹೂಗಳ ರಾಶಿ ಮುಸ್ಸಂಜೆ ವೇಳೆಯಲಿ ನೋಡುಗರನ್ನು ಆಕರ್ಷಿಸುತ್ತಿದೆ.

ಆಸೀಸ್‌ಗೆ ಟೀಂ ಇಂಡಿಯಾ ವಿರುದ್ಧ ಭರ್ಜರಿ ಜಯ

ವಿಶಾಖಪಟ್ಟಣ, ಮಾ.19– ಮಿಚೆಲ್ ಸ್ಟಾರ್ಕ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಆಸ್ಟ್ರೇಲಿಯಾ ಭಾರತದ ವಿರುದ್ಧದ 2ನೇ ಪಂದ್ಯದಲ್ಲಿ 10 ವಿಕೆಟ್‌ಗಳ ಭರ್ಜರಿ ಜಯಗಳಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿ 1–1ರಿಂದ ಸಮಬಲಗೊಂಡಿದೆ.

ಇಲ್ಲಿನ ಡಾ.ವೈ.ಎಸ್.ರಾಜಶೇಖರ ರೆಡ್ಡಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 26 ಓವರ್‌ಗಳಲ್ಲಿ 117 ರನ್‌ಗಳಿಗೆ ಆಲೌಟಾಯಿತು. ಭಾರತದ ಪರ ವಿರಾಟ್ ಕೊಹ್ಲಿ 31, ಅಕ್ಷರ್ ಪಟೇಲ್ 29, ರವೀಂದ್ರ ಜಡೇಜಾ 16 ಹಾಗೂ ನಾಯಕ ರೋಹಿತ್ ಶರ್ಮಾ 13 ರನ್ ಗಳಿಸಿದರು. ಆಸೀಸ್ ಪರ ಮಿಚೆಲ್ ಸ್ಟಾರ್ಕ್ 5, ಸೀನ್ ಅಬೋಟ್ 3, ನಾಥನ್ ಇಲಿಸ್ 2 ವಿಕೆಟ್ ಉರುಳಿಸಿದರು.

118 ರನ್‌ಗಳ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಕೇವಲ 11 ಓವರ್‌ಗಳಲ್ಲಿ 121 ರನ್ ಗಳಿಸುವ ಮೂಲಕ ಭರ್ಜರಿ ಜಯ ಗಳಿಸಿತು. ತಂಡದ ಪರ ಬಿರುಸಿನ ಬ್ಯಾಟಿಂಗ್ ಮಾಡಿದ ಮಿಚೆಲ್ ಮಾರ್ಷ್ 36 ಎಸೆತಗಳಲ್ಲಿ ತಲಾ 6 ಸಿಕ್ಸರ್, ಬೌಂಡರಿ ಒಳಗೊಂಡ 66 ರನ್‌ಗಳಿಸಿ ಅಜೇಯರಾಗುಳಿದರೇ, ಟ್ರಾವೀಸ್ ಹೆಡ್ 30 ಎಸೆತಗಳಲ್ಲಿ 10 ಬೌಂಡರಿ ಒಳಗೊಂಡ 51ರನ್ ಗಳಿಸಿ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟರು. ಪಂದ್ಯದಲ್ಲಿ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಸ್ಟಾರ್ಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಭವಿಷ್ಯ ನಿಧಿ ಪಿಂಚಣಿಗೆ ಅರ್ಜಿ ಸಲ್ಲಿಸುವ ದಿನಾಂಕ ವಿಸ್ತರಣೆ

ಮೈಸೂರು, ಮಾ.19–ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ ಹೆಚ್ಚಿನ ವೇತನದ ಮೇಲೆ ಪಿಂಚಣಿಗೆ ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸುವ ದಿನಾಂಕವನ್ನು ಮೇ 3ರವರೆಗೆ ವಿಸ್ತರಿಸಲಾಗಿದೆ. ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಸೆಪ್ಟೆಂಬರ್ 1, 2014ರ ಮೊದಲು ನಿವೃತ್ತರಾದ ಕಾರ್ಮಿಕರು ಹಾಗೂ ನಿವೃತ್ತಿ ಮೊದಲು ಹೆಚ್ಚಿನ ವೇತನದ ಮೇಲೆ ಪಿಂಚಣಿಗೆ ಜಂಟಿ ಆಯ್ಕೆಯನ್ನು ಚಲಾಯಿಸಿದ ಕಾರ್ಮಿಕರು ಅರ್ಹರಾಗಿರುತ್ತಾರೆ. 1.9.2014ರ ಮೊದಲು ನಿವೃತ್ತರಾದ ಮತ್ತು ಅವರ ನಿವೃತ್ತಿಯ ಮೊದಲು ಜಂಟಿ ಆಯ್ಕೆಗಳನ್ನು ಚಲಾಯಿಸಿದ ಕಾರ್ಮಿಕರಿಗೆ ಜಂಟಿ ಆಯ್ಕೆಗಳ ಊರ್ಜಿತಗೊಳಿಸುವಿಕೆಗಾಗಿ ಎಪಿಎಫ್‌ಓ ವೆಬ್‌ಸೈಟ್‌ನಲ್ಲಿ ಮಾ.3ರವರೆಗೆ ಒದಗಿಸಲಾಗಿತ್ತು ಎಂದು ಪ್ರಕಟಣೆ ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

We are HIRING Now!
• Sr. EXECUTIVE SPARES
Graduates with Computer knowledge
• OFFICE ASSISTANT
Contact between 9.30 am to 6 pm
Mob: 97415-31006

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಮನೆ ಭೋಗ್ಯಕ್ಕಿದೆ
ಹೆಬ್ಬಾಳ್ 2ನೇ ಹಂತ, 3ನೇ ಕ್ರಾಸ್ ನೆಲ ಅಂತಸ್ತು, 2 BHK
8951262136

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಬೇಕಾಗಿದ್ದಾರೆ
ಮನೆಯಲ್ಲೇ ಉಳಿದುಕೊಂಡು, ಮನೆ ಕೆಲಸ, ಅಡುಗೆಮತ್ತು ವೃದ್ಧ ದಂಪತಿಗಳ ಹಾರೈಕೆ ಮಾಡಲು ಮಹಿಳೆ ಬೇಕಾಗಿದ್ದಾರೆ. ಗ್ರಾಮೀಣ ಮಹಿಳೆಯರಿಗೆ ಮೊದಲ ಆದ್ಯತೆ. ಜಾತಿ ಭೇದವಿಲ್ಲ. ತಿಂಗಳಿಗೆ 2 ದಿನ ರಜ. ಸಂಬಳ: 10,000/– ಸಂಪರ್ಕಿಸಿ:
9980733384

ACTIVELY HIRING
DATA ENTRY ASSISTANT
Any Qualification, Fresher or Experienced
Typing speed 60-80 WPM
9 AM to 6 PM (MON-SAT)
VLOOKUP BUSINESS SOLUTIONS PVT LTD.
Vijayanagar 1st Stage, Mysore
CONTACT : +91 6366940936

ಬೋಳು ತಲೆಯ ಸಮಸ್ಯೆಯೇ?
ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempuragar, Mysuru
MYSURU 9611028523 MANGALORE 9343142258

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40ರವರೆಗೆ ವಿದ್ಯಾರ್ಹತೆ– ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ :– 12,818, ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು : ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಪೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ:
8453408502 / 9035269781

HOME LOANS
CORPORATION, MUDA, KHB
GRAMATHANA PROPERTY
(9 & 11A, 11B Khata)
Site Purchase, Site Construction
House Purchase
Site Mortgage, house Mortgage
Contact: 9108416410

ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್
29.04.2023, 12.05.2023 ರಿಂದ 14 ದಿನಗಳ ದೆಹಲಿ, ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮುನೋತ್ರಿ,
28.06.2023 ರಿಂದ 13 ದಿನಗಳ ವೈಷ್ಣೋದೇವಿ ಕಾಶ್ಮೀರ, ಗುಲ್ಮಾರ್ಗ್ ಅಮರನಾಥ್. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ, ಬೆಂಗಳೂರು–70
9342287551 / 8050629305

ಶ್ರೀ ಓಂಶಕ್ತಿ ಜ್ಯೋತಿಷ್ಯರು
ಕೇರಳ ಶ್ರೀ ಗುರುಗಳ ಕೃಪೆಯಿಂದ
ಪ.: ನಾಗರಾಜು ಪಣಿಕರ್
ಮೊ.: 9448033798
ನಿಮ್ಮ ಯಾವುದೇ ಸಮಸ್ಯೆಗಳಿಗೆ ನೇರ ಉತ್ತರ ಶೀಘ್ರ ಪರಿಹಾರವಿದೆ. 1ನೇ ಕ್ರಾಸ್, ಶನೇಶ್ವರ ಗೋಪುರ ಪಕ್ಕ, ಆರ್.ಎಂ.ಸಿ. ಹತ್ತಿರ, ತಿಲಕ್‌ನಗರ, ಮೈಸೂರು.

ವಧು ಬೇಕಾಗಿದ್ದಾರೆ
33 ವಯಸ್ಸಿನ ಸ್ವಂತ ಉದ್ಯೋಗ ಹಾಗೂ ಸ್ವಂತ ಮನೆಯಿರುವ ಮೈಸೂರಿನ ಲಿಂಗಾಯತ ವರನಿಗೆ 30 ವರ್ಷದ ಲಿಂಗಾಯತ ವಧು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 98450 48051

SITE FOR SALE
30 X 40 & 30 X 50 New Layout
1.5 Kms from Kanakadasa Engineering College
13.50 LAKHS ONLY
Booking Advance 2 Lakhs
98800 65122 / 77956 09173

ಬೇಕಾಗಿದ್ದಾರೆ
ಕನ್ನಡ ನುಡಿ ಟೈಪ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ Rs.15000/-
Ph.9380142144
ಶಿವರಾಂಪೇಟೆ, ಮೈಸೂರು

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೋರಿಯರ್ ಸೌಲಭ್ಯವಿದೆ)
8749098879

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸುವರ್ಣ ಯಾತ್ರ
14–04–23: ನೇಪಾಳ ಪ್ರವಾಸ 9 ದಿನಗಳು. 24–04–2023: ಕಾಶಿ ಪ್ರವಾಸ 7 ದಿನಗಳು. 21–05–2023: ಚಾರ್‌ಧಾಮ್ ಯಾತ್ರ 13 ದಿನಗಳು. 7–07–2023: ಅಮರನಾಥ ಯಾತ್ರೆ 10 ದಿನಗಳು. ಸಂಪರ್ಕಿಸಿ:
9008381022, 9019462508

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಸೇವಾಸಿಂಧು ಮತ್ತು CSC ಸೆಂಟರ್‌ನಲ್ಲಿ ಕೆಲಸ ಮಾಡಿ ಅನುಭವವಿರುವ PUC / ಪದವಿ ಹೊಂದಿದ್ದು, ಕಂಪ್ಯೂಟರ್ ಜ್ಞಾನವುಳ್ಳ ಮಹಿಳೆ / ಹುಡುಗಿಯರು ಕಂಪ್ಯೂಟರ್ ಆಪರೇಟರ್ ಕೆಲಸಕ್ಕೆ ಈ ತಕ್ಷಣ ಬೇಕಾಗಿದ್ದಾರೆ. ಆಸಕ್ತರು ಈ ತಕ್ಷಣ ಸಂಪರ್ಕಿಸಿ:
9483096959, 9482806413

Mythri Travels
07–04–2023: ಶಿರಡಿ ವಿಮಾನ ಪ್ರವಾಸ 3 ದಿನಗಳು 3 ಜ್ಯೋತಿರ್ಲಿಂಗ ದರ್ಶನ.
25–04–2023: ಮಧ್ಯಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗ ದರ್ಶನ.
9482421499, 8660756131

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು (18–30) ಸೆರಾಕೇರ್ ಮೈಸೂರು ಹೆಲ್ತ್ ಸೆಂಟರ್, ವಿದ್ಯಾರ್ಹತೆ: SSLC, 2nd PUC, Any Degree ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು.
7996011692
8296366894

WANTED
Labours, Supervisor (Male), Office Assistant (Female), Food and Accomodation Free
8197855552

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೇಕಾಗಿದ್ದಾರೆ
ಮೈಸೂರು ಸಿಟಿ, ಹೆಬ್ಬಾಳು, ಬೆಳವಾಡಿ ಕೈಗಾರಿಕಾ ಪ್ರದೇಶದಲ್ಲಿ 12 hr ಪಾಳಿಯಲ್ಲಿ ಕೆಲಸ ಮಾಡಲು (1) ಸೆಕ್ಯೂರಿಟಿ ಸೂಪರ್ ವೈಸರ್ – PUC & ಮೇಲ್ಪಟ್ಟು (2) ಸೆಕ್ಯೂರಿಟಿ ಗಾರ್ಡ್ – SSLC (Pass/Fail). 45 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ. ಸಂಪರ್ಕಿಸಿ:
9739199355, 9844235981

ಎಂ.ಕೆ. ಆಡಿಯೋ
ನಿರ್ದೇಶನ ಮಾಡುವವರಿಗೊಂದು ಸುವರ್ಣಾವಕಾಶ. ನಮ್ಮಲ್ಲಿ ಅತ್ಯಂತ ಕಡಿಮೆ ಬೆಲೆಗೆ Red Dragon Camera, CP2 Lens, H.R. Zoom, Allora Zoom, Wireless Monitor, Low back, Sony ATS Camera ದೊರೆಯುತ್ತದೆ. ಸಂಪರ್ಕಿಸಿ:
9632291251, +91821 3510512

WANTED
Fieldwork
Contact:
Mob: 9538815333

ಬೇಕಾಗಿದ್ದಾರೆ
ಮೈಸೂರು ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್, ಅಕೌಂಟ್ಸ್ (ಲೇಡಿ) ರೂಂ ಬಾಯ್, ಫೀಲ್ಡ್ ಆಫೀಸರ್ ಹಾಗೂ ಮಾರ್ಕೆಟಿಂಗ್ ಮ್ಯಾನೇಜರ್ ಬೇಕಾಗಿದ್ದಾರೆ. ಉತ್ತಮ ಸಂಬಳ: ESI +PF ಇರುತ್ತದೆ.
9731075326 / 9880116412
9538130985

ಕಾಶಿಯಾತ್ರೆ
20.04.2023 ರಿಂದ 20 ದಿನಗಳ ಪ್ರವಾಸ AC ಬಸ್, ಊಟ, ವಸತಿ ಸೇರಿ ಒಬ್ಬರಿಗೆ 36,000. ಸ್ಥಳಗಳು, ಕೊಲ್ಹಾಪುರ, ಶಿರಡಿ, ನಾಸಿಕ್, ತ್ರಯಂಬಕೇಶ್ವರ, ಆಗ್ರಾ, ಮಥುರಾ, ದೆಹಲಿ, ಹರಿದ್ವಾರ, ಋಷಿಕೇಶ, ಅಯೋಧ್ಯೆ, ಪ್ರಯಾಗರಾಜ್, ಕಾಶಿ, ಗಯಾ, ಭುವನೇಶ್ವರ, ಪುರಿ ಜಗನ್ನಾಥೇಶ್ವರ, ಕೋನಾರ್ಕ, ವಿಶಾಖಪಟ್ಟಣಂ, ವಿಜಯವಾಡ ಇತ್ಯಾದಿ. ಕರ್ನಾಟಕ ಸರ್ಕಾರದಿಂದ ಕಾಶಿಯಾತ್ರೆಗೆ 5000 ಅನುದಾನ ದೊರೆಯುತ್ತದೆ. ಮಾರ್ವೆಲ್ ಟ್ರಾವೆಲ್ಸ್, ಮೈಸೂರು.
9342118682 / 9449128682

GOLD COMPANY
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5800
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.
9964522225

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚಾತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

WANTED
Full time Accountant with atleast 2 years of Experience Contact for more details
7411332992

ಬೇಕಾಗಿದ್ದಾರೆ
ಬನ್ನಿಮಂಟಪದಲ್ಲಿರುವ ಹೆಸರಾಂತ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಲು
1) ಹೌಸ್ ಕೀಪಿಂಗ್ ಸೂಪರ್ ವೈಸರ್
2) ಸೆಕ್ಯೂರಿಟಿ ಗಾರ್ಡ್ಸ್ (ಎಸ್.ಎಸ್.ಎಲ್.ಸಿ ಪಾಸ್/ಫೇಲ್)
3) ಹೌಸ್ ಕೀಪರ್ಸ್ (ಪುರುಷರು) ಸ್ವಚ್ಛತಾ ಕೆಲಸಗಾರರು ಬೇಕಾಗಿದ್ದಾರೆ. ವೇತನ 9000–13000, ಸಂಪರ್ಕಿಸಿ: ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ, ನಂ.513 ಲಕ್ಷ್ಮೀ ಚಿತ್ರಮಂದಿರ ಎದುರು ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು – 24. ಅನುಭವವುಳ್ಳವರು ಮೂಲ ದಾಖಲಾತಿಗಳೊಂದಿಗೆ ಹಾಜರಾಗತಕ್ಕದ್ದು.
0821-4247385

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
ಕಮರ್ಷಿಯಲ್
ಬ್ರಾಹ್ಮಿನ್ ಲೇಔಟ್ 'A' ಬ್ಲಾಕ್, 60 ಅಡಿ ರಸ್ತೆ, (ಪೂ.ಪ.47 ಅಡಿ, ದ.ಉ.127 ಅಡಿ) 2 ವಿಸ್ತೀರ್ಣ 2900 ಸ್ಕ್ವೇರ್ ಫೀಟ್. ಚದರ ಅಡಿಗೆ 1700
8618644886 / 9880280299

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಪ್ರಸಿದ್ಧ ಐಟಿ ಕಂಪನಿಗೆ ಗುತ್ತಿಗೆ ಆಧಾರದ (ಕಾಂಟ್ರ್ಯಾಕ್ಟ್) ಮೇಲೆ ಹೌಸ್ ಕೀಪಿಂಗ್ ಕೆಲಸ ಮಾಡುವ ಹುಡುಗರು ಬೇಕಾಗಿದ್ದಾರೆ. ಸೌಲಭ್ಯಗಳು : ವೇತನ, ಪಿ.ಎಫ್., ಇ.ಎಸ್.ಐ, ವಾರ್ಷಿಕ ಬೋನಸ್, ವಾರ್ಷಿಕ ಸಂಬಳ ಹೆಚ್ಚಳ, ಗ್ರಾಚ್ಯುಟಿ, ಸಮವಸ್ತ್ರ ಮತ್ತು ಶೂ. ವೇತನ ರೂ.13,800/– ವಯೋಮಿತಿ 18 ರಿಂದ 35 ವರ್ಷ, ವಿದ್ಯಾರ್ಹತೆ: 7 ರಿಂದ 10ನೇ ತರಗತಿ ಪಾಸ್ ಅಥವಾ ಫೇಲ್. ಆಸಕ್ತಿಯುಳ್ಳವರು ಸಂಪರ್ಕಿಸಿ: ಎಸ್.ಎಲ್.ಎನ್.ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈ.ಲಿ., ನಂ.291/ಸಿ, ಹರೀಮ್ಸ್ ಬಿಲ್ಡಿಂಗ್, ಎಸ್.ಎಸ್.ಟಿ.ಸಿ. ಎದುರು, ಅರೋಮ ಬೇಕರಿ ಫ್ಯಾಕ್ಟರಿ ಲೇಟ್ ಪಕ್ಕದಲ್ಲಿ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು – 570017
9900509554 / 8105669977

SHOP FOR RENT
10x15
N.S.Road
9845278336

HOUSE FOR RENT
2BHK 30x40 House available for Rent with Good amenities at Kalpavruksha Nagara (Near Ammu Bakery) it is very nearer to NH Hosptial. Manipal Hospital and LIC Bannimantap office interested may contact:
9449850220

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 12,000/–
8892258814

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋಚರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಃಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

SITE FOR SALE
1) 40x60 East Facing 40 Feet Road, Vijayanagara 4th Stage 2nd Phase, Near Marimallappa School.
2) Adhiswar Nagar 30x50 East Facing Site Vijayanagar 4th Stage.
3) Panchacharya Layout 30x40 West Facing Site for Sale
9845809369

FOR SALE
1) 30x40, 13 Lakhs sites in Defence Apartment, near Kote Road. (2) 30x40, 12 Lakhs Elwala. (3) 40x60 site in before Brahmins Layout, Near Ring Road. (4) 17x60, 3 BHK, Kamakshi Hospital, Near Saraswathipuram. (5) 30x40, N, G+2 house, near Ashwini Choultry, Srirampura. (6) 40x60, N/E Corner Aravind Nagar. (7) 12x36 house G+2 Kuvempunagar.
9035990359, 9538690359

ಶ್ರೀನಿಧಿ ಹಾಲಿಡೇಸ್
(Since 2005)
01–04–23 ರಿಂದ 14 ದಿನಗಳ, ವೈಷ್ಣೋದೇವಿ, ಅಮೃತಸರ್, ಹರಿದ್ವಾರ್ ಅಯೋಧ್ಯ, ಕಾಶಿ, ಡೆಲ್ಲಿ, ಆಗ್ರಾ, ಮಥುರಾ ಇತ್ಯಾದಿ.
17–04–23 ರಿಂದ 14 ದಿನಗಳ ಕಾಶಿ, ಪ್ರಯಾಗ್‌ರಾಜ್, ಅಯೋಧ್ಯ, ಹರಿದ್ವಾರ್, ಡೆಲ್ಲಿ, ಆಗ್ರಾ, ವೈಷ್ಣೋದೇವಿ, ಅಮೃತ್‌ಸರ್ ಇತ್ಯಾದಿ.
23–05–23 ರಿಂದ 23 ದಿನಗಳು ಉಜ್ಜೈನಿ, ಶಿರಡಿ, ಡೆಲ್ಲಿ, ಹರಿದ್ವಾರ್, ಕಾಶಿ, ಗಯಾ, ಪೂರಿಜಗನ್ನಾಥ್, ಭದ್ರಾಚಲಂ, ವಿಜಯವಾಡ ಇತ್ಯಾದಿ. ವಿಮಾನ / ರೈಲು / 2+2 ಬಸ್ / ಊಟ / ಇಬ್ಬರಿಗೆ ಒಂದು (ರೂಂ) ಸೇರಿದೆ.
9740776666 / 7557553777

ಬೇಕಾಗಿದ್ದಾರೆ
ಪಿರಿಯಾಪಟ್ಟಣದಲ್ಲಿರುವ ಪ್ರಖ್ಯಾತ ಹೋಟೆಲ್‌ಗೆ (ಸಸ್ಯಹಾರಿ) ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ.
ವೆಯಿಟರ್ಸ್ –4, ಕ್ಯಾಪ್ಟನ್ – 4
ದೋಸ ಭಟ್ಟರು –2, ಆಲ್‌ರೌಂಡರ್ – 2
ಟೇಬಲ್ ಕ್ಲೀನರ್ –2
ಕೂಡಲೇ ಸಂಪರ್ಕಿಸಿ:
7899929233

CHILD VISION AND EDUCATION FOUNDATION
(A Uniqur Pre School)
WANTED
Teachers (F) for reputed Pre-School & Helpers (F), Office Assistant (M/F). Opp. J K Tyres, K R S Road, Mysore.
Contact:
9448031964
7795301535

WANTED
Security Supervisor Graduate with Computer Knowledge and good communication within 35 yrs of Age, Contact :
89044 81119

ಬೇಕಾಗಿದ್ದಾರೆ
ನಜರ್‌ಬಾದ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 12,000/–
9380232259

ಸೈಟ್ಸ್ @ ಮೈಸೂರು
ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ
DTCP APPROVED
ಹೂಡಿಕೆಗೆ / ಮನೆ ಕಟ್ಟಲು ಸೂಕ್ತವಾದ ಸ್ಥಳ ಮುಂಬರಲಿರುವ ಮೈಸೂರು ಕುಶಾಲ್‌ನಗರ ರಾಷ್ಟ್ರೀಯ ಹೆದ್ದಾರಿಯ ಹತ್ತಿರ
GSS Projects
Invest in Mysore, Invest in GSS.
8951276688

WANTED
TELECALLERS
Male No. 10 * Female No. 10 * Female Admins 02 * Marathi, Hindi, Telugu language required. Salary: 15K.
Contact Meghana H.R.
Mob: 7829803426

ಕೆಲಸಕ್ಕೆ ಬೇಕಾಗಿದ್ದಾರೆ
ಕ್ಲೀನರ್, ಸಪ್ಲೇಯರ್, ಸ್ಟಾಲ್‌ಮ್ಯಾನ್‌ಗಳು, ಕಿಚನ್ ಅಸಿಸ್ಟೆಂಟ್ ಬೇಕಾಗಿದ್ದಾರೆ. ದೇವಿಶ್ರೀ ಹೋಟೆಲ್, ಅಕ್ಕಿಚೌಕ, ಕೆ.ಟಿ.ಸ್ಟ್ರೀಟ್, ಮೈಸೂರು.
8970856325
7892176372

WANTED
Security CRO/ARM/ Field Officer. Experienced Candidates Only in the age group of 20-35 years, Contact :
99646 61119

WANTED
Training Executive (Field Work) graduate in the age group 20-35 years to work in different sites. With Computer knowledge and good communication, Freshers willing to undergo training can apply Contact:
backofcmys@gmail.com

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗಿಯರು ಬೇಕಾಗಿದ್ದಾರೆ ಸಮಯ: 10 to 7pm, ಸಂಬಳ: 8000 ರಿಂದ 10,000, ಇರ್ವಿನ್ ರಸ್ತೆ, ಕೆ.ಆರ್. ಆಸ್ಪತ್ರೆ ಹತ್ತಿರ.
8050744784

HOUSE FOR RENT
3 attached Bath Room with Solor, 1st Floor, Krishnamurthy puram, 4th Cross, No Car Parking
9880216955

ಉಚಿತವಾಗಿ ಪಡೆಯಿರಿ
26 ಕೆಜಿ. ಬಿ.ಟಿ ರೈಸನ್ನು ಖರೀದಿಸಿದರೆ 2 ಕೆ.ಜಿ. ಬೇಳೆ, 2 ಕೆಜಿ. ಸಕ್ಕರೆ, 1 ಲೀಟರ್ ಸನ್‌ಪ್ಯೂರ್ ಎಣ್ಣೆಯನ್ನು ಉಚಿತವಾಗಿ ಪಡೆಯಿರಿ.
ಬೆಲೆ ರೂ. 1650/- ಮಾತ್ರ (ಷರತ್ತು ಅನ್ವಯ)
"ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್" ಶಿವರಾಂಪೇಟೆ, ಮೋರ್ ಮೆಗಾ ಸ್ಟೋರ್ ಎದುರಿನ ರಸ್ತೆ, ಮೈಸೂರು.
9741859037 / 9902158019

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ನಿವೇಶನ ಬೇಕಾಗಿದೆ
ಮೈಸೂರಿನ ರಿಂಗ್ ರಸ್ತೆ ಒಳಭಾಗದಲ್ಲಿ 50x80 ಅಥವಾ 40x60 ಅಳತೆಯ ವಾಣಿಜ್ಯ / ರೆಸಿಡೆನ್ಷಿಯಲ್ ಪೂರ್ವ – ಉತ್ತರ ದಿಕ್ಕಿನ ನಿವೇಶನ ಬೇಕಾಗಿದೆ.
20x30 ಅಳತೆಯ ನೆಲ ಮತ್ತು ಒಂದನೇ ಅಂತಸ್ತಿನ ಉತ್ತರ ದಿಕ್ಕಿನ ಹೊಸಮನೆ ವಸಂತನಗರದಲ್ಲಿ ಮತ್ತು 30x40 ಅಳತೆಯ ಹಳೆಯ ಮನೆ ರಾಜೇಂದ್ರನಗರದಲ್ಲಿ ಮಾರಾಟಕ್ಕಿದೆ
9980988679

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ದೋಸೆ ಹಾಕುವವರು ಬೇಕಾಗಿದ್ದಾರೆ. ಸ್ಥಳ: ಸುಳ್ಯ ಮಡಿಕೇರಿ ಅವರಿಗೆ ಆದ್ಯತೆ
9902176566

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma Any Degree Pass / Fail ಆದವರಿಗೆ Packing, Helper, Quality, Production, Maintenance, Telephone attender, Receptionist, Data Entry ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 38000 (ESI+PF+OT) ಸೇರಿ. ಸಂಪರ್ಕಿಸಿ.
9980850141 / 9980346131

ಸೈಟ್ಸ್ @ ಮೈಸೂರು
ಟಿ.ನರಸೀಪುರ ರಿಂಗ್ ರೋಡ್‌ನಿಂದ ಸುಮಾರು 1.5 ಕಿ.ಮೀ ಮುಡಾ ಖಾತ
MUDA APPROVED
ಸುತ್ತಮುತ್ತ ಮುಡಾ ಲೇಔಟ್‌ಗಳಿದ್ದು, ಈಗಲೇ ಮನೆ ಕಟ್ಟಬಹುದಾಗಿದೆ.
GSS Projects
Invest in Mysore, Invest in GSS.
8951276688

ಕಟ್ಟಡ ಬೇಕಾಗಿದೆ
ಆಯುರ್ವೇದ ಉತ್ಪನ್ನಗಳನ್ನು ತಯಾರಿಸಲು, ನಮಗೆ ಬಾಡಿಗೆ / ಗುತ್ತಿಗೆಗೆ ಒಂದು ಕಟ್ಟಡದ ಅಗತ್ಯವಿದೆ. ಸಂಪರ್ಕಿಸಿ: ಪ್ರಕಾಶ್
9741607323

JOB'S IN MYSORE
10th, PUC ಯಾದ Age (18-24) Earn (10,000/- ರಿಂದ 16,500/-)pm ಪರಸ್ಥಳದವರಿಗೆ ಮಾತ್ರ ವಸತಿ Freshers only * No Fee* ನೇರ ಸಂದರ್ಶನಕ್ಕಾಗಿ (11am to 5pm) Call: ಕಾವ್ಯ
9342827788
Meet us today, Join Tomorrow

100% ಕೆಲಸ
ಮೈಸೂರಿನ ಕೈಗಾರಿಕ ಪ್ರದೇಶಗಳಾದ ಹೂಟಗಳ್ಳಿ, ನಂಜನಗೂಡು, ಹೆಬ್ಬಾಳ್, ಮೇಟಗಳ್ಳಿ, ಕಡಕೊಳ ಮುಂತಾದ ಕಂಪನಿಗಳಿಗೆ 7th, SSLC, PUC, ITI, Pass / Fail ಆದ ಯುವಕ / ಯುವತಿಯರಿಗೆ Quality, Maintance, Stock incharge, Production line, Packing, Helper ಗಳಿಗೆ ಬೇಕಾಗಿದ್ದಾರೆ. ಸಂಬಳ: 14,500 – 37500 (ESI+PF+OT) ಸಂಪರ್ಕಿಸಿ.
9663704915 / 9008603466

WANTED
Electrical field supervisor (Male only), (2 years+ experience in handling ESCOM, GK,WS and Linkline works), Civil Site Engineer (Male only), (Min 2-3yrs Exp.as Site Engineer), Security Field Officer (Male), (Min 2-3yrs Exp. in Security Agency) Contact :
7337888385 / 6366366388
Call between 10AM to 6PM
Mail your C.V to: acpltd123@gmail.com

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ, ವಿದ್ಯಾರ್ಹತೆ : 7 ರಿಂದ PUC, ITI Fitter, Diploma Mach ಸಂಪರ್ಕಿಸಿ:
9035381989

ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗಳಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕ ಇಲ್ಲ. ಸಂಬಳ 8 ಗಂಟೆ ಕೆಲಸಕ್ಕೆ – 14,000/– ಸಂಬಳ 12 ಗಂಟೆ ಕೆಲಸಕ್ಕೆ – 15,000/– ಕೂಡಲೇ ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್ ಪ್ರೈಸಸ್. ಲೋಕೇಶ್
8722844236


WANTED
(Work From Home, No Age Limit) Telecallers, Data Entry Operators, Admin, Service Advisors, B.E. Civil / Mechanical. Call :
8867196098

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬಸವಣ್ಣನ ಆದರ್ಶ ಪ್ರತಿಯೊಬ್ಬರಿಗೂ ಅನುಕರಣೀಯ



ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬಣ್ಣನೆ



ಮಂಡ್ಯ, ಮಾ.19– ವಿಶ್ವಗುರು ಬಸವಣ್ಣನವರು 12ನೇ ಶತಮಾನದಲ್ಲೇ ಅಸಮಾನತೆಯ ವಿರುದ್ಧ ಹೋರಾಡಿದ ಮಹಾನ್ ಮಾನವತಾವಾದಿ. ಅವರ ಆದರ್ಶಗಳು ಪ್ರತಿಯೊಬ್ಬರಿಗೂ ಅನುಕರಣೀಯ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಬಣ್ಣಿಸಿದರು.

ತಾಲೂಕಿನ ಮಾಚಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ನಿರ್ಮಿಸಿರುವ ಅಶ್ವರೂಢ ಬಸವಣ್ಣನವರ ಪುತ್ಥಳಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಪ್ರಸ್ತುತ ಸಮಾಜದಲ್ಲಿ ಅಸಮಾನತೆ ತಾಂಡವವಾಡುತ್ತಿದ್ದು, ಬಸವೇಶ್ವರರು 900 ವರ್ಷಗಳ ಹಿಂದೆಯೇ ಸಮಾನತೆ ಸಮಾಜ ನಿರ್ಮಾಣಕ್ಕೆ ಕೈಗೊಂಡಿರುವ ಕ್ರಾಂತಿಕಾರಕ ಹಾದಿಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಶ್ರೀಮಂತರು, ಬಡವರ ನಡುವೆ ಸಂಘರ್ಷ ನಡೆಯುತ್ತಲೇ ಇದೆ. ಬಡತನ, ನಿರುದ್ಯೋಗ ದೇಶದೆಲ್ಲೆಡೆ ತಾಂಡವವಾಡುತ್ತಿದೆ. ಇಂತಹ ಸಂದರ್ಭದಲ್ಲಿ ಬಸವಣ್ಣನವರ ಆದರ್ಶವನ್ನು ಪ್ರತಿಯೊಬ್ಬರೂ ಅನುಸರಣೆ ಮಾಡಬೇಕು. ಕಳೆದ 3 ತಿಂಗಳಿಂದ ರಾಜ್ಯಾದ್ಯಂತ ಪಂಚರತ್ನ ಯಾತ್ರೆ ಮಾಡುತ್ತಿರುವ ತಮಗೆ ರಾಜ್ಯದ ಜನತೆಯ ಅಳಲು ಅರ್ಥವಾಗಿದೆ. ರೈತರಿಗೆ ಈ ಸರ್ಕಾರದಿಂದ ಯಾವುದೇ ಅನುಕೂಲತೆಗಳಿಲ್ಲ. ಯುವಕರು ಉದ್ಯೋಗವಿಲ್ಲದೆ ಹತಾಶರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹೊಸದೊಂದು ಬದಲಾವಣೆ ತರುವ ಅವಶ್ಯಕತೆ ರಾಜ್ಯದಲ್ಲಿದೆ ಎಂದರು.

ಪ್ರತಿಯೊಂದು ಕುಟುಂಬದಲ್ಲೂ ಸಮಾನತೆ ತರಲು ಪಂಚರತ್ನ ಯೋಜನೆ ಜಾರಿಗೊಳಿಸಲು ಮುಂದಾಗಿದ್ದೇನೆ. ಈ ಭಾಗದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಅಭಿವೃದ್ಧಿ ಪರ್ವವನ್ನೇ ಮಾಡಿದ್ದಾರೆ. ಈ ಬಾರಿಯೂ ತಾವೆಲ್ಲರು ಅವರಿಗೆ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದ ಕುಮಾರಸ್ವಾಮಿ, ನಡೆದಾಡುವ ದೇವರು ಸಿದ್ಧಗಂಗೆಯ ಸಿದ್ಧಗಂಗಾಶ್ರೀಗಳಿಗೆ ಬೆಳ್ಳಿ ಆಸನದಲ್ಲಿ ಕೂರಿಸಿ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ನಮ್ಮ ಸರ್ಕಾರ ಗೌರವಿಸಿದೆ. ಈ ಭಾಗದ ಜನತೆ ಪಂಚರತ್ನ ಯಾತ್ರೆಯಲ್ಲಿ ನನಗೆ ರುದ್ರಾಕ್ಷಿ ಮಾಲೆ ಹಾಕಲು ಬಂದಾಗ ಅದನ್ನು ಸ್ವಾಮೀಜಿಯವರ ಗದ್ದುಗೆಗೆ ನೀಡಬೇಕೆಂದು ಹಾರ ಹಾಕಿಸಿಕೊಳ್ಳದೆ ನಿರಾಕರಣೆ ಮಾಡಿದೆ ಎಂದು ಸ್ಮರಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ವಿಶ್ವಗುರು ಬಸವಣ್ಣ ಹಾಗೂ ತ್ರಿವಿಧ ದಾಸೋಹಿ ಸಿದ್ಧಗಂಗಾ ಶ್ರೀಗಳ ಆದರ್ಶ ಸರ್ವರಿಗೂ ಅನುಕರಣೀಯ. ಅಂತಹ ಮಹಾನ್ ಪುರುಷರ ಪುತ್ಥಳಿ ಸ್ಥಾಪಿಸಿರುವ ಮಾಚಹಳ್ಳಿ ಗ್ರಾಮಸ್ಥರ ಧಾರ್ಮಿಕ ಶ್ರದ್ಧೆ ಹಾಗೂ ಐಕ್ಯತೆ ಕಂಡು ನನಗೆ ಅಪಾರ ಸಂತೋಷವಾಗಿದೆ ಎಂದರು.

ಇದಕ್ಕೂ ಮುನ್ನಾ, ವೇದಿಕೆಗೆ ಆಗಮಿಸಿದ ಎಚ್‌ಡಿಕೆ ಹಾಗೂ ಶಾಸಕ ಸಿಎಸ್‌ಪಿಗೆ ಜಯಘೋಷ ಮೊಳಗಿಸಿ ಪುಷ್ಪವೃಷ್ಟಿ ಮಾಡಲಾಯಿತು. ಅಲ್ಲದೇ ಗ್ರಾಮಸ್ಥರು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹಾಗೂ ಶಾಸಕ ಸಿ.ಎಸ್.ಪುಟ್ಟರಾಜು ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ವೇದಿಕೆಯಲ್ಲಿ ಬೇಬಿಬೆಟ್ಟದ ಶ್ರೀರಾಮಯೋಗೀಶ್ವರ ಮಠದ ಪೀಠಾಧ್ಯಕ್ಷ ಶ್ರೀಶಿವಬಸವ ಸ್ವಾಮೀಜಿ, ಅವ್ವೇರಹಳ್ಳಿ ಪಟ್ಟದ ಹೊಸಮಠದ ಶ್ರೀಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ, ಮನ್ಮುಲ್ ಅಧ್ಯಕ್ಷ ರಾಮಚಂದ್ರು, ತಾಪಂ ಸದಸ್ಯೆ ರೇಖಾ, ಜಿಪಂ ಮಾಜಿ ಸದಸ್ಯ ಅಶೋಕ್, ಜೆಡಿಎಸ್ ಮುಖಂಡರಾದ ವೈರಮುಡಿಗೌಡ, ಮಲ್ಲೇಶ್ ಸೇರಿದಂತೆ ಹಲವರಿದ್ದರು.

ಉರಿಗೌಡ, ನಂಜೇಗೌಡ ಕಾಲ್ಪನಿಕ ಕಟ್ಟುಕಥೆ: ಕಿಡಿ

ಮಂಡ್ಯ, ಮಾ.19– 'ಯಾರ್ರಿ ಉರಿಗೌಡ, ನಂಜೇಗೌಡ ಅನ್ನೋರು ಇಷ್ಟು ದಿನ ಎಲ್ಲಿದ್ದರು' ಎಂದು ಟಿಪ್ಪುವನ್ನು ಕೊಂದರೆನ್ನಲಾದ ಒಕ್ಕಲಿಗ ಸಮುದಾಯದ ಇಬ್ಬರು ಐತಿಹಾಸಿಕ ಪುರುಷರ ಕಾಲ್ಪನಿಕ ಕಟ್ಟುಕಥೆ ಬಗ್ಗೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ತಾಲೂಕಿನ ವಿ.ಸಿ.ಫಾರಂ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರಿಗೆ ಜನರ ಸಂಕಷ್ಟ ಅರ್ಥವಾಗುತ್ತಿಲ್ಲ. ಧಾರ್ಮಿಕ ಭಾವನೆಗಳನ್ನಿಡಿದು ಮತ ಕೇಳುವ ಹೀನಾಯ ಸ್ಥಿತಿ ಬಂದೊದಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪದೇ ಪದೆ ಉರಿಗೌಡ, ದೊಡ್ಡ ನಂಜೇಗೌಡ ವಿಚಾರ ಪ್ರಸ್ತಾಪಿಸುತ್ತಿರುವ ಬಿಜೆಪಿ ಸರ್ಕಾರಕ್ಕೆ ಮಳೆ ಬಂದು ರೈತನ ಬೆಳೆ ನಾಶವಾಗಿದೆ. ಉತ್ತರ ಕರ್ನಾಟಕದಲ್ಲಿ ಮೆಣಸಿಕಾಯಿ ಕೊಳೆತು ಹೋಗುತ್ತಿದೆ. ರೈತರ ಬಗ್ಗೆ ಇವರಿಗೆ ಕಾಳಜಿ ಇಲ್ಲ ಎಂದು ಸಿಡಿಮಿಡಿಗೊಂಡರು.

ಉರಿಗೌಡ, ನಂಜೇಗೌಡ ಸಿನಿಮಾ ಮಾಡಿ ದುಡ್ಡು ಮಾಡಿಕೊಳ್ಳುವ ತವಕ ಬಿಜೆಪಿ ಮುಖಂಡರದ್ದಾಗಿದೆ. ಅವರು ಸಿನಿಮಾ ತೆಗೆದರೆ ಅದಕ್ಕೂ ನನಗೂ ಏನು ಸಂಬಂಧವಿದೆ. ಪುಸ್ತಕದಲ್ಲಿ ಎಲ್ಲಿಯಾದರೂ ಟಿಪ್ಪುವನ್ನು ಕೊಂದಿದ್ದು ಎಂದು ನಮೂದಿಸಿದ್ದಾರಾ? ಬರೀ ಪುಸ್ತಕದಲ್ಲಿ ಉಲ್ಲೇಖ ಮಾಡಿದರೆ ಏನಿದೆ ಸಾಕ್ಷ್ಯ. ಅದ್ಯಾವುದೂ 500 ವರ್ಷಗಳ ಹಿಂದಿನ ಕಥೆ ಹೇಳಿದರೆ ಪ್ರಯೋಜನವೇನು ಎಂದು ಪ್ರಶ್ನಿಸಿದರು.

ಒಕ್ಕಲಿಗರ ಮತ ಸೆಳೆಯಲು ಇವರಿಂದ ಸಾಧ್ಯವಿಲ್ಲ. ಇದೆಲ್ಲಾ ಫಲ ಕೊಡುವುದಿಲ್ಲ. ಮಂಡ್ಯದಲ್ಲಿ ಉರಿಗೌಡ, ನಂಜೇಗೌಡ ಪುತ್ಥಳಿ ನಿರ್ಮಿಸಲು ಮುಂದಾಗಿರುವ ಬಿಜೆಪಿ ದೇವಸ್ಥಾನ ಕಟ್ಟಿದರೂ ನಮ್ಮ ಪಕ್ಷದ ಮೇಲೆ ಪರಿಣಾಮ ಬೀರುವುದಿಲ್ಲ ಎಂದರು. ಮಾಜಿ ಸಚಿವ ನರೇಂದ್ರಸ್ವಾಮಿ ಜೆಡಿಎಸ್ ಪುಟ್ಗೋಸಿ ಪಕ್ಷ ಎಂಬ ಪದ ಬಳಕೆ ಮಾಡಿರುವುದನ್ನು ಕಟುವಾಗಿ ಖಂಡಿಸಿದ ಎಚ್‌ಡಿಕೆ, ಎಲೆಕ್ಷನ್ ಫಲಿತಾಂಶ ಬಂದಾಗ ಕಾಂಗ್ರೆಸ್ ಸ್ಥಿತಿ ತಿಳಿಯಲಿದೆ. ವಿಪಕ್ಷ ಸ್ಥಾನದಲ್ಲಿರುವ ಅವರ ನಾಯಕರಿಗೆ ಕ್ಷೇತ್ರ ಹುಡುಕಿಕೊಳ್ಳಲು ಸಾಧ್ಯವಿಲ್ಲ. ಜೆಡಿಎಸ್ ಬಗ್ಗೆ ಮಾತನಾಡುತ್ತಾರೆ. ಇದಕ್ಕೆ ಜನಾನೇ ಉತ್ತರ ಕೊಡಲಿದ್ದಾರೆ ಎಂದರು.

ನಾಲ್ವಡಿ ಸಮಾಜಸೇವೆ ಜನಪ್ರತಿನಿಧಿಗಳಿಗೆ ಮಾದರಿ: ಡಾ.ಜೋಗಿಗೌಡ



ಮಂಡ್ಯ, ಮಾ.19– ಶತಮಾನಗಳ ಹಿಂದೆ ಮಾದರಿ ಆಡಳಿತದ ಮೂಲಕ ಮನೆ ಮಾತಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಯೊಬ್ಬ ಜನಪ್ರತಿನಿಧಿಗೂ ಮಾದರಿ ಎಂದು ಖ್ಯಾತ ಕವಿ ಡಾ.ಜೋಗಿಗೌಡ ಬಣ್ಣಿಸಿದರು.

ಡಾ.ಜೀ.ಶಂ.ಪ. ಸಾಹಿತ್ಯ ವೇದಿಕೆಯಿಂದ ಭಾನುವಾರ ನಗರದ ಕಲಾಮಂದಿರದಲ್ಲಿ ಮಾಜಿ ಸಚಿವ ದಿ.ಎಸ್.ಡಿ.ಜಯರಾಂ ಸ್ಮರಣಾರ್ಥ ವಿವಿಧ ಪ್ರಶಸ್ತಿ ಪ್ರದಾನ ಹಾಗೂ ದ್ವಿತೀಯ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾಲ್ವಡಿ ಅವರ ಆಡಳಿತವನ್ನು ಜನ ಇಂದಿಗೂ ಸ್ಮರಿಸುತ್ತಾರೆ. ಅವರ ಕೆಲಸಗಳು ಜೀವಂತವಾಗಿದ್ದು, ನವ ಕರ್ನಾಟಕ ನಿರ್ಮಾಣದಲ್ಲಿ ಅವರ ಕೊಡುಗೆ ಬಹಳ ದೊಡ್ಡದಿದೆ ಎಂದು ಸ್ಮರಿಸಿದರು. ಹಳೇ ಮೈಸೂರು ಭಾಗದ ಜನ ಇಂದಿಗೂ ಕನ್ನಂಬಾಡಿ ಅಣೆಕಟ್ಟೆ ಮೇಲೆ ಅವಲಂಬಿತರಾಗಿದ್ದಾರೆ ಎಂದರೆ ಅದಕ್ಕೆ ನಾಲ್ವಡಿ ಕಾರಣ. ಅಂದಿನ ಕಾಲದಲ್ಲೇ ಶಿಕ್ಷಣ ಕ್ಷೇತ್ರಕ್ಕೆ 450 ಕೋಟಿ ಮೀಸಲಿಟ್ಟು ಶಾಲೆಗಳನ್ನು ತೆರೆದರು. ಮಹಿಳೆಯರಿಗೆ ಹಕ್ಕು ಪತ್ರ ನೀಡಿದರು. ವಿಧವಾ ವೇತನ ಜಾರಿಗೆ ತಂದವರು ನಾಲ್ವಡಿ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಈ.ಸಿ.ನಿಂಗರಾಜ್‌ಗೌಡ ಮಾತನಾಡಿ, ಕನ್ನಡ ಭಾಷೆ ಶ್ರೀಮಂತಗೊಳಿಸಿರುವುದು ಮಂಡ್ಯ ಜಿಲ್ಲೆ. ಶೇ.94ರಷ್ಟು ಕನ್ನಡ ಮಾತನಾಡುವವರು ಜಿಲ್ಲೆಯಲ್ಲಿದ್ದು, ಕನ್ನಡ ಭಾಷೆ ಬೆಳೆಸಲು ಎಲ್ಲರ ಪ್ರೋತ್ಸಾಹ ಅಗತ್ಯವಾಗಿದೆ. ಕನ್ನಡ ಸಾಹಿತಿಗಳು, ಭಾಷಾ ತಜ್ಞರು ಅದೆಷ್ಟೋ ಇಂಗ್ಲೀಷ್ ಪದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಆದರೆ ಕನ್ನಡಿಗರು ಅಂತಹ ಭಾಷಾಂತರ ಕನ್ನಡ ಪದಗಳನ್ನು ಬಳಸಲು ಹಿಂದೇಟು ಹಾಕುತ್ತಿದ್ದಾರೆ. ಕನ್ನಡವನ್ನು ಕನ್ನಡಿಗರೇ ಬೆಳೆಸಬೇಕೆಂದು ಕರೆ ನೀಡಿದರು.

ಮಾಜಿ ಸಚಿವ ಎಸ್.ಡಿ.ಜಯರಾಂ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿ ಕ್ರಿಯಾಶೀಲವಾಗಿ ಕೆಲಸ ಮಾಡುವ ಮೂಲಕ ಖಾತೆಗೆ ಪ್ರಾಮುಖ್ಯತೆ ತಂದರು. ಪಶು ಸಂಗೋಪನೆ ಖಾತೆಗೆ ನಾಗೇಗೌಡರು, ಶಿಕ್ಷಣ ಖಾತೆಗೆ ಶಂಕರೇಗೌಡರು ಮಾನ್ಯತೆ ತಂದಂತೆ, ಗಣಿ ಮತ್ತು ಭೂ ವಿಜ್ಞಾನ ಖಾತೆಯನ್ನು ಶ್ರೀಮಂತಗೊಳಿಸಿದವರು ಎಸ್.ಡಿ.ಜಯರಾಂ ಎಂದು ಬಣ್ಣಿಸಿದರು. ಕಸಾಪ ಮಾಜಿ ಅಧ್ಯಕ್ಷ ಡಾ.ಹೆಚ್.ಎಸ್.ಮುದ್ದೇಗೌಡ ಮಾತನಾಡಿ, ಜಿಲ್ಲೆಯ ಆಧುನಿಕ ಶಿಲ್ಪಿ ನಿತ್ಯ ಸಚಿವ ಕೆ.ವಿ. ಶಂಕರಗೌಡರಾದರೆ, ಕ್ರಿಯಾಶೀಲ ಜನಪ್ರತಿನಿಧಿ ಎಸ್.ಡಿ.ಜಯರಾಂ ಆಗಿದ್ದರು. ಇವರ ಸಾಲಿನಲ್ಲಿ ಹೆಚ್.ಕೆ.ವೀರಣ್ಣಗೌಡ, ಜಿ. ಮಾದೇಗೌಡ, ಎಸ್.ಎಂ.ಕೃಷ್ಣ ಸೇರಿದಂತೆ ಹಲವರು ಗಣ್ಯರು ನಿಲ್ಲುತ್ತಾರೆ ಎಂದರು.

ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರಿಗೆ ಕರ್ನಾಟಕ ಸೇವಾರತ್ನ, ಕವಿರತ್ನ ಪ್ರಶಸ್ತಿ, ರಾಜ್ಯಮಟ್ಟದ ಕಾವ್ಯಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ, ಖ್ಯಾತ ವೈದ್ಯ ಡಾ.ಸಿ.ಎಂ.ಪರಮೇಶ್, ಜೀ.ಶಂ.ಪ. ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ ಮೈಷುಗರ್ ಮಾಜಿ ಅಧ್ಯಕ್ಷ ಶಿವಲಿಂಗೇಗೌಡ, ಸಂಘಟಕರಾದ ಕಾರಸವಾಡಿ ಮಹದೇವು, ನೀನಾ ಪಟೇಲ್, ಆನಂದ್, ಮಂಗಲ ಶಿವಣ್ಣ ಇತರರಿದ್ದರು.

ಶ್ರೀರಂಗಪಟ್ಟಣದಲ್ಲಿ ಅತೃಪ್ತ ಜೆಡಿಎಸ್ ಕಾರ್ಯಕರ್ತರ ಸಭೆ

ರಮೇಶ್ ಬಂಡೀಸಿದ್ದೇಗೌಡರ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆ



ಶ್ರೀರಂಗಪಟ್ಟಣ, ಮಾ.19– ಪಟ್ಟಣದ ಜಯಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ನಡೆದ ಜೆಡಿಎಸ್ ಅತೃಪ್ತ ಕಾರ್ಯಕರ್ತರ ಸಭೆಗೆ ದಿಢೀರ್ ಭೇಟಿ ನೀಡಿದ ಮಾಜಿ ಶಾಸಕ ರಮೇಶ್ ಬಂಡೀಸಿದ್ದೇಗೌಡ ಅತೃಪ್ತರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ, ನನ್ನ ಕುಟುಂಬಕ್ಕೆ ಜೆಡಿಎಸ್ ಪಕ್ಷ ಹಲವು ಸ್ಥಾನಮಾನ ನೀಡಿದ್ದು, ಅದಕ್ಕಾಗಿ ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಚಿರಋಣಿಯಾಗಿದ್ದೇನೆ. ಆದರೆ 2018ರ ಚುನಾವಣೆ ವೇಳೆ ನನ್ನ ತಪ್ಪಿನಿಂದಾಗಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡೆ. ನನ್ನ ತಪ್ಪನ್ನು ಖಂಡಿಸಿ ಜೆಡಿಎಸ್‌ನಲ್ಲೇ ಉಳಿದ ಹಿರಿಯ ಮುಖಂಡರು ಹಾಗೂ ಹಿತೈಷಿಗಳು, ಕಾರ್ಯಕರ್ತರು ಚುನಾವಣೆಯಲ್ಲಿ ನನ್ನನ್ನು ಸೋಲಿಸುವ ಮೂಲಕ ತಕ್ಕಪಾಠ ಕಲಿಸಿದರು. ಆದರೆ 25 ವರ್ಷಗಳ ರಾಜಕೀಯ ಜೀವನದಲ್ಲಿ ನನ್ನ ಒಡನಾಡಿಗಳಾಗಿದ್ದ ಇವರೆಲ್ಲರೂ ಇಂದಿಗೂ ನನ್ನ ಕುಟುಂಬದ ಸದಸ್ಯರಾಗಿದ್ದು, ಅವರೊಂದಿಗೆ ಇರಲು ಸದಾ ಬಯಸುತ್ತೇನೆ. ಕುಟುಂಬ ಎಂದ ಮೇಲೆ ಒಡಕು, ಭಿನ್ನಾಭಿಪ್ರಾಯ ಸಹಜ. ಇದೀಗ ನನ್ನ ಕುಟುಂಬದ ಸದಸ್ಯರಿಗೆ ನ್ಯಾಯ ಒದಗಿಸಲು ಮುಂದಾಗಿದ್ದೇನೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಅವರೊಟ್ಟಿಗಿದ್ದು ಕ್ಷೇತ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಶ್ರಮಿಸುತ್ತೇನೆ ಎಂದರು.

ಇಲ್ಲಿ ನಡೆಯುತ್ತಿರುವ ಜೆಡಿಎಸ್ ಅತೃಪ್ತ ಕಾರ್ಯಕರ್ತರ ಸಭೆ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತಿದ್ದ ನನಗೆ ಕರೆ ಮಾಡಿ ಸಭೆಗೆ ಆಹ್ವಾನಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಹಲವರನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡಿದ್ದು, ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಜಯಗಳಿಸಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಮುಖಂಡ ಬೆಳಗೊಳ ಸ್ವಾಮಿಗೌಡ ಮಾತನಾಡಿ, ಶಾಸಕ ರವೀಂದ್ರ ಶ್ರೀಕಂಠಯ್ಯ ಅವರ ನಿರ್ಲಕ್ಷ್ಯದಿಂದ ಬೇಸತ್ತು ಪಕ್ಷದಿಂದ ಹೊರ ನಡೆಯಲು ತೀರ್ಮಾನಿಸಿದ್ದೇವೆ. ಈ ಹಿಂದೆ ನಮ್ಮ ಸ್ವಂತ ಖರ್ಚಿನಿಂದ ಚುನಾವಣೆ ನಡೆಸಿದ್ದೇವೆ. ಶಾಸಕನಾದ ಬಳಿಕ ರವೀಂದ್ರ ಶ್ರೀಕಂಠಯ್ಯ ನಮ್ಮನ್ನು ಕಡೆಗಣಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ತಾಪಂ ಮಾಜಿ ಅಧ್ಯಕ್ಷ ಸಂದೇಶ್ ಮಾತನಾಡಿ, ಈ ಹಿಂದೆ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರ ಹಾಗೂ ಕುಟುಂಬದ ವಿರುದ್ಧ ಮಾತನಾಡಿದೆ ಎಂಬ ಕಾರಣಕ್ಕೆ ಶಾಸಕರ ಬೆಂಬಲಿಗರು ಸಾಮಾಜಿಕ ಜಾಲತಾಣದಲ್ಲಿ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಈ ನಡೆ ನನ್ನ ಅಸಮಾಧಾನಕ್ಕೆ ಕಾರಣವಾಗಿದ್ದು, ಹೀಗಾಗಿ ಜೆಡಿಎಸ್ ತೊರೆದು ರಮೇಶ್ ಬಂಡಿಸಿದ್ದೇಗೌಡರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸೇರ್ಪಡೆಗೊಳ್ಳುತ್ತಿದ್ದೇನೆ ಎಂದರು.

ಜೆಡಿಎಸ್ ರೈತದಳ ಮಾಜಿ ಉಪಾಧ್ಯಕ್ಷ ದೇವರಾಜು ಮಾತನಾಡಿದರು. ಇದೇ ವೇಳೆ ಜೆಡಿಎಸ್‌ನ ಕೆಲ ಅತೃಪ್ತ ಕಾರ್ಯಕರ್ತರು ಮಾಜಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು.

ಈ ವೇಳೆ ಪದ್ಮನಾಭ, ಸ್ವಾಮೀಗೌಡ, ಟಿಎಪಿಸಿಎಂಎಸ್ ಸದಸ್ಯ ನಾಗರಾಜು, ಪ್ರಸನ್ನ, ವಿಜೇಂದ್ರ, ಆನಂದ, ರಾಮಲಿಂಗೇಗೌಡ, ವೆಂಕಟೇಶ್, ರಮೇಶ್, ಸುರೇಶ್, ವಿಜಿಕುಮಾರ್ ಸೇರಿದಂತೆ ನೂರಾರು ಕಾರ್ಯಕರ್ತರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದ ಯುವಕರ ಒಲವು ಬಿಜೆಪಿ ಕಡೆಗೆ

ಕ್ಷೇತ್ರದ ಬಿಜೆಪಿ ಯುವ ಮುಖಂಡ ಅರುಣ್ ಕುಮಾರ್ ಗೌಡ



ಮೈಸೂರು, ಮಾ.19–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ದೊಡ್ಡಕಾಟೂರು ಗ್ರಾಮದ ಹಲವು ಯುವ ಮುಖಂಡರು ಬಿಜೆಪಿ ಸೇರ್ಪಡೆಯಾದರು.

ಗ್ರಾಮದ ರವಿ, ಹರ್ಷ, ಗುರು, ಮಹೇಶ, ದೀಪು, ಪ್ರಮೋದ್, ಪ್ರಸನ್ನ, ಸಿದ್ದು, ಮಹಾದೇವಸ್ವಾಮಿ, ಮಧು, ಯೋಗೀಶ್, ಗುರುಮಲ್ಲು, ನವೀನ, ರಾಜು ಸೇರಿದಂತೆ ಬೇರೆ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದ ಅನೇಕ ಯುವಕರು ಕ್ಷೇತ್ರದ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್‌ಗೌಡ ನೇತೃತ್ವದಲ್ಲಿ ಹಾಗೂ ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಸಮ್ಮುಖದಲ್ಲಿ ಬಿಜೆಪಿಗೆ ಸೇರಿದರು. ಯುವ ಮುಖಂಡರನ್ನು ಪಕ್ಷಕ್ಕೆ ಸ್ವಾಗತಿಸಿ ಮಾತನಾಡಿದ ಅರುಣ್‌ಕುಮಾರ್ ಗೌಡ, ಚಾಮುಂಡೇಶ್ವರಿಯಲ್ಲಿ ಈ ಬಾರಿ ಬದಲಾವಣೆಯ ಗಾಳಿ ಬೀಸಿದೆ. ಕ್ಷೇತ್ರಾದ್ಯಂತ ಯುವ ಪಡೆ ಬಿಜೆಪಿಯನ್ನು ಬೆಂಬಲಿಸಲು ನಿರ್ಧರಿಸಿದೆ. ಯಾರು ಏನೇ ಹೇಳಿದರೂ ಈ ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸುವುದು ನಿಶ್ಚಿತ ಎಂದರು.

ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪನವರ ಜನಪರ ಆಡಳಿತವನ್ನು ಜನ ಮೆಚ್ಚಿದ್ದಾರೆ. ಬಿಜೆಪಿ ಸರ್ಕಾರಗಳ ಹಲವಾರು ಜನೋಪಯೋಗಿ ಕಾರ್ಯಕ್ರಮ ಜನ ಮಾನಸದಲ್ಲಿ ಹಚ್ಚ ಹಸಿರಾಗಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಗಟ್ಟಿಯಾಗಿದೆ. ಇಲ್ಲಿನ ಮತದಾರರು ಈ ಬಾರಿ ಬಿಜೆಪಿ ಬೆಂಬಲಿಸಲು ಸಿದ್ಧರಾಗಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಪರ ವಾತಾವರಣ ನಿರ್ಮಾಣವಾಗಿದೆ. ಈ ಬಾರಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವ ಜವಾಬ್ದಾರಿ ನಮ್ಮೆಲ್ಲಾ ಕಾರ್ಯಕರ್ತರ ಮೇಲಿದೆ. ಕಾರ್ಯಕರ್ತರು ಪ್ರತಿ ಮನೆಮನೆಗೆ ತೆರಳಿ ಬಿಜೆಪಿ ಸರ್ಕಾರಗಳ ಯೋಜನೆ ಹಾಗೂ ಕಾರ್ಯಕ್ರಮಗಳ ಬಗ್ಗೆ ಜನರ ಮುಂದಿಟ್ಟು ಪಕ್ಷವನ್ನು ಬೆಂಬಲಿಸುವಂತೆ ಮನವಿ ಮಾಡಬೇಕು. ಈ ವಿಧಾನಸಭಾ ಚುನಾವಣೆ ನಿರ್ಣಾಯಕವಾಗಿದ್ದು, ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಿಸಲೇಬೇಕಿದೆ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಪೈಲ್ವಾನ್ ರವಿ, ಈರಪ್ಪ, ಕಡಕೋಳ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಬ್ಯಾತಹಳ್ಳಿ ಮಧು, ಮುಖಂಡರಾದ ಎನ್.ಕೆ.ರವಿಕುಮಾರ್, ದೊಡ್ಡ ಕಾಟೂರು ಮೂರ್ತಿ, ಬೂತ್ ಅಧ್ಯಕ್ಷ ನಂದೀಶ್, ಮೂಗನಹುಂಡಿ ಮಂಜು, ಮುರುಡಗಳ್ಳಿ ಸುದೀಪ್, ಪುನೀತ್, ಮಹೇಶ್, ತಳೂರು ಮಂಜು ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಲಕ್ಷ್ಮಿಕಾಂತ ವಿವಿಧೋದ್ದೇಶ ಸಹಕಾರ ಸಂಘದ ಆಡಳಿತ ಮಂಡಳಿ ಆಯ್ಕೆ




ಮೈಸೂರು, ಮಾ.19(ಎಸ್‌ಬಿಡಿ)– ಮೈಸೂರಿನ 'ಶ್ರೀ ಲಕ್ಷ್ಮಿಕಾಂತ ವಿವಿಧೋದ್ದೇಶ ಸಹಕಾರ ಸಂಘ'ಕ್ಕೆ ನೂತನ ಆಡಳಿತ ಮಂಡಳಿ ಆಯ್ಕೆಯಾಗಿದೆ.

ಹೆಬ್ಬಾಳು, ಲಕ್ಷ್ಮಿಕಾಂತನಗರದ ಸಮುದಾಯ ಭವನದಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಆರ್.ಶ್ರೀಧರ್, ಆರ್.ಗೋಪಾಲ್, ಕಾಳೇಗೌಡ, ಸಿ.ಕುಮಾರ, ಎಂ.ಸಿ.ಪುಟ್ಟರಾಜು, ಬಿ.ನಾಗರಾಜು ಹಾಗೂ ಜೆ.ಚಂದ್ರಹಾಸ, ಮಹಿಳಾ ಮೀಸಲು ಕ್ಷೇತ್ರದಿಂದ ಬಿ.ಪಿ. ಗೀತಾ, ಕೆ.ರೂಪಾ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಮಹದೇವು, ಪರಿಶಿಷ್ಟ ಪಂಗಡ ಕ್ಷೇತ್ರದಿಂದ ರಂಜಿತ ಕೃಷ್ಣಯ್ಯ ನಾಯಕ, ಹಿಂದುಳಿದ ವರ್ಗ 'ಎ' ಕ್ಷೇತ್ರದಿಂದ ಎಂ.ರಾಚಪ್ಪ, 'ಬಿ' ಕ್ಷೇತ್ರದಿಂದ ಬೋರೇಗೌಡ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಡಿ.ಕೆ.ಬಾಲಚಂದ್ರ ತಿಳಿಸಿದ್ದಾರೆ.

ಚುನಾವಣೆಯಲ್ಲಿ ಜಯಭೇರಿ ಭಾರಿಸಿದ 13 ಮಂದಿ ಸದಸ್ಯರನ್ನು ಬಿಜೆಪಿ ಯುವಮೋರ್ಚಾ ಮೈಸೂರು ನಗರ ಘಟಕದ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ ಅಭಿನಂದಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಮೂರ್ತಿ, ಜೆಡಿಎಸ್ ಮುಖಂಡ ಚಂದ್ರು, ಬಿಜೆಪಿ ಮುಖಂಡರಾದ ರಾಜು, ಶಿವಮೂರ್ತಿ, ರಘುಕುಮಾರ್, ಆನಂದ, ಶಿವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಚುನಾವಣೆ

ಸಿ.ರಮೇಶ್ ಬೆಂಬಲಿತ ರಾಘವೇಂದ್ರ ತಂಡಕ್ಕೆ ಜಯ



ಮೈಸೂರು, ಮಾ.19(ಎಸ್‌ಪಿಎನ್)– ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘಕ್ಕೆ ಭಾನುವಾರ 2023–26ನೇ ಸಾಲಿನ ಅವಧಿಗೆ ನಡೆದ ಚುನಾವಣೆಯಲ್ಲಿ ಗೌರವಾಧ್ಯಕ್ಷ ಸಿ. ರಮೇಶ್(ಆರ್.ಆರ್) ಬೆಂಬಲಿತ ಹೆಚ್.ಜೆ. ರಾಘವೇಂದ್ರ ನೇತೃತ್ವದ ತಂಡ 2008ರಿಂದ ಇಲ್ಲಿಯವರೆಗೆ ಎಸ್‌ಎಂಕೆ ತಂಡದ ವಿರುದ್ಧ ಸತತವಾಗಿ 5 ಬಾರಿಗೆ ಆಯ್ಕೆಯಾಗಿದೆ.

ಹುಯಿಲಾಳು ಶ್ರೀ ಗುರು ರಾಘವೇಂದ್ರ ಎಲೆಕ್ಟ್ರಿಕಲ್ಸ್‌ನ ಹೆಚ್.ಜೆ.ರಾಘವೇಂದ್ರ ಜಿಲ್ಲಾಧ್ಯಕ್ಷರಾಗಿ(634), ಆಯ್ಕೆಯಾಗಿದ್ದಾರೆ. ಮೈಸೂರಿನ ಎಂ.ಜಿ.ಲಕ್ಷ್ಮೀದೇವಿ ಎಲೆಕ್ಟ್ರಿಕಲ್ಸ್‌ನ ಎಂ.ಎಸ್.ಮಂಜುನಾಥ್ (636), ಡಿ.ಡಿ.ಶಶಿಧರ್(615) ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶ್ರೀ ಗುರುರಾಜ ಎಲೆಕ್ಟ್ರಿಕಲ್ಸ್‌ನ ಬಿ.ಎಂ.ಗಿರೀಶ್ ಕುಮಾರ್ (619)ಕಾರ್ಯದರ್ಶಿಯಾಗಿ, ಶ್ರೀ ವಿಶ್ವಕರ್ಮ ಎಲೆಕ್ಟ್ರಿಕಲ್ಸ್‌ನ ಹೆಚ್.ಆರ್.ಕೃಷ್ಣಚಾರಿ (617) ಜಂಟಿ ಕಾರ್ಯದರ್ಶಿಯಾಗಿ, ಶ್ರೀ ಸೂರ್ಯ ಎಲೆಕ್ಟ್ರಿಕಲ್ಸ್‌ನ ಎಸ್.ಸುಮಂತ್ ಕುಮಾರ್(644) ಸಂಘಟನಾ ಕಾರ್ಯದರ್ಶಿಯಾಗಿ, ಜೆ.ಜೆ. ಎಲೆಕ್ಟ್ರಿಕಲ್ಸ್‌ನ ಜೆ.ಜೆ. ಅನಿಲ್(631) ಕೋಶಾಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ ಎಂದು ಬೆಂಗಳೂರು ಕೆಎಸ್‌ಎಲ್‌ಇಸಿಎ ಕೇಂದ್ರ ಸಮಿತಿ ಕಾರ್ಯಾಧ್ಯಕ್ಷರೂ ಆದ ಮೈಸೂರು ಜಿಲ್ಲಾ ಸಮಿತಿ ಚುನಾವಣಾಧಿಕಾರಿ ಕೆ.ಶ್ಯಾಮಸುಂದರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಜೆ.ಅಯ್ಯಣ್ಣ(338), ಹೆಚ್.ಅನಂತಕುಮಾರ್ (644), ಅಣ್ಣಯ್ಯ (303), ಎಸ್.ಡಿ. ಅದರಕಟ್ಟಿ(289), ಬಿ.ಎಸ್.ಅಶೋಕ್ (303), ಎಂ.ಬೀರೇಶ್(657), ಪಿ.ಭಾಸ್ಕರ್(649), ಚಿಕ್ಕರಸೇಗೌಡ (642), ಚೆಲುವರಾಜು (642), ಚಂದ್ರೇಗೌಡ(307), ಕೆ.ದಿನೇಶ್ (297), ಎಂ.ಎಸ್.ದಿನೇಶ್(297), ಗೋಪಿ (296), ಹೆಚ್.ಜಿ.ಗೋವಿಂದರಾಜು(301), ಎಸ್.ಹರೀಶ್(703), ಹೆಚ್.ಎನ್.ಜಯಶಂಕರ್ (643), ಜೆ.ಜೆ.ಜಗದೀಶ್(299), ಕಲೀಂವುಲ್ಲಾ ಖಾನ್(615), ಕೆಂಪರಾಜು (627), ಕೀರ್ತಿ(634), ಡಿ.ಕೆಂಪರಾಜು ಅರಸ್(319), ಎಸ್.ಬಿ.ಕುಮಾರ್(643), ಕೃಷ್ಣ(293), ಲಕ್ಷ್ಮಣ್(302), ಎಂ.ಜೆ.ಮನು (309), ಮಾದೇಶ(302), ಎಸ್.ಮಹೇಶ (635), ಮಹಮ್ಮದ್ ಇಸ್ಮಾಯಿಲ್ ಪರೀಫ್(290), ಮಹದೇವಸ್ವಾಮಿ (654), ಬಿ.ಸಿ.ಮಹಾದೇವಸ್ವಾಮಿ (625), ಪಿ.ಮಹದೇವ(295), ಎಸ್.ಮಹದೇವ (610), ಮುದ್ದಣ್ಣ(637), ಕೆ.ಎಂ.ಮಣಿಕಂಠಸ್ವಾಮಿ(290), ಮಜೀಬ್ ವುಲ್ಲಾ(276), ಎಲ್.ಮಂಜುನಾಥ್ ರಾವ್(672), ಡಿ.ಮಂಜುನಾಥ್(300), ಎನ್.ಮಂಜುನಾಥ್(723), ಎಸ್.ಮಂಜುನಾಥ್ (645), ಡಿ.ಹೆಚ್.ನಾಗೇಶ್(640), ಹೆಚ್.ಬಿ. ನಾಗರಾಜು(642), ಬಿ.ಪ್ರಕಾಶ್(643), ಪ್ರತಾಪ್(280), ಎನ್.ಪುಟ್ಟಸ್ವಾಮಿ (628), ಪರಶಿವಪ್ಪ(623), ರೆಹಮಾನ್ ಷರೀಫ್(301), ಎಲ್.ರವೀಂದ್ರಕುಮಾರ್(273), ಎಂ.ಎಸ್.ರವಿಕುಮಾರ್ (626), ಎನ್.ರಾಘವೇಂದ್ರ(636), ರಾಜು(639), ರಾಜುಕುಮಾರ್ (291), ಟಿ.ರವಿಕುಮಾರ್(607), ಹೆಚ್.ವಿ.ಸತ್ಯನಾರಾಯಣ(304), ಬಿ.ಕೆ.ಶ್ರೀಧರ್ (273), ಎಸ್.ಶರತ್(266), ಶ್ರೀಪಾಲ್ (283), ಸಿದ್ದಶೆಟ್ಟಿ(305), ಎನ್.ಸಿ. ಶೇಖರ್ (623), ಹೆಚ್.ಕೆ.ಸುರೇಶ್ (623), ಸಾದತ್ ಪಾಷ (294), ಸಮೀರ್ ಅಹಮ್ಮದ್ (302), ಎಂ. ಸತೀಶ (315), ಸೈಯದ್ ಅಬ್ದುಲ್ ರೆಹಮಾನ್ (709), ಸೈಯದ್ ಸುಹೇಲ್ (692), ಸೈಯದ್ ನಸೀಮ್ (294), ಶಿವರಾಜಪ್ಪ (292), ಎಸ್.ಎನ್.ವಿಜಯ ಕುಮಾರ್ (706), ಜಿ.ವಿಜಯ್‌ಕುಮಾರ್ (384), ಹೆಚ್.ಪಿ. ವೆಂಕಟರಾಮು(691), ವೇದಮೂರ್ತಿ (670) ಸೇರಿದಂತೆ ಆರ್‌ಆರ್ ಬೆಂಬಲಿತ ಎಲ್ಲಾ ಸದಸ್ಯರು ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಜಿಲ್ಲಾ ಘಟಕಕ್ಕೆ 2008 ಮತ್ತು 2011ರಲ್ಲಿ ನಡೆದ ಚುನಾವಣೆಯಲ್ಲಿ ಸಿ.ರಮೇಶ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ತದನಂತರ ಸುರೇಶ್ (2015) ಆರ್‌ಆರ್ ತಂಡದಲ್ಲಿ ಗುರುತಿಸಿಕೊಂಡು ಅಧ್ಯಕ್ಷರಾಗಿ ಆಯ್ಕೆಯಾದರು. 2018ರಿಂದ ಎಂ.ಆರ್.ಧರ್ಮವೀರ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

2023–26ನೇ ಸಾಲಿಗೆ ರಾಜ್ಯಾಧ್ಯಕ್ಷ ಸಿ.ರಮೇಶ್(ಆರ್‌ಆರ್) ನೇತೃತ್ವದ ತಂಡದಲ್ಲಿ ಗುರುತಿಸಿಕೊಂಡಿದ್ದ ಹೆಚ್.ಜೆ. ರಾಘವೇಂದ್ರ ಅವರು, 634 ಮತಗಳಿಸಿ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅಲ್ಲದೆ,ಸಿ.ರಮೇಶ್ ಅವರು 2022ರಲ್ಲಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 3 ಸಾವಿರ ಮತ ಪಡೆದು ಆಯ್ಕೆಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಸಂಘವು 1922ರಲ್ಲಿ ಸ್ಥಾಪನೆಯಾಗಿದ್ದು, 2022ಕ್ಕೆ ಶತಮಾನ ಪೂರೈಸಿದ್ದರ ಹಿನ್ನೆಲೆಯಲ್ಲಿ ಬೆಂಗಳೂರು ಪ್ಯಾಲೆಸ್ ಗ್ರೌಂಡ್‌ನಲ್ಲಿ ಶತಮಾನೋತ್ಸವ ಆಚರಣೆ ಮಾಡಲಾಗಿದೆ. ಈ ಕಾರ್ಯಕ್ರಮದಲ್ಲಿ ಇಂಧನ ಸಚಿವ ಸುನಿಲ್ ಕುಮಾರ್ ಅವರು ಭಾಗವಹಿಸಿದ್ದರು ಎಂದು ನಿಕಟ ಪೂರ್ವ ಅಧ್ಯಕ್ಷ ಎಂ.ಆರ್.ಧರ್ಮವೀರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಭಾರತೀಯ ಸೇನಾ ದಕ್ಷಿಣ ವಲಯದ ಮುಖ್ಯಸ್ಥರ ಭೇಟಿ



ಮಡಿಕೇರಿ, ಮಾ.19– ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಭಾರತೀಯ ಸೇನಾ ದಕ್ಷಿಣ ವಲಯದ (ಸದರನ್ ಆರ್ಮಿ ಕಮಾಂಡ್) ಮುಖ್ಯಸ್ಥರಾದ ಲೆಫ್ಟಿನೆಂಟ್ ಜನರಲ್ ಎ.ಕೆ.ಸಿಂಗ್ ಭಾನುವಾರ ಭೇಟಿ ನೀಡಿ, ವೀಕ್ಷಿಸಿದರು.

ಈ ವೇಳೆ ಮೇಜರ್ (ನಿವೃತ್ತ) ಬಿದ್ದಂಡ ನಂಜಪ್ಪ ಅವರು ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಬಾಲ್ಯ ಜೀವನ, ಶಿಕ್ಷಣ, ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸೇನಾ ಕ್ಷೇತ್ರದಲ್ಲಿನ ಸಾಧನೆ ಮತ್ತಿತರ ವಿಷಯಗಳ ಬಗ್ಗೆ ಸವಿವರವಾಗಿ ವಿವರಿಸಿದರು.

ಜನರಲ್ ತಿಮ್ಮಯ್ಯ ಅವರ ಬಗ್ಗೆ ಮಾಹಿತಿ ಪಡೆದು ಮಾತನಾಡಿದ ಲೆಫ್ಟಿನೆಂಟ್ ಜನರಲ್ ಎ.ಕೆ.ಸಿಂಗ್, ಜನರಲ್ ತಿಮ್ಮಯ್ಯ ಅವರು ಭಾರತೀಯ ಸೇನಾ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿದ್ದು, ಅವರನ್ನು ಸದಾ ಸ್ಮರಿಸಬೇಕಿದೆ ಎಂದರು. ಈ ಸಂದರ್ಭ ಮೇಜರ್ ಜನರಲ್ ಪ್ರೀತ್‌ಪಾಲ್ ಸಿಂಗ್, ಸೈನಿಕ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಮೇಜರ್ (ನಿವೃತ್ತ) ಡಾ.ಬಾಲಸುಬ್ರಮಣ್ಯಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ, ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಗೈಡ್ ಸುಬೇದಾರ್ ಗೌಡಂಡ ತಿಮ್ಮಯ್ಯ, ನಿರ್ಮಿತಿ ಕೇಂದ್ರದ ಇಂಜಿನಿಯರ್ ರಾಘವೇಂದ್ರ ಇತರರಿದ್ದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ



ಸುಂಟಿಕೊಪ್ಪ, ಮಾ.19– ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ 2ನೇ ವಾರ್ಡಿನ ನಿವಾಸಿಗಳು ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರಲ್ಲದೆ, ಚುನಾವಣಾ ಬಹಿಷ್ಕಾರದ ಎಚ್ಚರಿಕೆ ನೀಡಿದರು.

ಭಾನುವಾರ ಪ್ರತಿಭಟನೆ ನಡೆಸಿದ ಗ್ರಾಮಸ್ಥರು ಮಾತನಾಡಿ, ಈ ವ್ಯಾಪ್ತಿಯಲ್ಲಿ 25 ಮನೆಗಳಿದ್ದು 150 ಮತದಾರರು ಇದ್ದಾರೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರು ಸಂಚರಿಸಲು ಸಾಧ್ಯವಾಗುತ್ತಿಲ್ಲ. ಶಾಲಾ ಕಾಲೇಜು ಮಕ್ಕಳು ಮಹಿಳೆಯರು ಮತ್ತು ವೃದ್ಧರು 3 ಕಿ.ಮೀ ಕಾಲ್ನಡಿಗೆಯಲ್ಲೇ ತೆರಳ ಬೇಕಾಗಿದ್ದು, ಇದು ಅತ್ಯಂತ ದುರದೃಷ್ಟಕರ ವಿಚಾರವಾಗಿದೆ. ವಿವಿಧ ನೆಪಗಳನ್ನು ಒಡ್ಡಿ ರಸ್ತೆ ದುರಸ್ತಿ ಮುಂದೂಲ್ಪಡುತ್ತಿದೆ. ಈ ಹಿನ್ನೆಲೆಯಲ್ಲಿ ರಸ್ತೆ ದುರಸ್ತಿಗಾಗಿ ಆಗ್ರಹಿಸಿ ಪ್ರತಿಭಟನೆ ಮೂಲಕ ಚುನಾವಣಾ ಬಹಿ ಷ್ಕಾರಕ್ಕೆ ಮುಂದಾಗಿದ್ದೇವೆ ಎಂದು ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ಮಾಹಿತಿ ಅರಿತು ಸ್ಥಳಕ್ಕಾಗಮಿಸಿದ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಸಿ. ಜಗನ್ನಾಥ್ ಮಾತನಾಡಿ, ಈಗಾಗಲೇ ರೂ.5 ಲಕ್ಷ ಅನುದಾನ ಬಿಡುಗಡೆಯಾಗಿದೆ. ಪಂಚಾಯಿತಿ ವತಿಯಿಂದ ಕಾಮಗಾರಿಗೆ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ 2 ಲಕ್ಷ ರೂ.ಗಳನ್ನು ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು. ಅದರ ಜೊತೆಯಲ್ಲೇ ಸೋಮವಾರವೇ ಗ್ರಾಮಸ್ಥರ ನಿಯೋಗದೊಂದಿಗೆ ಕುಶಾಲನಗರದಲ್ಲಿರುವ ಕಾವೇರಿ ನೀರಾವರಿ ನಿಗಮದ ಕಚೇರಿಗೆ ತೆರಳಿ ವಸ್ತು ಸ್ಥಿತಿಯ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗುವುದು ಎಂದರು.

ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಜಿ. ರಮೇಶ್ ರೈ, ಗ್ರಾ.ಪಂ ಸದಸ್ಯೆ ಅರುಣಾ ಕುಮಾರಿ ಪ್ರಕಾಶ್, ತಾಪಂ ಮಾಜಿ ಉಪಾಧ್ಯಕ್ಷ ಶಂಕರ ನಾರಾಯಣ ಹಾಗೂ ಗ್ರಾಮಸ್ಥರು ಮತ್ತಿತರರು ಪಾಲ್ಗೊಂಡಿದ್ದರು.

ಕೊಡಗಿನಲ್ಲಿ ಮಲೆನಾಡು ಜಾನಪದ ಉತ್ಸವ

ಮಲೆನಾಡಿಗರ ಸಂಸ್ಕೃತಿ ಉಳಿವಿಗೆ ಮಹಿಳೆಯರೇ ಕಾರಣ

ಶಾಸಕ ಹೆಚ್.ಕೆ. ಕುಮಾರಸ್ವಾಮಿ ಅಭಿಮತ



ಶನಿವಾರಸಂತೆ, ಮಾ.19– ಜಂಜಾಟದ ಜೀವನ, ಸಂಕಷ್ಟದ ನಡುವೆಯೂ ಮಲೆನಾಡಿಗರು ತಮ್ಮ ಮೂಲ ಸಂಸ್ಕೃತಿ ಉಳಿಸಿಕೊಂಡು ಹೋಗಲು ಮಹಿಳೆಯರೇ ಮುಖ್ಯ ಕಾರಣ ಎಂದು ಶಾಸಕ ಹೆಚ್.ಕೆ. ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ತಾಲೂಕಿನ ಈಚಲಬೀಡು ಗ್ರಾಮದಲ್ಲಿ ಕರ್ನಾಟಕ ಜಾನಪದ ಪರಿಷತ್ ಮತ್ತು ಮಲೆನಾಡು ಜಾನಪದ ಉತ್ಸವ ಸಮಿತಿ ಸಹಯೋಗದಲ್ಲಿ ಭಾನುವಾರ ನಡೆದ ಮಲೆನಾಡು ಜಾನಪದ ಉತ್ಸವವನ್ನು ಮೊರದಲ್ಲಿ ಭತ್ತ ಸುರಿದು, ದೀಪ ಬೆಳಗಿಸಿ, ರಾಶಿ ಪೂಜೆ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಇನ್ನೊಬ್ಬರನ್ನು ತಿದ್ದುವ ಬದಲು ನಾವು ತಿದ್ದಿಕೊಳ್ಳೋಣ ಎಂಬ ಸತ್ಯ ಅರಿತು ಜನಪದ ಕಲೆಗಳನ್ನು ಉಳಿಸುವ ಕೆಲಸ ಮಾಡಬೇಕಿದೆ. ತನ್ನದೇ ಶ್ರೇಷ್ಠತೆ, ಪಾವಿತ್ರ್ಯತೆ ಹೊಂದಿರುವ ಜನಪದ ಕಲೆಗಳಿಗೆ ಸರಿಸಾಟಿ ಇಲ್ಲ. ಅದೇ ನಮ್ಮ ನಾಡಿನ ಮಣ್ಣಿನ ಗುಣ. ನುಡಿ, ನಡೆ ಮಾತ್ರವಲ್ಲದೇ ಕಲಾ ಪ್ರಾವಿಣ್ಯತೆಯಲ್ಲಿ ಜಾನಪದ ಸದಾ ಕಾಲ ಹಸಿರಾಗಿರುತ್ತದೆ. ಆದರೆ ಅವುಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಪ್ರಯತ್ನಗಳು ಹೆಚ್ಚಾಗಬೇಕು ಎಂದರು.


ಕರ್ನಾಟಕ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಹಿ.ಶಿ.ರಾಮಚಂದ್ರೇಗೌಡ ಮಾತನಾಡಿ, ಭದ್ರತೆ ನೀಡದ ನಾಗರಿಕತೆಗಿಂತ ಶತಮಾನಗಳಿಂದ ನಡೆದು ಬಂದಿರುವ ಜಾನಪದ ಸಂಸ್ಕೃತಿ ವಿಭಿನ್ನವಾಗಿದ್ದು ಮಹಿಳೆಯರಿಂದ ಅದು ಇನ್ನೂ ಉಳಿದಿದೆ. ಶಾಂತಿ, ಸೌಹಾರ್ದತೆ ಅವರಲ್ಲಿ ನೆಲೆಯಾಗಿರುವುದೇ ಅದಕ್ಕೆ ಕಾರಣ. ಇದರ ಜತೆಗೆ ಜಗತ್ತನ್ನೇ ಆವರಿಸಿರುವ ಕಾರ್ಪೋರೇಟ್ ಸಂಸ್ಥೆಗಳು ಮುಂದಿನ ದಿನಗಳಲ್ಲಿ ಕೃಷಿ ರಂಗಕ್ಕೂ ಕಾಲಿಟ್ಟರೆ ರೈತರ ಸ್ಥಿತಿ ಇನ್ನೆಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುದನ್ನು ಈಗಿನಿಂದಲೇ ಆಲೋಚಿಸಬೇಕು ಎಂದು ತಿಳಿಸಿದರು.

ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಮಾತನಾಡಿ, ಭತ್ತ ಬೆಳೆಯುವ ಪ್ರಮಾಣ ಕಡಿಮೆಯಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದರೆ ದೇಶದಲ್ಲಿ ಆಹಾರದ ಕೊರತೆ ಎದುರಿಸಬೇಕಾಗುತ್ತದೆ. ಈಗಾಗಲೇ ಚೀನಾದಿಂದ ಪ್ಲಾಸ್ಟಿಕ್ ಅಕ್ಕಿ ಲಗ್ಗೆ ಇಡುತ್ತಿದ್ದು ಮತ್ತಷ್ಟು ಆತಂಕ ಎದುರಿಸಬೇಕಾಗುತ್ತದೆ. ರೈತರು ತಾವು ಮಾಡುವ ಕೆಲಸಗಳ ಬಗ್ಗೆ ಕೀಳರಿಮೆ ಪಡಬಾರದು. ಅದು ಅತ್ಯಂತ ಶ್ರೇಷ್ಠ ಕಾಯಕ ಎಂಬುದನ್ನು ನಂಬಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಶ್ರದ್ಧೆಯಿಂದ ಕೃಷಿ ಕೈಗೊಂಡರೆ ಯಶಸ್ಸು ಖಂಡಿತ ಸಿಕ್ಕೇ ಸಿಗುತ್ತದೆ ಎಂಬುದನ್ನು ಮರೆಯಬಾರದು ಎಂದರು.

ಸಾಧಕರಿಗೆ ಸನ್ಮಾನ: ಇದೇ ವೇಳೆ ಕಾರ್ಯಕ್ರಮದಲ್ಲಿ ನ್ಯಾಯಾಧೀಶೆ ಪ್ರತಿಭಾ ರೈ, ಹಿರಿಯ ನಾಗರಿಕ ಈ.ಸಿ.ಕೃಷ್ಣೇಗೌಡ, ಉದ್ಯಮಿಗಳಾದ ಮಧುಸೂಧನ್, ಎಂ.ಟಿ. ಪ್ರದೀಪ್, ಸಾಹಿತಿ ಲಾವಣ್ಯ ಮೋಹನ್, ಸುಗ್ಗಿ ಕುಣಿತ ಕಲಾವಿದ ಸಿ.ಕೆ.ಸುಬ್ಬೇಗೌಡ, ವೈದ್ಯ ಡಾ.ಎಂ.ಎಸ್.ರಾಮಚಂದ್ರ ಮಾದರಿ ಕೃಷಿಕ ಕೆ.ಜಿ.ರಾಮಚಂದ್ರ, ಎಸ್.ಆರ್. ಕುಮಾರ್, ಮಾಜಿ ಸೈನಿಕ ಕಾಮನಹಳ್ಳಿ ಬೆಳ್ಳಿಗೌಡ, ರೈತ ಮುಖಂಡ ಎಚ್.ಬಿ. ರಾಮೇಗೌಡ ಅವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಾ.ಹಂಪನಹಳ್ಳಿ ತಿಮ್ಮೇಗೌಡ ಮಾತನಾಡಿದರು. ಮನೆಹಳ್ಳಿ ಮಠದ ಶ್ರೀ ಮಹಾಂತ ಶಿವಯೋಗಿ ಸ್ವಾಮೀಜಿ ಆಶೀರ್ವಚನ ನೀಡಿದರು. ಕಲಾವಿದ ಹಿರಿಯಣ್ಣ, ಮಲೆನಾಡು ಜಾನಪದ ಉತ್ಸವ ಸಮಿತಿ ಅಧ್ಯಕ್ಷ ಆರ್.ಪಿ.ಲಕ್ಷ್ಮಣ್, ಈಚಲಬೀಡು ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷ ದೊಡ್ಡೇಗೌಡ, ವಾರ್ತಾಧಿಕಾರಿ ವಿನೋದ್ ಚಂದ್ರ, ನ್ಯಾಮೂ.ಪ್ರತಿಭಾ, ಜಯಪ್ರಕಾಶ್, ಹೊಸೂರು ಗ್ರಾಪಂ ಅಧ್ಯಕ್ಷೆ ಪೂರ್ಣಿಮಾ, ನಿವೃತ್ತ ಪ್ರಾಧ್ಯಾಪಕ ಪುಟ್ಟೇಗೌಡ, ಮಧುಸೂಧನ್ ಇತರರಿದ್ದರು.

ಕಲಾತಂಡಗಳ ಮೆರವಣಿಗೆಯಲ್ಲಿ ಮೇಳೈಸಿದ ದೇಸಿ ಸೊಗಡು



ಮಲೆನಾಡು ಜಾನಪದ ಉತ್ಸವ ಅಂಗವಾಗಿ ನಡೆದ ಜಾನಪದ ಕಲಾ ತಂಡಗಳ ಮೆರವಣಿಗೆಗೆ ಗ್ರಾಮದ ಬಸವೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಗಣ್ಯರು ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 18 ಕಲಾ ತಂಡಗಳು ಮೆರವಣಿಗೆಗೆ ಮೆರುಗು ತಂದುಕೊಟ್ಟವು. ಹಿರಿಯರು, ಕಿರಿಯರೆನ್ನದೇ ಜನರು ಕುಣಿದು ಕುಪ್ಪಳಿಸಿದರು. ಮೆರವಣಿಗೆಯು ವೃತ್ತದ ಬಳಿ ಆಗಮಿಸುತ್ತಿದ್ದಂತೆ ಯುವ ಸಮೂಹ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಅಂತ್ಯದಲ್ಲಿ ಮಹಿಳೆಯರು ಶಾಸಕ ಎಚ್.ಕೆ.ಕುಮಾರಸ್ವಾಮಿ ಹಾಗೂ ಇತರ ಗಣ್ಯರಿಗೆ ಆರತಿ ಬೆಳಗಿದರು. ವೇದಿಕೆ, ಊಟದ ವ್ಯವಸ್ಥೆ, ಪಾರ್ಕಿಂಗ್ ಎಲ್ಲವೂ ಅಚ್ಚುಕಟ್ಟಾಗಿತ್ತು.

ರೈತರ ಬಗ್ಗೆ ಕಾಳಜಿ ಇಲ್ಲದ ಸರ್ಕಾರ, ಅಧಿಕಾರಿಗಳು: ಮನು ಸೋಮಯ್ಯ

ಮಡಿಕೇರಿ, ಮಾ.19– ಜಿಲ್ಲೆಯಲ್ಲಿ ರೈತರ ಸಮಸ್ಯೆಗಳು ಬೆಟ್ಟದಷ್ಟಿದ್ದು, ಸರ್ಕಾರ ಮತ್ತು ಅಧಿಕಾರಿ ವರ್ಗ ರೈತ ಪರ ಕಾಳಜಿಯಿಲ್ಲದೆ ಕೇವಲ ಭರವಸೆಗಳೊಂದಿಗೆ ದಿನದೂಡುತ್ತಿದೆ ಎಂದು ರಾಜ್ಯ ರೈತ ಸಂಘದ ಕೊಡಗು ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯ ರೈತ ಸಂಘದ ಪೆರಾಜೆ ಘಟಕದ ವತಿಯಿಂದ ಪೆರಾಜೆಯಲ್ಲಿ ಏರ್ಪಡಿಸಲಾಗಿದ್ದ ವಾರ್ಷಿಕ ಮಹಾಸಭೆ ಮತ್ತು ಘಟಕಕ್ಕೆ ನೂತನ ಸದಸ್ಯರ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಹಲವಾರು ಜ್ವಲಂತ ಸಮಸ್ಯೆಗಳಿದ್ದು, ಅದನ್ನು ಬಗೆಹರಿಸು ವಲ್ಲಿ ಸಂಘಟನೆ ಪಾತ್ರ ಬಹಳಷ್ಟಿದೆ. ಸಂಘಟನೆ ಯೊಂದಿಗೆ ಇಲಾಖಾ ಮಟ್ಟದಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳ ಬಹುದು ಎಂದು ಹೇಳಿದರು. ಈ ಭಾಗದಲ್ಲಿ ಅಡಿಕೆ ಬೆಳೆಗೆ ಹಳದಿ ರೋಗ ತಗುಲಿದ್ದು, ಈ ಕುರಿತಾಗಿ ಕೆಲವು ತಿಂಗಳ ಹಿಂದೆ ಜಿಲ್ಲಾಧಿಕಾರಿಗಳೊಂದಿಗೆ ರೈತ ಸಂಘಟನೆ ಸದಸ್ಯರು ಮತ್ತು ಅಡಿಕೆ ಬೆಳೆಗಾರರು ಚರ್ಚೆ ನಡೆಸಿದ್ದರು. ವಿಜ್ಞಾನಿಗಳನ್ನು



ಕರೆತಂದು ಸ್ಥಳ ಮತ್ತು ಅಡಿಕೆ ಬೆಳೆಗೆ ತಗುಲಿ ರುವ ರೋಗಕ್ಕೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಯೋಜನೆ ಮಾಡಲಾಗುತ್ತದೆ ಎಂದು ಭರವಸೆ ನೀಡಿದ್ದಾರೆ ಎಂದು ಮನು ಸೋಮಯ್ಯ ಮಾಹಿತಿ ನೀಡಿದರು.

ರಾಜ್ಯ ರೈತ ಸಂಘದ ಪೆರಾಜೆ ಘಟಕದ ಗೌರವಾಧ್ಯಕ್ಷ ಹರಿಶ್ಚಂದ್ರ ಮುಡುಕಜ್ಜೆ ಮಾತನಾಡಿ, ಪೆರಾಜೆ ಗ್ರಾಮ ಎರಡು ಜಿಲ್ಲೆಗಳ ಗಡಿ ಗ್ರಾಮವಾಗಿದೆ ಒಂದು ದಶಕ ದಿಂದ ಈ ಭಾಗದಲ್ಲಿ ಅಡಿಕೆ ಬೆಳೆಗೆ ಹಳದಿ ರೋಗ ಕಾಡುತ್ತಿದೆ. ಆದರೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಅಸಾಧ್ಯವಾಗಿದೆ. ಜಿಲ್ಲಾಧಿಕಾರಿಗಳೊಂದಿಗೆ ಚರ್ಚೆಗಳು ನಡೆದರೂ ಯಾವುದೇ ಪರಿಹಾರ ಕಂಡಿಲ್ಲ ಎಂದು ಅಳಲು ತೋಡಿಕೊಂಡರು. ರೈತರ ಸಮಸ್ಯೆಗಳನ್ನು ಬಗೆಹರಿ ಸಲು ರೈತ ಸಂಘ ವೇದಿಕೆಯಾಗಿದೆ. ಈ ನಿಟ್ಟಿನಲ್ಲಿ ಸರ್ವ ಸದಸ್ಯರು ಸಂಘಟಿತರಾಗಿ ಹೋರಾಟದ ಮೂಲಕ ಯಶಸ್ಸನ್ನು ಕಾಣಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪೆರಾಜೆ ಗ್ರಾಮದ ಸುಮಾರು 23 ಮಂದಿ ನೂತನ ಸದಸ್ಯರು ಸಂಘಕ್ಕೆ ಸೇರ್ಪಡೆಗೊಂಡರು. ನೂತನ ಸದಸ್ಯರಿಗೆ ಸಂಘಟನೆ ಪ್ರಮುಖರು ರೈತ ಸಂಘಟನೆಯ ಹಸಿರು ಶಾಲು ಹೊದಿಸಿ ಗೌರವಿಸಿದರು. ಕರ್ನಾಟಕ ರಾಜ್ಯ ರೈತ ಸಂಘ ಕೊಡಗು ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಚೆಟ್ರುಮಾಡ ಸುಜಯ್ ಬೋಪಯ್ಯ ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು. ರೈತ ಸಂಘದ ಕೊಡಗು ಜಿಲ್ಲಾ ಘಟಕದ ಸಂಚಾಲಕ ಪುಚ್ಚಿಮಾಡ ಸುಭಾಷ್ ಸುಬ್ಬಯ್ಯ, ಮಾಯಮುಡಿ ವಲಯ ಅಧ್ಯಕ್ಷ ಪುಚ್ಚಿಮಾಡ ರಾಯ್, ನೆಲಜಿ ವಲಯ ಅಧ್ಯಕ್ಷ ಪಾಳೆಯಡ ಕೃಪ, ಶೈಲೇಶ್, ಪೆರಾಜೆ ಘಟಕದ ಪದಾಧಿಕಾರಿಗಳು, ನಿರ್ದೇಶಕರುಗಳು, ಪೆರಾಜೆ ಗ್ರಾಮದ ಬೆಳೆಗಾರರು ಸಭೆಯಲ್ಲಿ ಹಾಜರಿದ್ದರು.

ಇಂದು ನಗರಸಭೆ ಕೌನ್ಸಿಲ್ ವಿಶೇಷ ಸಭೆ

ಮಡಿಕೇರಿ, ಮಾ.19– ನಗರಸಭೆಯ 2023–24ನೇ ಸಾಲಿನ ಆಯ ವ್ಯಯ ಮಂಜೂರಾತಿಗೆ ಮಾ.20 ರಂದು ಬೆಳಗ್ಗೆ 11.30 ಗಂಟೆಗೆ ನಗರಸಭೆ ಕೌನ್ಸಿಲ್ ವಿಶೇಷ ಸಭೆಯು ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಅವರ ಅಧ್ಯಕ್ಷತೆಯಲ್ಲಿ ನಗರಸಭಾ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಚಾ.ನಗರ, ಹನೂರಲ್ಲಿ ಬಿಜೆಪಿ, ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾರು?

ತೀವ್ರ ಕುತೂಹಲ ಕೆರಳಿಸಿರುವ ಈ ಮೂರು ಕ್ಷೇತ್ರಗಳು

● ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಮಾ.19– ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಯಾವ ಪಕ್ಷದಿಂದ ಯಾರು ಸ್ಪರ್ಧಿಸಲಿದ್ದಾರೆ ಎಂಬ ಕುತೂಹಲ ಮುಖಂಡರು, ಕಾರ್ಯಕರ್ತರು ಹಾಗೂ ರಾಜಕೀಯಾಸಕ್ತರಲ್ಲಿ ಮೂಡಿಸಿದೆ.

ಜಿಲ್ಲೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಬಲಿಷ್ಠವಾಗಿದ್ದು, ಅಧಿಕಾರಕ್ಕಾಗಿ ತೀವ್ರ ಪೈಪೋಟಿ ನಡೆಸಲಿವೆ. ಇನ್ನು ಬಿಎಸ್‌ಪಿಯೂ ಜಿಲ್ಲೆಯಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದು, ಇತರ ಪಕ್ಷಗಳಿಗೆ ತನ್ನ ಆನೆ ನಡೆ ಮೂಲಕ ಪ್ರಬಲ ಸ್ಪರ್ಧೆ ಒಡ್ಡಲು ವೇದಿಕೆ ಸಿದ್ಧಪಡಿಸುತ್ತಿದೆ. ಹನೂರು ಭಾಗದಲ್ಲಿ ಜೆಡಿಎಸ್ ಪ್ರಾಬಲ್ಯವಾಗಿದ್ದು, ತನ್ನ ಶಕ್ತಿ ಪ್ರದರ್ಶಿಸಲಿದೆ. ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳಲ್ಲಿ ಯಾವ ಪಕ್ಷದಿಂದ ಯಾರು ಅಭ್ಯರ್ಥಿ ಎಂದು ಹೇಳಲು ಸಾಧ್ಯವಾಗುತ್ತಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ಟಿಕೆಟ್‌ಗೆ ಪೈಪೋಟಿ ಏರ್ಪಟ್ಟಿರು ವುದು ಪಕ್ಷದ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಚಾಮರಾಜನಗರ ಮತ್ತು ಹನೂರು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಯಾರಾಗಬಹುದು ಎಂಬುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕೊಳ್ಳೇಗಾಲದಲ್ಲಿ ನಾಲ್ವರು ಮಾಜಿ ಶಾಸಕರ ಪೈಕಿ ಯಾರು ಕಾಂಗ್ರೆಸ್ ಟಿಕೆಟ್ ಗಿಟ್ಟಿಸುತ್ತಾರೆ ಎಂಬುದು ಕುತೂಹಲ ಕೆರಳಿಸಿದೆ.

ಚಾಮರಾಜನಗರ: ಈ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಕಣಕ್ಕಿಳಿಯುವುದು ನಿಶ್ಚಯವಾಗಿದೆ. ಆದರೆ, ಇವರ ಎದುರಾಳಿಯಾಗಿ ಬಿಜೆಪಿ ಅಭ್ಯರ್ಥಿ ಯಾರಾಗುತ್ತಾರೆ ಎಂಬುದೇ ಈಗ ಪ್ರಶ್ನೆಯಾಗಿದೆ. ಆರೇಳು ಟಿಕೆಟ್ ಆಕಾಂಕ್ಷಿಗಳು ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದು, 'ಕಮಲ' ಯಾರ ಮುಡಿಗೇರಲಿದೆ ಎಂಬುದನ್ನು ಕಾದು ನೋಡಬೇಕಿದೆ. ಈ ಕ್ಷೇತ್ರದಿಂದ ಬಿಎಸ್‌ಪಿ ಅಭ್ಯರ್ಥಿಯಾಗಿ ಹ.ರಾ.ಮಹೇಶ್ ಕಣಕ್ಕೆ ಇಳಿಯಲಿದ್ದರೂ, ಪಕ್ಷದ ನಾಯಕರು ಅತೃಪ್ತರಿಗೆ ಗಾಳ ಹಾಕುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಕೊಳ್ಳೇಗಾಲ: ಜಿಲ್ಲೆಯ ಏಕೈಕ ಮೀಸಲು ಕ್ಷೇತ್ರದಿಂದ ಬಿಜೆಪಿಯಿಂದ ಹಾಲಿ ಶಾಸಕ ಎನ್.ಮಹೇಶ್ ಸ್ಪರ್ಧೆ ಖಚಿತ. ಆದರೆ, ಕಾಂಗ್ರೆಸ್ ಟಿಕೆಟ್‌ಗೆ ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಸ್.ಬಾಲರಾಜು, ಎಸ್.ಜಯಣ್ಣ ನಡುವೆ ಪೈಪೋಟಿ ಏರ್ಪಟ್ಟಿವೆ. ಆದರೆ, ಈಗ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ 'ಕೈ' ಹಿಡಿದಿರುವುದರಿಂದ ಈ ನಾಲ್ವರು ಮಾಜಿ ಶಾಸಕರಲ್ಲಿ ಯಾರಿಗೆ ಕೈ ಟಿಕೆಟ್ ಎಂಬುದು ಚರ್ಚೆಗೆ ಗ್ರಾಸವಾಗಿದೆ. ಜಿ.ಎನ್.ನಂಜುಂಡಸ್ವಾಮಿ ಯಾವುದೇ ಷರತ್ತಿಲ್ಲದೆ ಕಾಂಗ್ರೆಸ್ ಸೇರಿರುವುದಾಗಿ ತಿಳಿಸಿರುವುದರಿಂದ ಉಳಿದ ಮೂವರಲ್ಲಿ ಟಿಕೆಟ್‌ಗೆ ಪೈಪೋಟಿ ಏರ್ಪಟ್ಟಿದೆ.

ಜೆಡಿಎಸ್‌ನಿಂದ ಸ್ಪರ್ಧಿಸಲು ಪುಟ್ಟಸ್ವಾಮಿ ಮತ್ತು ಓಲೆ ಮಹದೇವು ನಡುವೆ ಪೈಪೋಟಿ ನಡೆಯುತ್ತಿದೆ. ಮುಳ್ಳೂರು ಶಿವಮಲ್ಲು ಮತ್ತು ಚಾಮರಾಜ ಅವರು ಸಹ ಆಕಾಂಕ್ಷಿಗಳಾಗಿರುವುದರಿಂದ ಆ ಪಕ್ಷದ ನಾಯಕರು ಯಾರಿಗೆ ಟಿಕೆಟ್ ಕೊಡುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ. ಬಿಎಸ್‌ಪಿ ಅಭ್ಯರ್ಥಿಯಾಗಿ ಕಮಲ್ ನಾಗರಾಜು ಸ್ಪರ್ಧಿಸಲಿದ್ದಾರೆ.

ಹನೂರು: ಹನೂರಿನಲ್ಲಿ ಹಾಲಿ ಶಾಸಕ ಆರ್. ನರೇಂದ್ರ ಕೈ ಅಭ್ಯರ್ಥಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಬಿಜೆಪಿ ಅಭ್ಯರ್ಥಿ ಯಾರು ಎಂಬುದೇ ಚರ್ಚೆಯ ವಿಷಯವಾಗಿದೆ. ಡಾ.ಪ್ರೀತನ್ ನಾಗಪ್ಪ, ವೆಂಕಟೇಶ್, ಡಾ.ದತ್ತೇಶ್ ಕುಮಾರ್, ನಿಶಾಂತ್ ಅವರ ನಡುವೆ ಕಮಲ ಟಿಕೆಟ್‌ಗೆ ಪೈಪೋಟಿ ಏರ್ಪಟಿದೆ. ಜೆಡಿಎಸ್ ತನ್ನ ಅಭ್ಯರ್ಥಿ ಮಂಜುನಾಥ್ ಎಂದು ಈಗಾಗಲೇ ಘೋಷಿಸಿದೆ. ಆದರೆ, ಬಿಎಸ್‌ಪಿ ಅಭ್ಯರ್ಥಿ ಯಾರು ಎಂಬುದು ಇನ್ನು ನಿರ್ಧಾರವಾಗಿಲ್ಲ.

ಗುಂಡ್ಲುಪೇಟೆ: ಬಿಜೆಪಿ ಅಭ್ಯರ್ಥಿಯಾಗಿ ಹಾಲಿ ಶಾಸಕ ಸಿ.ಎಸ್. ನಿರಂಜನ್‌ಕುಮಾರ್, ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಸಚಿವ ದಿವಂಗತ ಎಚ್.ಎಸ್. ಮಹದೇವಪ್ರಸಾದ್ ಅವರ ಪುತ್ರ ಎಚ್.ಎಂ.ಗಣೇಶ್ ಪ್ರಸಾದ್ ಬಹುತೇಕ ಕಣಕ್ಕೆ ಇಳಿಯುವುದು ಬಹುತೇಕ ಪಕ್ಕಾ. ಜೆಡಿಎಸ್ ಅಭ್ಯರ್ಥಿಯಾಗಿ ಕಡಬೂರು ಮಂಜುನಾಥ್ ಸ್ಪರ್ಧಿಸಲು ವೇದಿಕೆ ಸಿದ್ಧಪಡಿಸುತ್ತಿದ್ದಾರೆ. ಸ್ವಾತಂತ್ರ್ಯ ಅಭ್ಯರ್ಥಿಯಾಗಿ ಚಾಮುಲ್ ನಿರ್ದೇಶಕ ಎಂ.ಸಿ. ಸುನೀಲ್ ಕುಮಾರ್ ಸ್ಪರ್ಧಿಸಲು ತೀರ್ಮಾನಿಸಿದ್ದಾರೆ. ಬಿಎಸ್‌ಪಿ ಅಭ್ಯರ್ಥಿಯಾಗಿ ಯಾರು ಎಂಬುದನ್ನು ಇನ್ನೂ ನಿರ್ಧಾರವಾಗಿಲ್ಲ.

ದೇವಸ್ಥಾನಗಳು ನಮ್ಮ ಸಂಸ್ಕೃತಿಯ ಪ್ರತೀಕ

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ಬೇಗೂರು, ಮಾ.19– ದೇವಸ್ಥಾನಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಇಲ್ಲಿಗೆ ಸಮೀಪದ ರಂಗೂಪುರ ಗ್ರಾಮದಲ್ಲಿ ಶ್ರೀಮಹಾಲಿಂಗೇಶ್ವರ ಸೇವಾಲಯ ಜೀರ್ಣೋದ್ಧಾರ, ಲಿಂಗ ಪ್ರತಿಷ್ಠಾಪನೆ, ಕಳಸಾರೋಹಣ ಹಾಗೂ ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಭಗವಂತನಿಗೆ ಶ್ರೀಮಂತವಾಗಿ ಭಕ್ತಿ ಸಮರ್ಪಿಸುವ ದೇಶವಿದ್ದರೇ ಅದು ಭಾರತ ಮಾತ್ರ. ಇನ್ನೊಬ್ಬರ ಏಳಿಗೆ ನೋಡಿ ಸಂತಸ ಪಡುವುದೇ ನಿಜವಾದ ಧರ್ಮ. ಮನುಷ್ಯನ ನಂಬಿಕೆ ಎಂದರೆ ಭಗವಂತ. ಆದರೆ ಭಗವಂತನಿಂದ ಬದುಕುತ್ತಿದ್ದೇನೆ ಎಂದು ಯಾರು ಹೇಳುವುದಿಲ್ಲ. ಆಹಾರ, ಗಾಳಿ, ನೀರು ಎಲ್ಲವೂ ಭಗವಂತನ ಕೃಪೆಯಿಂದ ಬಂದಿದ್ದು, ದೇವಾಲಯಕ್ಕೆ ಬಂದಾಗ ಸಾಮಾನ್ಯವಾದ ಅನುಭೂತಿ ಉಂಟಾಗುತ್ತದೆ. ಅದು ಅವನ ಮುಂದಿನ ಭವಿಷ್ಯಕ್ಕೆ ದಾರಿ ಮಾಡಿ ಕೊಡುತ್ತದೆ. ದೇವಾಲಯಕ್ಕೆ ಬಂದಾಗ ಯಾವ ಪವಿತ್ರ ಭಾವನೆ ಇರುತ್ತದೋ, ಅದೇ ರೀತಿ ಮನುಷ್ಯ ಜಾಗೃತನಾಗಿದ್ದರೆ ಆತ ಜೀವನದಲ್ಲಿ ಯಶಸ್ಸು ಪಡೆಯಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್, ಕಾಂಗ್ರೆಸ್ ಯುವ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್, ಸೋಮಹಳ್ಳಿ ಶೀಲಾ ಮಠಾಧ್ಯಕ್ಷ ಸಿದ್ದಮಲ್ಲಪ್ಪ ಸ್ವಾಮೀಜಿ, ಮಾದಪಟ್ಟಣ ವಿರಕ್ತ ಮಠದ ತೋಂಟದಾರ್ಯ ಸ್ವಾಮೀಜಿ, ಹರವೆ ಮಠದ ಸರ್ಪಭೂಷಣ ಸ್ವಾಮೀಜಿ, ಚಿಕ್ಕ ತುಪ್ಪೂರು ಚೆನ್ನವೀರ ಸ್ವಾಮೀಜಿ, ಚುಂಚನಹಳ್ಳಿ ಚೆನ್ನಬಸವ ಸ್ವಾಮೀಜಿ, ಭೋಗಯ್ಯನ ಹುಂಡಿ ಮಠಾಧ್ಯಕ್ಷ ನಂಜುಂಡಸ್ವಾಮೀಜಿ, ಕೊಡಗಾಪುರ ಚೆನ್ನಬಸವಸ್ವಾಮೀಜಿ, ಮೈಸೂರು ಮಹಾರಾಣಿ ಕಾಲೇಜಿನ ಉಪನ್ಯಾಸಕ ವಸಂತ್‌ಕುಮಾರ್, ಜಿಲ್ಲಾ ಹಾಪ್ ಕಾಮ್ ಅಧ್ಯಕ್ಷ ಕೆ.ಆರ್.ಲೋಕೇಶ್, ರಂಗೂಪುರು ನಾಗರಾಜು, ಜಿಪಂ ಮಾಜಿ ಅಧ್ಯಕ್ಷ ಕಬ್ಬಳ್ಳಿ ಮಹೇಶ್, ಜಗದೀಶ್, ಮಹೇಶ್, ಮತ್ತಿತರರಿದ್ದರು.

ಚಾಮರಾಜನಗರ ತಾಲೂಕಿನ ಆಲೂರಿನ ಆರ್ಯ ಈಡಿಗರ ಬಡಾವಣೆಯಲ್ಲಿ ನಟ ಪವರ್‌ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಗ್ರಾಮದ ಆರ್ಯ ಈಡಿಗರ ಮುಖಂಡರು ಉಪಸ್ಥಿತರಿದ್ದರು.



ವಿವಿಧ ಗ್ರಾಮಗಳಿಗೆ ರುದ್ರೇಶ್ ಭೇಟಿ, ಸಭೆ

ಚಾಮರಾಜನಗರ, ಮಾ.19– ತಾಲೂಕಿನ ಉಡಿಗಾಲ ಜಿಪಂ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್ ಭೇಟಿ ನೀಡಿ ಬಿಜೆಪಿ ಮಹಾಶಕ್ತಿ ಕೇಂದ್ರ ಹಾಗೂ ಶಕ್ತಿ ಕೇಂದ್ರದ ಪ್ರಮುಖರೊಂದಿಗೆ ಸಭೆ ನಡೆಸಿದರು.



ಕಾಳನಹುಂಡಿ ಗ್ರಾಮದಲ್ಲಿ ಬಿಜೆಪಿ ಪ್ರಮುಖರೊಂದಿಗೆ ಚುನಾವಣೆ ಸಂಬಂಧ ಸಭೆ ನಡೆಸಿ, ಪಕ್ಷ ಸಂಘಟನೆ ಕುರಿತು ಚರ್ಚಿಸಿ ಮಾತನಾಡಿದ ಅವರು, ಚಾಮರಾಜನಗರ ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡು ಬಿಜೆಪಿ ಪ್ರಮುಖರೊಂದಿಗೆ ಪಕ್ಷ ಸಂಘಟನೆ ಕುರಿತು ಚರ್ಚಿಸಲಾಗಿದೆ. ಈ ಬಾರಿ ಬಿಜೆಪಿಗೆ ಉತ್ತಮ ವಾತಾವರಣ ವಿದ್ದು, ಪಕ್ಷ ಅಧಿಕಾರಕ್ಕೆ ಬರುವ ಎಲ್ಲಾ ಲಕ್ಷಣಗಳಿವೆ. ಆದರಿಂದ ಪಕ್ಷದ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ಬೂತ್ ಮಟ್ಟದಲ್ಲಿ ಪ್ರತಿ ಮನೆ ಮನೆಗೂ ತಿಳಿಸುವ ಮೂಲಕ ಬಿಜೆಪಿ ಜಯಭೇರಿ ಬಾರಿಸಲು ಎಲ್ಲರೂ ಶ್ರಮಿಸೋಣ ಎಂದರು.

ನಂತರ ಉಡಿಗಾಲ, ಹೆಗ್ಗೋಠಾರ, ಮಲ್ಲಯ್ಯನಪುರ, ಮುತ್ತಿಗೆ, ಬಡಗಲಪುರ ಇನ್ನಿತರ ಗ್ರಾಮಗಳಲ್ಲಿ ಭೇಟಿ ನೀಡಿ ಬಿಜೆಪಿ ಪ್ರಮುಖರೊಂದಿಗೆ ಸಭೆ ನಡೆಸಿದರು. ಸಭೆಯಲ್ಲಿ ಮುಖಂಡ ಮೂಡ್ಲಾಪುರ ನಂದೀಶ್, ಮೈಸೂರು ಮೃಗಾಲಯ ಪ್ರಾಧಿಕಾರದ ಸದಸ್ಯೆ ಜ್ಯೋತಿ ರೇಚಣ್ಣ, ಉಡಿಗಾಲ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಚಂದ್ರಶೇಖರ್, ಜ್ಯೋತಿಗೌಡನಪುರ ಶಕ್ತಿ ಕೇಂದ್ರ ಅಧ್ಯಕ್ಷ ವಿಜಯೇಂದ್ರ, ಶಿವಕುಮಾರ್ ತಮ್ಮಡಹಳ್ಳಿ, ಗುರು, ನಟೇಶ್, ಮೂರ್ತಿ, ಪ್ರಕಾಶ್, ಪಣ್ಯದಹುಂಡಿ ಸತೀಶ್ ಇತರರು ಭಾಗವಹಿಸಿದ್ದರು.

ನೆಲ, ಜಲ, ಭಾಷೆಗೆ ಚ್ಯುತಿಯಾದರೆ ತಕ್ಕ ಉತ್ತರ ನೀಡಿ: ಪುಟ್ಟರಂಗಶೆಟ್ಟಿ

ಚಾಮರಾಜನಗರ, ಮಾ.19– ಮಾತೃಭಾಷೆ ಕನ್ನಡಕ್ಕೆ ತೊಂದರೆಯಾದರೆ ಕನ್ನಡಿಗರು ಒಂದಾಗಿ ಹೋರಾಡುವ ಮೂಲಕ ಕನ್ನಡ ಭಾಷೆ, ನೆಲ, ಜಲ ಸಂರಕ್ಷಿಸಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಕರೆ ನೀಡಿದರು.

ತಾಲೂಕಿನ ಪುಣಜನೂರು ಗ್ರಾಮದ ಅರ್ಣ್ಯ ತನಿಖಾ ಠಾಣೆ ಎದುರು ಆಯೋಜಿಸಲಾಗಿದ್ದ ಗಡಿನಾಡು ಹಿತ ರಕ್ಷಣಾ ಹಾಗೂ ಕ್ರೀಡಾ ಸಾಂಸ್ಕೃತಿಕ ವೇದಿಕೆ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಅಚ್ಚ ಕನ್ನಡಿಗರು ನೆಲೆಸಿರುವ ಕಾಸರಗೋಡು, ತಾಳವಾಡಿ ಸೇರಿದಂತೆ ಗಡಿಭಾಗದ ಹಲವು ಪ್ರದೇಶಗಳು ಭಾಷಾವಾರು ವಿಂಗಡಣೆ ಸಂದರ್ಭ ನೆರೆ ರಾಜ್ಯಗಳಿಗೆ ಸೇರಿ ಕೊಂಡಿದ್ದು, ಈಗಲೂ ಕನ್ನಡಿಗರೂ ಹೋರಾಟ ನಡೆಸುತ್ತಿದ್ದಾರೆ. ಹೀಗಾಗಿ ಗಡಿ ಭಾಗದಲ್ಲೂ ಕನ್ನಡ ಸಂಘಟನೆ ತಲೆ ಎತ್ತುತ್ತಿರುವುದು ಉತ್ತಮ ಬೆಳವಣಿಗೆ. ನೆಲ, ಜಲ, ಭಾಷೆಗೆ ಚ್ಯುತಿ ಉಂಟಾ ದರೆ ತಕ್ಕ ಉತ್ತರ ನೀಡಬೇಕೆಂದು ಸಲಹೆ ನೀಡಿದರು.

ನಾನು ಕಳೆದ 15 ವರ್ಷಗಳಿಂದ ಈ ಭಾಗದ ಶಾಸಕನಾಗಿದ್ದೇನೆ. ಗಡಿಭಾಗದಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಲಂಬಾಣಿ ಜನರು ವಾಸಿಸುತ್ತಿದ್ದಾರೆ. ಇಲ್ಲಿನ ಜನರಿಗೆ ಗ್ರಾಮಸಡಕ್ ಯೋಜನೆಯಲ್ಲಿ ರಸ್ತೆ ಹಾಗೂ ಸೇತುವೆ ನಿರ್ಮಾಣ, ಗಂಗಾ ಕಲ್ಯಾಣ ಯೋಜನೆ ಅನುಷ್ಠಾನ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ತೆರೆಯ ಲಾಗಿದೆ ಎಂದು ತಿಳಿಸಿದರು.



ಮುಖ್ಯಮಂತ್ರಿಗಳು ಚಾಮರಾಜನಗರಕ್ಕೆ ವಿಶೇಷ ಪ್ಯಾಕೇಜ್ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ಅದು ಭರವಸೆಯಾಗಿ ಉಳಿದಿದೆ. ಹೀಗಾಗಿ ತಾವು ಮಹದೇಶ್ವರ ಬೆಟ್ಟದಲ್ಲಿ ನಡೆದ ಸಿಎಂ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜು ಕೋಡಿ ಉಗನೆ ಮಾತನಾಡಿ, ಬೆಳಗಾವಿಯಂತೆ ಇಲ್ಲಿ ಹೋರಾಟ ಮಾಡುವ ಸಮಸ್ಯೆ ಇಲ್ಲ. ಎಲ್ಲಾ ಭಾಷೆಗಳನ್ನು ಗೌರವಿಸಬೇಕು. ಆದರೆ ಕನ್ನಡ ನೆಲದಲ್ಲಿ ಇರುವ ಪ್ರತಿಯೊಬ್ಬರು ಮಾತೃ ಭಾಷೆ ಉಳಿವು ಹಾಗೂ ಬೆಳವಣಿಗೆಗೆ ಮುಂದಾಗಬೇಕು ಎಂದು ತಿಳಿಸಿದರು.

ಹಲ್ಮಿಡಿ ಶಾಸನ ಕ್ರಿಸ್ತಶಕ 450ರಲ್ಲಿ ಬರೆಯಲ್ಪಟ್ಟಿದ್ದು, ಅದರಲ್ಲಿ ಕನ್ನಡಿಗರ ಔದಾರ್ಯವನ್ನು ಎತ್ತಿ ಹಿಡಿಯಲಾಗಿದೆ. ಕನ್ನಡಿಗರು ಸಾಧುಗಳಿಗೆ ಸಾಧುಗಳಾಗಿರುತ್ತಾರೆ. ಯಾರಾದರೂ ತೊಂದರೆ ನೀಡಿದರೆ ಕಲಿ ಪುರುಷನಾಗುತ್ತಾನೆ ಎಂದು ಕನ್ನಡಿಗರ ಮನಸ್ಸನ್ನು ತೆರೆದಿಟ್ಟ ಅವರು 12ನೇ ಶತಮಾನದಲ್ಲಿ ಬಸವಣ್ಣನವರು ಸಾಹಿತ್ಯದಲ್ಲಿ ವೀರಶೈವ ತತ್ವ ಮತ್ತು ಆದರ್ಶಗಳನ್ನು ಬೆಳೆಸುವ ಮೂಲಕ ಜನ ಸಾಮಾನ್ಯರಿಗೆ ಅರ್ಥವಾಗುವಂತಹ ವಚನ ನೀಡಿದ್ದಾರೆ. ಅವರು ಹೇಳಿರುವ ವಚನಗಳನ್ನು ನಾವು ಪಾಲಿಸಿದರೆ ಕನ್ನಡಕ್ಕೆ ಮತ್ತಷ್ಟು ಶ್ರೀಮಂತಿಕೆ ಬರಲಿದೆ ಎಂದರು.

ಇದಕ್ಕೂ ಮುನ್ನಾ ಗಡಿನಾಡು ಹಿತ ರಕ್ಷಣಾ ಹಾಗೂ ಕ್ರೀಡಾ ಸಾಂಸ್ಕೃತಿಕ ವೇದಿಕೆ ಸಂಘದ ನಾಮಫಲಕವನ್ನು ಶಾಸಕ ಪುಟ್ಟರಂಗಶೆಟ್ಟಿ ಅನಾವರಣಗೊಳಿಸಿದರು. ಇದೇ ವೇಳೆ ಪುಣಜನೂರು ಪಿಡಿಓ ಸಿದ್ದರಾಜು, ವಲಯ ಅರಣ್ಯಧಿಕಾರಿ ನಿಸಾರ್ ಅಹಮದ್ ಅವರನ್ನು ಸನ್ಮಾನಿಸಲಾಯಿತು. ಗಿರಿಜನ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಎಸ್.ಸೋಮನಾಯ್ಕ, ಸಂಘದ ಅಧ್ಯಕ್ಷ ಆರ್.ಸುರೇಶ್, ಎಸ್‌ಐ ಮಂಜುನಾಥ್, ಗ್ರಾಪಂ ಅಧ್ಯಕ್ಷ ಆರ್.ಮಣಿನಾಯ್ಕ, ಉಪಾಧ್ಯಕ್ಷೆ ಗೀತಾ, ಜಿಲ್ಲಾ ಕಸಾಪ ಉಪಾಧ್ಯಕ್ಷ ನಂಜುಂಡಸ್ವಾಮಿ (ಪಾಪು), ಪಿಎಸಿಸಿ ಅಧ್ಯಕ್ಷ ಮುತ್ತುನಾಯ್ಕ, ತಾಪಂ ಮಾಜಿ ಸದಸ್ಯ ಪಿ.ಕುಮಾರನಾಯ್ಕ, ಗ್ರಾಪಂ ಸದಸ್ಯ ಪಿ.ನಾಗನಾಯ್ಕ, ಗ್ರಾಪಂ ಮಾಜಿ ಅಧ್ಯಕ್ಷ ಶಾಮೀರ್ ಪಾಷ, ಹೆಚ್.ಮೂರ್ತಿ, ಗಣೇಶ್‌ನಾಯ್ಕ, ಪದಾಧಿಕಾರಿಗಳಾದ ಜಾಕೀರ್, ಸಾದಿಕ್, ಮನೋಜ್ ಗ್ರಾಪಂ ಗ್ರಂಥಾಲಯ ಮೇಲ್ವಿಚಾರಕ ವೆಂಕಟೇಶ್ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ ಸೋಮವಾರ 20 ಮಾರ್ಚ್ 2023

ಮಾ.23, ಸ್ವಾಮಿ ವಿವೇಕಾನಂದ ಯುವಶಕ್ತಿ ಸಂಘ ಯೋಜನೆಗೆ ಸಿಎಂ ಬೊಮ್ಮಾಯಿ ಚಾಲನೆ

ಬೆಂಗಳೂರು: ಸ್ವಾಮಿ ವಿವೇಕಾನಂದ ಯುವಶಕ್ತಿ ಸಂಘ ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾ.23ರಂದು ಚಾಲನೆ ನೀಡಲಿದ್ದಾರೆ. ಈ ಕುರಿತು ಇಂದು ಮುಖ್ಯಮಂತ್ರಿ ಯವರು ಸರ್ಕಾರದ ಹಿರಿಯ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಸಭೆ ನಡೆಸಿ ಸಂಘಗಳ ರಚನೆಯ ಪ್ರಗತಿಯ ಕುರಿತು ಮಾಹಿತಿ ಪಡೆದರು.



ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಬಹಳ ವರ್ಷಗಳಿಂದ ಸಕ್ರಿಯವಾಗಿವೆ. ಆದರೆ ಯುವಕರಿಗಾಗಿ ಮೊದಲ ಬಾರಿಗೆ ಸ್ವ-ಉದ್ಯೋಗ ಕೈಗೊಳ್ಳಲು ಇಂತಹ ಯೋಜನೆಯನ್ನು ರೂಪಿಸಲಾಗಿದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹೆಚ್ಚಿನ ಆದ್ಯತೆಯೊಂದಿಗೆ ಕಾರ್ಯನಿರ್ವಹಿಸಬೇಕು. ಜಂಟಿ ಬಾಧ್ಯತಾ ಗುಂಪುಗಳ ರಚನೆಯಾಗಿ, ಸುತ್ತು ನಿಧಿ ಹಂಚಿಕೆಯೊಂದಿಗೆ ನಿಮ್ಮ ಕೆಲಸ ಮುಗಿಯುವುದಿಲ್ಲ. ಈ ಗುಂಪುಗಳು ಯೋಜನೆಯನ್ನು ಗುರುತಿಸಿ, ಬ್ಯಾಂಕಿನಿಂದ ಸಾಲ ಸೌಲಭ್ಯ ಪಡೆದು, ತಮ್ಮ ಉದ್ದಿಮೆಯನ್ನು ಸ್ಥಾಪಿಸಿ, ಉತ್ಪಾದನೆ ಪ್ರಾರಂಭಿಸುವ ವರೆಗೂ ನೀವು ಅವರಿಗೆ ಮಾರ್ಗದರ್ಶನ ನೀಡಬೇಕಾಗಿದೆ ಎಂದು ಸೂಚಿಸಿದರು.

ಯೋಜನೆಗಳನ್ನು ಗುರುತಿಸಲು ನಿಯೋಜಿಸಿರುವ ಸಮಾಲೋಚಕರು, ಯುವಕರು ಕೈಗೊಳ್ಳುವ ಯೋಜನೆಗೆ ಅನುಗುಣವಾಗಿ, ಆಯಾ ಕ್ಷೇತ್ರದ ಪರಿಣತರಿಂದಲೇ ತರಬೇತಿ ನೀಡಬೇಕು. ಆಗ ಮಾತ್ರ ಯೋಜನೆ ಯಶಸ್ವಿಯಾಗಲು ಸಾಧ್ಯ ಎಂದು ತಿಳಿಸಿದರು. ಯುವಶಕ್ತಿ ಸಂಘಗಳಿಗೆ ಸಾಲ ನೀಡುವಾಗ, ಯೋಜನಾ ಮೊತ್ತ ಹೆಚ್ಚಾಗಿದ್ದು, ಅವು ಲಾಭದಾಯಕ ಯೋಜನೆಗಳಾದರೆ, ಬ್ಯಾಂಕುಗಳು ಸರ್ಕಾರ ನಿಗದಿಪಡಿಸಿದ 5 ಲಕ್ಷ ರೂ. ಮಿತಿಗಿಂತ ಹೆಚ್ಚಿನ ಮೊತ್ತದ ಸಾಲ ಮಂಜೂರು ಮಾಡಿ, ಯುವಕರನ್ನು ಬೆಂಬಲಿಸಬೇಕೆಂದು ಮುಖ್ಯಮಂತ್ರಿಗಳು ಬ್ಯಾಂಕರುಗಳಿಗೆ ಸಲಹೆ ನೀಡಿದರು.

ಯುವ ಸಬಲೀಕರಣ, ಕ್ರೀಡೆ ಮತ್ತು ರೇಷ್ಮೆ ಸಚಿವ ನಾರಾಯಣ ಗೌಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಮತ್ತಿತರ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡರು.

ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆಯ ಬ್ಯಾಂಕ್ ಲಿಂಕೇಜ್, ಖಾತೆ ತೆರೆಯುವಿಕೆ ಮತ್ತು ಬ್ಯಾಂಕ್ ಸಾಲಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳಲು ಸಾಮಾನ್ಯ ಸರ್ವಿಸ್ ಸೆಂಟರ್, ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಎನ್.ಎಲ್.ಎಂ. ನಿಂದ ಹಾಗೂ ಬ್ಯಾಂಕರ್ಸ್‌ಗಳಿಂದ ಒಟ್ಟು 7, 300 ಬಿ.ಸಿ. ಸಖಿಗಳ ಸೇವೆಯನ್ನು ಪಡೆಯಲಾಗುತ್ತಿದ್ದು, ಸದರಿಯವರಿಗೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ರೂ.2000/– ಹಾಗೂ ಸಹಕಾರಿ ಬ್ಯಾಂಕ್‌ಗಳಿಂದ ರೂ.4000/– ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಅಕ್ರಮ ಶಸ್ತ್ರಾಸ್ತ್ರ: ಅಮೃತ್ ಪಾಲ್ ವಿರುದ್ಧ ಮತ್ತೊಂದು ಎಫ್‌ಐಆರ್

ಚಂಡೀಗಢ: ತೀವ್ರಗಾಮಿ ಧಾರ್ಮಿಕ ಮುಖಂಡ ಅಮೃತ್‌ಸಿಂಗ್ ಪಾಲ್ ವಿರುದ್ಧ ಅಕ್ರಮ ಶಸ್ತ್ರಾಸ್ತ್ರ ಹೊಂದಿದ್ದಕ್ಕೆ ಮತ್ತೊಂದು ಎಫ್‌ಐಆರ್ ಭಾನುವಾರದಂದು ದಾಖಲಾಗಿದೆ. ಅಮೃತ್‌ಸರ ಗ್ರಾಮೀಣ ವಿಭಾಗದ ಹಿರಿಯ ಎಸ್‌ಪಿ ಸತೀಂದ್ರ ಸಿಂಗ್ ಈ ಬಗ್ಗೆ ಮಾತನಾಡಿದ್ದು ಅಮೃತ್ ಪಾಲ್ ಅವರ ಸಹಚಾರಿಗಳನ್ನು ಶಸ್ತ್ರಾಸ್ತ್ರ ಕಾಯ್ದೆಯಡಿ ಬಂಧಿಸಲಾಗಿದೆ. ಅಮೃತ್‌ಪಾಲ್ ವಿರುದ್ಧ ಪಂಜಾಬ್ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದು, ಆತನ 78 ಸಹಚರರು ಅಥವಾ ಆತನ ಸಂಘಟನೆ ಸದಸ್ಯರನ್ನು ಬಂಧಿಸಿದ್ದಾರೆ. ಅಮೃತ್‌ಪಾಲ್‌ಗೆ ಸಂಬಂಧಿಸಿದ 12 ಬೋರ್ ಗನ್ ಹಾಗೂ ಕೆಲವು ಕಾರ್ಟ್ರಿಜ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಒಂದನೇ ಪುಟದಿಂದ

ಪಂಚರತ್ನ ಯೋಜನೆ ಜಾರಿ

ಹಿಂದುಳಿದ, ಇತರೆ ವರ್ಗದ ಮಕ್ಕಳು ಸಹ ನಗರ ಪ್ರದೇಶದ ಮಕ್ಕಳಂತೆಯೇ ಶಿಕ್ಷಣ ಪಡೆಯಬೇಕು ಎಂಬ ಬಹು ಮುಖ್ಯವಾದ ಉದ್ದೇಶ ಯೋಜನೆಯದ್ದಾಗಿದೆ. ಹಾಗಾಗಿ ಪಂಚರತ್ನ ಯೋಜನೆ ಜಾರಿಗೆ ತರವುದಷ್ಟೇ ನಮ್ಮ ಮುಂದಿರುವ ಅಜೆಂಡ ಎಂದರು.

ರಾಜ್ಯದ 6 ಸಾವಿರ ಗ್ರಾಪಂಗಳಲ್ಲೂ ಅತ್ಯಂತ ಅತ್ಯಾಧುನಿಕ ಶಾಲೆಗಳನ್ನು ನಿರ್ಮಿಸಿ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿ ಶ್ರೀಮಂತ ಮಕ್ಕಳಿಗೆ ಸರಿಸಮಾನವಾಗಿ ಉಚಿತವಾಗಿ ಶಿಕ್ಷಣ ಕೊಡಿಸುವುದು, ಗ್ರಾಪಂ ವ್ಯಾಪ್ತಿಯಲ್ಲಿ 30 ಹಾಸಿಗೆಗಳುಳ್ಳ ಆಸ್ಪತ್ರೆ ನಿರ್ಮಿಸಿ ಸರ್ಕಾರದಿಂದಲೇ ಉಚಿತ ಆರೋಗ್ಯ ಸೇವೆ ಕಲ್ಪಿಸುವ ಯೋಜನೆ ಆರಂಭಿಸಲಾಗುತ್ತದೆ. ಬಡ ಜನರು ಆಸ್ಪತ್ರೆಯಲ್ಲಿ ಗಂಭೀರ ಕಾಯಿಲೆಗಳಿಗೆ ಒಳಗಾಗಿ ಲಕ್ಷಾಂತರ ರೂ. ಕಟ್ಟಲು ಅಶಕ್ತರಾಗಿರುತ್ತಾರೆ. ಅಂತ ಬಡ ಕುಟುಂಬದವರಿಗೆ ಸರ್ಕಾರದ ವತಿಯಿಂದ 30 ಲಕ್ಷ ರೂ.ವರೆಗೂ ಹಣ ಪಾವತಿಸುವಂತಹ ಕಾರ್ಯಕ್ರಮ ಯೋಜನೆಯಲ್ಲಿ ಅಳವಡಿಸಲಾಗಿದೆ. ರೈತ ಬಂಧುಗಳು ವ್ಯವಸಾಯಕ್ಕಾಗಿ ಸಾಲಗಾರರಾಗುವುದನ್ನು ತಪ್ಪಿಸಲು ರೈತ ಬಂಧು ಹೆಸರಿನಲ್ಲಿ ಒಂದು ಎಕರೆಯಿಂದ 10 ಎಕರೆ ವರೆಗೆ ಎಕರೆಯೊಂದಕ್ಕೆ 10 ಸಾವಿರ ರೂ.ಗಳಂತೆ 1 ಲಕ್ಷ ರೂ. ಬಿತ್ತನೆ ಬೀಜ, ರಸಗೊಬ್ಬರ ಮತ್ತಿತರೆ ಪರಿಕರಗಳನ್ನು ಖರೀದಿಸಲು ನೀಡುವ ಉದ್ದೇಶ ನಮ್ಮದಾಗಿದೆ ಎಂದರು.

ಯವಕರು ಉದ್ಯೋಗವಿಲ್ಲದೇ ಪರಿತಪಿಸುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಉದ್ಯೋಗ ಸೃಷ್ಟಿ ಮಾಡುವುದು, ಬಡ ಮತ್ತು ಮಧ್ಯಮ ಕುಟುಂಬಗಳು ನೆಮ್ಮದಿ ಜೀವನ ನಡೆಯಲು ಸೂರು ಕಲ್ಪಿಸಿಕೊಡುವ ಉದ್ದೇಶದಿಂದ 5 ಲಕ್ಷ ರೂ. ವೆಚ್ಚದಲ್ಲಿ(ಒಂದು ಮನೆಗೆ) ಮನೆಗಳನ್ನು ನಿರ್ಮಿಸಿ ಬಡಾವಣೆ ಮಾಡುವ ಯೋಜನೆ ಜಾರಿಗೆ ತರುತ್ತೇವೆ. 65 ವರ್ಷ ತುಂಬಿದ ತಂದೆ–ತಾಯಂದಿರು ಕೊನೆಗಾಲದಲ್ಲಿ ನೆಮ್ಮದಿಯಿಂದ ಬದುಕಲು ಪ್ರತಿ ತಿಂಗಳು 5 ಸಾವಿರ ರೂ.ಗಳನ್ನು ಅವರ ಜೀವಿತಾವಧಿವರೆಗೂ ಕೊಡುವ ಯೋಜನೆ, ವಿಕಲ ಚೇತನರು, ವಿಧವೆಯರು ಹಾಗೂ ಮದುವೆಯಾಗದಿರುವ ಹೆಣ್ಣು ಮಕ್ಕಳಿಗೆ ಈಗಿರುವ 800 ರೂ.ಗಳನ್ನು 2,500 ರೂ.ಗಳಿಗೆ ಹೆಚ್ಚಿಸುವ ಯೋಜನೆ ರೂಪಿಸಲಾಗುತ್ತದೆ. ಅಲ್ಲದೇ ಕಟ್ಟಡ ಕೆಲಸಗಾರರು, ನೇಕಾರರು, ಟೈಲರ್‌ಗಳು, ಸವಿತಾ ಸಮಾಜದವರಿಗೆ ಸರ್ಕಾರದಿಂದ ಎಲ್ಲ ರೀತಿಯ ಹಣಕಾಸಿನ ನೆರವು ನೀಡಿ ಮನೆಗಳನ್ನು ನಿರ್ಮಿಸಿಕೊಡುವುದಲ್ಲದೇ ಅವರ ಮಕ್ಕಳ ಸಂಪೂರ್ಣ ಜವಾಬ್ದಾರಿ ಹೊರುವ ಕಾರ್ಯಕ್ರಮ ನಮ್ಮದಾಗಿದೆ ಎಂದರು.

ಪ್ರತಿ ತಿಂಗಳು 20 ಸಾವಿರ: ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು 20 ಸಾವಿರ ರೂ. ಆದಾಯ ಬರುವಂತೆ ಮಾಡುವುದು ಪಂಚರತ್ನ ಯಾತ್ರೆ ಮುಖ್ಯ ಉದ್ದೇಶ.ಆ ರೀತಿಯ ಕಾರ್ಯಕ್ರಮಗಳನ್ನು ನಾವು ರೂಪಿಸುತ್ತೇವೆ. ಆದರೆ ನೀವು ನಮಗೆ 5 ವರ್ಷಗಳ ಸ್ವತಂತ್ರ ಅಧಿಕಾರ ನೀಡಬೇಕಷ್ಟೇ ಎಂದರು. ಮುಖಂಡರಾದ ನಿಶಾಂತ್, ಕೆಂಪಯ್ಯನ ಹುಂಡಿ ಅಂದಾನಿ ಗೌಡ, ಕುಪ್ಪೇಗಾಲ ಬಾಬು, ಉಕ್ಕಲಗೆರೆ ಅಡುಗೆ ಕುಮಾರ್, ತಲಕಾಡು ಸತೀಶ್ ನಾಯಕ, ಹಸ್ತಿಕೇರಿ ನಾಗರಾಜು, ರಘು, ಮಹಿಳಾ ಘಟಕದ ಅಧ್ಯಕ್ಷ ಯಶೋಧಮ್ಮ ಸೇರಿದಂತೆ ಮತ್ತಿತರ ಮುಖಂಡರಿದ್ದರು.

ವರಿಷ್ಠರ ಭೇಟಿಗೆ ನಿರ್ಧಾರ

ಯುವ ಸಮಾವೇಶದಲ್ಲಿ ಭಾಗಿಯಾಗುವರು. ಈ ಸಮಾವೇಶದಲ್ಲಿ ಸಿದ್ದರಾಮಯ್ಯ ರವರು ಪಾಲ್ಗೊಳ್ಳಲಿದ್ದು, ಈ ಸಮಾವೇಶ ಮುಗಿಸಿಕೊಂಡು ಸಿದ್ದರಾಮಯ್ಯ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ. ದೆಹಲಿಯಲ್ಲಿ ವರಿಷ್ಠರನ್ನು ಭೇಟಿ ಮಾಡಿ ಎಲ್ಲವನ್ನೂ ಚರ್ಚಿಸಿದ ನಂತರ ಸಿದ್ದ ರಾಮಯ್ಯ ಯಾವ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ ಎಂಬುದು ಅಂತಿಮಗೊಳ್ಳಲಿದೆ. ಈ ಮೊದಲು ಸಿದ್ದರಾಮಯ್ಯ ರವರು ಕೋಲಾರದಿಂದ ಕಣಕ್ಕಿಳಿಯಲು ನಿರ್ಧರಿಸಿದ್ದರು. ಆದರೆ, ರಾಹುಲ್‌ಗಾಂಧಿ ಅವರು ಕೋಲಾರ ಅಷ್ಟು ಸುರಕ್ಷಿತವಲ್ಲ. ಕೋಲಾರದ ಬದಲು ವರುಣಾದಿಂದ ಸ್ಪರ್ಧಿಸಿ ಎಂದು ಸಲಹೆ ಮಾಡಿದರು. ಇದರಿಂದ ಸಿದ್ದರಾಮಯ್ಯ ಅವರು ಕ್ಷೇತ್ರ ಆಯ್ಕೆ ಬಗ್ಗೆ ಗೊಂದಲಕ್ಕೆ ಒಳಗಾಗಿದ್ದರು. ಈ ಎಲ್ಲ ಗೊಂದಲಗಳನ್ನು ಬಗೆಹರಿಸಿಕೊಳ್ಳಲು ಗೊಂದಲಗಳಿಗೆ ತೆರೆ ಎಳೆದು ಅಂತಿಮ ತೀರ್ಮಾನ ಕೈಗೊಳ್ಳಲು ವರಿಷ್ಠರನ್ನು ಸಿದ್ದರಾಮಯ್ಯ ಮತ್ತೆ ಭೇಟಿ ಮಾಡಲಿದ್ದಾರೆ. ಅವರ ಮುಂದಿನ ದೆಹಲಿ ಭೇಟಿಯಲ್ಲಿ ಕ್ಷೇತ್ರ ಗೊಂದಲ ಇತ್ಯರ್ಥವಾಗಲಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

5.21 ಕೋಟಿ ಆಸ್ತಿ ಜಪ್ತಿ

ಅಡಿಯಲ್ಲಿ ತನಿಖೆಯ ಸಮಯದಲ್ಲಿ, ಕಬ್ಬಿಣದ ಅದಿರನ್ನು ಕಾನೂನುಬಾಹಿರವಾಗಿ ಗಣಿಗಾರಿಕೆ, ಸಾಗಣೆ ಮತ್ತು ಮಾನ್ಯ ಪರವಾನಗಿಗಳಿಲ್ಲದೆ ವ್ಯಾಪಾರ ಮಾಡಿರುವುದು ಗಮನಕ್ಕೆ ಬಂದಿದೆ. ಇದು ಬೊಕ್ಕಸಕ್ಕೆ ನಷ್ಟವನ್ನುಂಟುಮಾಡಿದೆ.


ಇಂತಹ ಅಕ್ರಮ ಕಬ್ಬಿಣದ ಅದಿರುಗಳ ಮೂಲವು ಬಿಪಿ ಆನಂದ್ ಕುಮಾರ್, ಪಾಂಡುರಂಗ ಸಿಂಗ್ ಮತ್ತು ಗೋಪಾಲ್ ಸಿಂಗ್ ಅವರನ್ನು ಪಾಲುದಾರರನ್ನಾಗಿ ಹೊಂದಿರುವ ಎಸ್‌ಬಿ ಮಿನರಲ್ಸ್ ಒಡೆತನದ ಎರಡು ಗಣಿಗಳಲ್ಲಿ, ಶಾಂತಲಕ್ಷ್ಮಿ ಮತ್ತು ಜೆ ಮಿಥಿಲೇಶ್ವರ್ ಒಡೆತನದ ಒಂದು ಗಣಿ ಹಾಗೂ ಭಾರತ್ ಮನ್ಸ್ ಒಡೆತನದಲ್ಲಿರುವ ಮಿನರಲ್ಸ್ ಬಿಎಂಎಂ ಇಸ್ಪಾಟ್ ಲಿಮಿಟೆಡ್ ಮತ್ತು ದಿನೇಶ್ ಕುಮಾರ್ ಸಿಂಘಿ ಅವರನ್ನು ಪಾಲುದಾರರಾಗಿ ಹೊಂದಿರುವ ಮತ್ತೊಂದು ಗಣಿಯಲ್ಲಿ ನಡೆದಿದೆ ಎಂಬ ಅಂಶವೂ ಗಮನಕ್ಕೆ ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿಂದೆ, ಕರ್ನಾಟಕ ರಾಜ್ಯದಲ್ಲಿನ ಗಣಿ ಗುತ್ತಿಗೆಗಳ ಸಮೀಕ್ಷೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನೇಮಿಸಿದ ಕೇಂದ್ರೀಯ ಸಬಲೀಕರಣ ಸಮಿತಿಯು ಈ ನಾಲ್ಕು ಗಣಿಗಳಿಗೆ ಸಂಬಂಧಿಸಿದಂತೆ ಭಾರೀ ಅಕ್ರಮಗಳನ್ನು ಕಂಡುಹಿಡಿದಿದೆ ಮತ್ತು ಅವುಗಳನ್ನು ಸಿ ಕೆಟಗರಿಯಲ್ಲಿ ಇರಿಸಿದೆ. ಅದರ ಶಿಫಾರಸಿನ ಆಧಾರದ ಮೇಲೆ, ಸುಪ್ರೀಂ ಕೋರ್ಟ್ ಅವರ ಪರವಾನಗಿಗಳನ್ನು ರದ್ದುಗೊಳಿಸಿತು. ಆರೋಪಿಗಳು ಸರ್ಕಾರದ ಬೊಕ್ಕಸಕ್ಕೆ ಅನುಚಿತವಾದ ನಷ್ಟ ಮತ್ತು ಕಾನೂನುಬಾಹಿರವಾದ ಲಾಭವನ್ನು ಹೊಂದಿದ್ದಾರೆ ಎಂದು ಪಿಎಂಎಲ್‌ಎ ಅಡಿಯಲ್ಲಿ ತನಿಖೆಯಿಂದ ದೃಢಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರ ಕೃತಿಗಳ ಬಿಡುಗಡೆ

ಸಾಹಿತಿಗಳು ಸರ್ವರ ಹಿತ ಬಯಸುವ ಸಾಹಿತ್ಯ ರಚಿಸಬೇಕು

ಚಲನಚಿತ್ರ ನಿರ್ದೇಶಕ ನಾಗಾಭರಣ ಅಭಿಮತ



ಹಿರಿಯ ಪತ್ರಕರ್ತ, ಲೇಖಕ ಅಂಶಿ ಪ್ರಸನ್ನಕುಮಾರ್ ಅವರ 'ಸಾಹಿತ್ಯ ಸಂಪದ' ಹಾಗೂ 'ಸಾಹಿತ್ಯ ಸಂಗಮ' ಕೃತಿಗಳನ್ನು ಚಲನಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ ಭಾನುವಾರ ಲೋಕಾರ್ಪಣೆಗೊಳಿಸಿದರು. ಹಿರಿಯ ಸಾಹಿತಿ ಸಿಪಿಕೆ, ಅಂಕಣಕಾರ ಗುಬ್ಬಿಗೂಡು ರಮೇಶ್ ಮತ್ತಿತರರಿದ್ದರು.

ಮೈಸೂರು, ಮಾ.19(ಎಂಕೆ)– ಕೊಂಡಿಗಳನ್ನು ಒಂದಕ್ಕೊಂದು ಸೇರಿಸುವವರಿಗಿಂತ ಇರುವ ಕೊಂಡಿಗಳನ್ನು ಮುರಿಯುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಸಾಮರಸ್ಯವೆಂಬ ಕೊಂಡಿಯನ್ನು ಬೇರ್ಪಡಿಸುತ್ತಿರುವ ಸಂದರ್ಭದಲ್ಲಿ ಸರ್ವರ ಹಿತವನ್ನು ಬಯಸುವ ಸಾಹಿತ್ಯವನ್ನು ಸಾಹಿತಿಗಳು ರಚಿಸಬೇಕಾಗಿದೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ ಅಭಿವ್ಯಕ್ತಪಡಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ವಿಸ್ಮಯ ಬುಕ್ ಹೌಸ್, ಸಾಹಿತ್ಯ ಲೋಕ ವತಿಯಿಂದ ಆಯೋಜಿಸಿದ್ದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ, ಲೇಖಕ ಅಂಶಿ ಪ್ರಸನ್ನಕುಮಾರ್ ಅವರ 'ಸಾಹಿತ್ಯ ಸಂಪದ' ಹಾಗೂ 'ಸಾಹಿತ್ಯ ಸಂಗಮ' ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಅದನ್ನು ಆ ಕಡೆಯವರು ಬರೆದದ್ದು, ಇದನ್ನು ಈ ಕಡೆಯವರು ಬರೆದದ್ದು ಎನ್ನುವ ಮೂಲಕ ಸಾಮರಸ್ಯವೆಂಬ ಕೊಂಡಿಯನ್ನು ಬೇರ್ಪಡಿಸಲಾಗುತ್ತಿದೆ. ಆದ್ದರಿಂದ ಸರ್ವರ ಹಿತವನ್ನು ಬಯಸುವ ಸಾಹಿತ್ಯವನ್ನು ಸಾಹಿತಿಗಳು ರಚಿಸಬೇಕಾಗಿದೆ. ಮುಖ್ಯವಾಗಿ ಸಿದ್ಧಾಂತಗಳೊಂದಿಗೆ ಮಾಡಿಕೊಂಡಿರುವ ಸಮೀಕರಣವನ್ನು ಗಾಳಿಗೆ ತೂರಿ ಮಧ್ಯಮ ಮಾರ್ಗದಲ್ಲಿ ಸಾಗಬೇಕಿದೆ. ಈ ನಿಟ್ಟಿನಲ್ಲಿ ಅಂಶಿ ಪ್ರಸನ್ನ ಕುಮಾರ್ ತಮ್ಮ 'ಸಾಹಿತ್ಯ ಸಂಪದ' ಕೃತಿಯ ಮೂಲಕ ಸಾಂಸ್ಕೃತಿಕ ಕೊಂಡಿಗಳು ಬೆಸೆಯುವಂತಹ ಕಾರ್ಯ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಇವತ್ತಿನ ದಿನಗಳಲ್ಲಿ ಓದುವವರು, ಬರೆಯುವವರ ಸಂಖ್ಯೆ ಕಡಿಮೆಯಾಗುತ್ತಿದ್ದು, ನೋಡುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅದರಲ್ಲೂ ಫೇಸ್‌ಬುಕ್, ಟ್ವಿಟರ್ ನೋಡುವವರ ಸಂಖ್ಯೆ ಜಾಸ್ತಿಯಿದೆ. ನಮ್ಮಲ್ಲಿ ಲೈಕ್‌ಗಳನ್ನು ಹಾಗೂ ಕಾರ್ಯಕ್ರಮದಲ್ಲಿ ನೇರವಾಗಿ ಭಾಗವಹಿಸುವುದು ಬೇರೆ ಬೇರೆ. ಲೈಕ್ ಕೊಟ್ಟ ಕ್ಷಣಕ್ಕೆ ಅದು ಅಲ್ಲಿಗೆ ಮುಕ್ತಾಯವಾದಂತೆ ಎಂದು ಹಲವರು ಭಾವಿಸಿದ್ದಾರೆ. ಹಾಗೆಯೇ ಸಾಕಷ್ಟು ಜನರು ಬರೆಯುವುದನ್ನು ನಿಲ್ಲಿಸಿದ್ದು, ಮೊಬೈಲ್, ಕಂಪ್ಯೂಟರ್‌ಗಳಲ್ಲಿ ಟೈಪ್ ಮಾಡುವುದರಲ್ಲಿ ಮುಂದಿದ್ದಾರೆ. ವ್ಯಕ್ತಿಯ ವ್ಯಕ್ತಿತ್ವವನ್ನು ತಿಳಿಸುವಂತಹ ದುಂಡಾದ ಅಕ್ಷರಗಳೇ ಇಲ್ಲದಂತಾಗಿವೆ ಎಂದರು.

ಕೃತಕ ವಸ್ತುಗಳ ಪಾಲನೆ: ಇವತ್ತಿನ ನಮ್ಮ ಬುದ್ಧಿವಂತಿಕೆ ಕೃತಕವಾಗಿದ್ದು, ನಮ್ಮ ಅವಲಂಬನೆಯೂ ಆ ಕೃತಕದ ಮೇಲೆಯೇ ಇದೆ. ಅದು ಏನನ್ನು ಹೇಳುತ್ತದೋ ಅದನ್ನು ಬಳಸುವಷ್ಟರ ಮಟ್ಟಿಗೆ ನಾವು ಕೃತಕ ಬುದ್ಧಿಮತೆಗೆ ಅವಲಂಬನೆಯಾಗಿದ್ದೇವೆ. ಈ ಅವಲಂಬನಾ ನಡೆಯಿಂದ ಹೊರ ಬರಬೇಕಾದರೆ ಪುಸ್ತಕಗಳನ್ನು ಓದಬೇಕು ಮತ್ತು ಬರೆಯಬೇಕು. ಜೊತೆಗೆ ಆಗಾಗ ಡಿಜಿಟಲ್ ಉಪವಾಸ(ಮೊಬೈಲ್, ಲ್ಯಾಪ್‌ಟಾಪ್ ತ್ಯಜಿಸುವುದು) ಮಾಡಬೇಕು. ನಿರಂತರ ಪುಸ್ತಕ ಓದುವಿಕೆಯಿಂದ ನಮ್ಮ ಅರಿವಿನ ವಿಸ್ತಾರವೂ ಹೆಚ್ಚಾಗುತ್ತದೆ ಎಂದು ತಿಳಿಸಿದರು.

ಕನ್ನಡಿಗರದ್ದು ವಿಶ್ವಮಾನ ತತ್ವ: ಹಿರಿಯ ಸಾಹಿತಿ ಸಿಪಿಕೆಯವರಿಗೆ ಪಂಪ ಪ್ರಶಸ್ತಿ ಲಭಿಸಿದೆ ಎಂದರೆ ಅದು ಸಾಮಾನ್ಯವಲ್ಲ. 8ನೇ ಶತಮಾನದಿಂದ 21ನೇ ಶತಮಾನದವರೆಗೂ ಆದಿಕವಿ ಪಂಪ ತಿಳಿಸಿದ ವಿಶ್ವಮಾನ್ಯ ತತ್ವವನ್ನು ಕನ್ನಡಿಗರು ರೂಢಿಸಿಕೊಂಡು ಬಂದಿದ್ದಾರೆ. ಪಂಪರ 'ಮಾನವ ಕುಲಂ ತಾನೊಂದೆ ವಲಂ', ಕುವೆಂಪು ಅವರ 'ಮನುಜ ಮತ ವಿಶ್ವಮತ' ಎಂಬ ಮಾತಿನಂತೆ ನಡೆದುಕೊಂಡು ಬಂದಿದ್ದಾರೆ. ಹೊರಗಡೆ ಒಬ್ಬರೊಬ್ಬರನ್ನು ಕಡೆಗಣಿಸುವಂತೆ ಕಂಡರೂ ಅಂತರಂಗದಲ್ಲಿ ನಾವೆಲ್ಲರೂ ಒಂದೇ ಎಂಬ ಭಾವನೆ ಸುಪ್ತವಾಗಿದೆ ಎಂದು ಹೇಳಿದರು.

'ಸಾಹಿತ್ಯ ಸಂಪದ' ಹಾಗೂ 'ಸಾಹಿತ್ಯ ಸಂಗಮ' ಕೃತಿಗಳ ಕುರಿತು ಅಂಕಣಕಾರ ಡಾ.ಗುಬ್ಬಿಗೂಡು ರಮೇಶ್ ಮಾತನಾಡಿ, ಅಂಶಿ ಪ್ರಸನ್ನಕುಮಾರ್ ಅವರ ಕೃತಿಗಳು ಎಲ್ಲರಿಗೂ ಅರ್ಥವಾಗುವಂತಹ ಅಭಿವ್ಯಕ್ತಿ ಸ್ವಾತಂತ್ರ್ಯ ಇರುವ ಮೈಸೂರು ಭಾಗದ ಆಧುನಿಕ ಸಾಹಿತ್ಯದ ಚರಿತ್ರೆಯಾಗಿವೆ ಎಂದು ಬಣ್ಣಿಸಿದರು. ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿಸ್ಮಯ ಬುಕ್‌ಹೌಸ್‌ನ ಪ್ರಕಾಶ್ ಚಿಕ್ಕಪಾಳ್ಯ, ಸಾಹಿತ್ಯ ಲೋಕದ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಖಜಾಂಚಿ ಚಂದ್ರಶೇಖರ್ ಮತ್ತಿತರರಿದ್ದರು.

ಪ್ರಾಣಿ ಪಕ್ಷಿಗಳ ದಾಹ ತಣಿಸಲು ನೀರಿನ ವ್ಯವಸ್ಥೆ ಕಲ್ಪಿಸಿ

ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಮನವಿ




ಮೈಸೂರು,ಮಾ.19(ಎಂಟಿವೈ)– ಬಿಸಿಲಿನ ಬೇಗೆಯಿಂದ ಪ್ರಾಣಿ–ಪಕ್ಷಿಗಳಿಗೆ ದಾಹ ತಣಿಸಲು ಎಲ್ಲಾ ನಾಗರಿಕರು ಮನೆ ಮುಂದೆ ಅಥವಾ ಮೇಲ್ಛಾವಣಿಯಲ್ಲಿ ಕುಡಿಯಲು ನೀರು ಇಡುವಂತೆ ಮೈಲ್ಯಾಕ್ ಅಧ್ಯಕ್ಷ ರಘು ಆರ್.ಕೌಟಿಲ್ಯ ಮನವಿ ಮಾಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಗುಬ್ಬಿ ದಿನದ ಅಂಗವಾಗಿ ಮರಗಳಿಗೆ ನೀರಿನ ಬಟ್ಟಲು ನೇತು ಹಾಕುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಗುಬ್ಬಚ್ಚಿ ಸೇರಿದಂತೆ ಸಣ್ಣಪುಟ್ಟ ಪಕ್ಷಿ–ಪ್ರಾಣಿಗಳ ಜೀವನ ದುಸ್ತರವಾಗಿ ಪರಿಣಮಿಸುತ್ತಿದೆ. ಅದರಲ್ಲೂ ಗುಬ್ಬಚ್ಚಿಗಳ ಸಂತತಿ ಅಳಿವಿನಂಚಿಗೆ ದೂಡಲ್ಪಟ್ಟಿದೆ. ಬೇಸಿಗೆ ಬೇಗೆ ಸೇರಿದಂತೆ ಹಲವು ಕಾರಣದಿಂದ ಪಕ್ಷಿ ಸಂಕುಲ ಕಂಗೆಟ್ಟಿದೆ. ಹೆಚ್ಚುತ್ತಿರುವ ವಾಹನ ಸಾಂದ್ರತೆಯಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇದರಿಂದಾಗಿ ಸಣ್ಣಪುಟ್ಟ ಪ್ರಾಣಿಪಕ್ಷಿಗಳ ಸಂಕುಲ ನಾಶವಾಗುತ್ತಿದೆ. ಪರಿಸರ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವೂ ಆಗಿದೆ. ಹವಾಮಾನ ಮಾನ ಬದಲಾವಣೆ ಮುನ್ಸೂಚನೆ ಕೊಡುವ ಪ್ರಾಣಿ–ಪಕ್ಷಿಗಳು ನಾಗರಿಕತೆಯೊಂದಿಗೆ ಉತ್ತಮ ಒಡನಾಟ ಹೊಂದಿವೆ. ಹಾಗಾಗಿ ಅವುಗಳ ರಕ್ಷಣೆಗೆ ಸಹಕಾರ ನೀಡುವ ಜವಾಬ್ದಾರಿ ಎಲ್ಲರದ್ದಾಗಿದೆ ಎಂದರು.

ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ರಾಮಾಯಣ ಕಾಲದಲ್ಲಿ ಪಕ್ಷಿಗಳು ಧರ್ಮ ಸಂಸ್ಥಾಪನೆಗೆ ಹೋರಾಟ ನಡೆಸಿರುವ ನಿದರ್ಶನಗಳಿವೆ. ಈ ಹಿಂದೆ ಅಂಚೆ ಚೀಟಿ ವ್ಯವಸ್ಥೆ ಜಾರಿಗೊಳ್ಳುವ ಮುನ್ನ ಪಾರಿವಾಳ ಸೇರಿದಂತೆ ಕೆಲ ಪಕ್ಷಿಗಳನ್ನೇ ಸಂದೇಶ ವಾಹಕಗಳಾಗಿ ಅವಲಂಬಿಸಲಾಗಿತ್ತು. ಇದರಿಂದ ಪಕ್ಷಿ ಸಂಕುಲ ಮಾನವರೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವುದನ್ನು ಕಾಣಬಹುದು. ಈ ನಿಟ್ಟಿನಲ್ಲಿ ಪ್ರಾಣಿ–ಪಕ್ಷಿಗಳ ಸಂಕುಲ ಸೇರಿದಂತೆ ಪರಿಸರ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಜೀವಧಾರ ರಕ್ತ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಎಸ್.ಎನ್. ರಾಜೇಶ್, ಅಪೂರ್ವ ಸುರೇಶ್, ಸುಚೇಂದ್ರ, ಚಕ್ರಪಾಣಿ, ಲಿಂಗರಾಜು, ಮಿರ್ಲೆ ಪಣೀಶ್, ರಾಕೇಶ್, ನಂದೀಶ್ ನಾಯಕ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಇಂದು ಪುರಭವನ ಆವರಣದಲ್ಲಿ ಪಾರಂಪರಿಕ ಶೈಲಿಯ ಶೌಚಾಲಯ ಉದ್ಘಾಟನೆ



ಮೈಸೂರು,ಮಾ.19(ಎಂಟಿವೈ)– ಮೈಸೂರಿನ ಪುರಭವನದ ಆವರಣದಲ್ಲಿ ಪಾರಂಪರಿಕ ಮತ್ತು ಆಧುನಿಕ ಶೈಲಿಯಲ್ಲಿ ನೂತನವಾಗಿ ನಿರ್ಮಿಸಿರುವ ಶೌಚಾಲಯದ ಉದ್ಘಾಟನಾ ಸಮಾರಂಭ ನಾಳೆ(ಮಾ.20) ಬೆಳಗ್ಗೆ 11ಕ್ಕೆ ನಡೆಯಲಿದೆ ಎಂದು ನಮ್ಮ ಮೈಸೂರು ಫೌಂಡೇಷನ್ ವ್ಯವಸ್ಥಾಪಕ ಟ್ರಸ್ಟಿ ಕೆ. ದಶರಥ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಪುರಭವನದ ಆವರಣದಲ್ಲಿ ನೂತನವಾಗಿ ಪಾರಂಪರಿಕ ಶೈಲಿಯಲ್ಲಿ ನಿರ್ಮಿಸಿರುವ ಶೌಚಾಲಯ ಕಾಮಗಾರಿ ಪೂರ್ಣಗೊಂಡಿದೆ. ಅರಮನೆ ಸೇರಿದಂತೆ ಮೈಸೂರಿಗೆ ಬರುವ ಪ್ರವಾಸಿಗರು ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ನೌಕರರೂ ಸೇರಿದಂತೆ ಸಾರ್ವಜನಿಕರಿಗೆ ಶೌಚಾಲಯದ ಕೊರತೆ ನೀಗಿಸಿದಂತಾಗಿದೆ. ನೂತನ ಶೌಚಾಲಯವನ್ನು ಮೇಯರ್ ಶಿವಕುಮಾರ್ ಉದ್ಘಾಟಿಸಲಿದ್ದಾರೆ. ಶಾಸಕ ಎಲ್. ನಾಗೇಂದ್ರ, ಸಂಸದ ಪ್ರತಾಪ್‌ಸಿಂಹ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಉಪ ಮೇಯರ್ ಡಾ.ಜಿ..ರೂಪಾ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ವಿರೋಧ ಪಕ್ಷದ ನಾಯಕ ಅಯೂಬ್‌ಖಾನ್, ಪಾಲಿಕೆ ಸದಸ್ಯ ಎಂ.ಡಿ.ನಾಗರಾಜು ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಪಾರಂಪರಿಕ ತಜ್ಞ ಡಾ.ಎನ್.ಎಸ್. ರಂಗರಾಜು, ಮಲ್ಲೇಶ್ ಇನ್ನಿತರರು ಇದ್ದರು.

ಸಿದ್ದರಾಮಯ್ಯ ಬಗ್ಗೆ ಸಚಿವ ಆರ್. ಅಶೋಕ್ ಹೇಳಿಕೆಗೆ ಕುರುಬರ ಸಂಘ ಖಂಡನೆ

ಮೈಸೂರು, ಮಾ.19– ಕೆಲ ಬಿಜೆಪಿ ನಾಯಕರು ಸಂವಿಧಾನ ಓದಿಕೊಂಡಿದ್ದಾರೋ ಇಲ್ಲವೋ ಗೊತ್ತಾಗುತ್ತಿಲ್ಲ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ. ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಕರ್ನಾಟಕದ 224 ಕ್ಷೇತ್ರಗಳೂ ಸೇಫ್ ಅಲ್ಲ. ಅವರು ಪಾಕಿಸ್ತಾನ, ಅಫ್ಘಾನಿಸ್ತಾನ ಅಥವಾ ಬಾಂಗ್ಲಾದೇಶದಲ್ಲಿ ಸ್ಪರ್ಧಿಸಿದರೆ ಒಳ್ಳೆಯದು ಎಂಬ ಸಚಿವ ಆರ್. ಅಶೋಕ್ ಅವರ ಹೇಳಿಕೆಗೆ ತೀವ್ರ ಖಂಡನೆ ವ್ಯಕ್ತಪಡಿಸಿದ್ದಾರೆ.



ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಯಾವುದೇ ಒಬ್ಬ ವ್ಯಕ್ತಿ ಯಾವ ಕ್ಷೇತ್ರದಲ್ಲಾದರೂ ನಿಲ್ಲಬಹುದು. ಅವರನ್ನು ಗೆಲ್ಲಿಸಬೇಕೋ ಬೇಡವೋ ಎಂಬುದನ್ನು ಜನ ತೀರ್ಮಾನಿಸುತ್ತಾರೆ. ಎಲ್ಲಿ ನಿಲ್ಲಬೇಕು ಎಂಬುದನ್ನು ಪಕ್ಷ ತೀರ್ಮಾನಿಸುತ್ತದೆ. ಆದರೆ ಸಚಿವ ಆರ್.ಅಶೋಕ್ ಅವರು ಪಾಕಿಸ್ತಾನ, ಅಫ್ಘಾನಿಸ್ತಾನದಲ್ಲಿ ಚುನಾವಣೆಗೆ ನಿಲ್ಲಿ ಎಂದಿದ್ದಾರೆ. ಅವರು ಜ್ಞಾನವಿದ್ದು ಮಾತನಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಬಗ್ಗೆ ಓದಿಕೊಂಡರೆ ಒಳ್ಳೆಯದು. ಬಿಜೆಪಿ ಸಚಿವರಿಗೇ ಪಾಕಿಸ್ತಾನದ ಮೇಲೆ ಪ್ರೀತಿ ಹೆಚ್ಚಾದಂತಿದೆ. ಒಬ್ಬರು ಸಚಿವರು ಬೀದಿಯಲ್ಲಿ ನಿಂತು ಪಾಕಿಸ್ತಾನಕ್ಕೆ ಹೋಗಿ ಅನ್ನುತ್ತಾರೆ, ಇನ್ನೊಬ್ಬರು ಅಲ್ಲೇ ಚುನಾವಣೆಗೆ ನಿಲ್ಲಿ ಅನ್ನುತ್ತಾರೆ. ಅಷ್ಟೊಂದು ಪ್ರೀತಿ ಇದ್ದರೇ ತಾವೇ ಹೋಗಬಹುದಲ್ಲ? ಸಿದ್ದರಾಮಯ್ಯ ಅವರು ತಮ್ಮ ಕೊಡುಗೆಗಳಿಂದ ಇಂದಿಗೂ ಜನಾನುರಾಗಿಯಾಗಿದ್ದಾರೆ. ಅವರು ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಶೂ ಭಾಗ್ಯಗಳಂತಹ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು, ಅವು ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಎಲ್ಲ ವರ್ಗದ ಜನರ ಅಭಿವೃದ್ಧಿಗಾಗಿ ನೀಡಿದ ಕೊಡುಗೆಗಳಾಗಿವೆ. ನಿಮಗೆ ಸಾಮರ್ಥ್ಯವಿದ್ದರೆ ರಾಜಕೀಯವಾಗಿ ಅವರನ್ನು ಎದುರಿಸಿ. ಮೈಸೂರು ಬೆಂಗಳೂರು ಷಟ್ಪಥ ರಸ್ತೆ ಒಂದೇ ಮಳೆಗೆ ಏನಾಗಿದೆ ಅನ್ನೋದು ಗೊತ್ತಾಗುತ್ತಿದೆ ಎಂದರು.

ಭಾರತೀಯ ಕಲೆಗಳಿಗೆ ವಿಶ್ವದಲ್ಲಿ ಮಹತ್ವದ ಸ್ಥಾನ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ಮೈಸೂರು, ಮಾ.19(ಎಸ್‌ಪಿಎನ್)– ಭಾರತೀಯ ಕಲೆಗಳು ವಿಶ್ವದಲ್ಲೇ ಮಹತ್ವದ ಸ್ಥಾನಮಾನ ಪಡೆದಿವೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ಮೈಸೂರು ನೃತ್ಯವಿದ್ಯಾಪೀಠದ ವತಿಯಿಂದ ಆಯೋಜಿಸಿದ್ದ ಉದ್ಯಮಿ ಆರ್.ಶ್ಯಾಮ್‌ಸುಂದರ್ ಹಾಗೂ ಹೆಚ್.ಸಿ.ಕವಿತಾ ದಂಪತಿಗಳ ಪುತ್ರಿ ಹಾಗೂ ವಿದುಷಿ ಸಿ.ಎನ್.ಅನಿತವರ ಶಿಷ್ಯೆ ಎಸ್.ರಕ್ಷಿತ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಗಳು ಮಾತನಾಡಿದರು.

ವಿದುಷಿ ಸಿ.ಎನ್.ಅನಿತ ಅವರು ಮಡಿಕೇರಿಯ ಗುರು ಅಂಬಳೆ ರಾಜೇಶ್ವರಿ ಅವರಿಂದ ಭರತನಾಟ್ಯ ತರಬೇತಿ ಪ್ರಾರಂಭಿಸಿ, 1994ರಿಂದ ಮೈಸೂರಿನ ನೃತ್ಯಗಿರಿ ಸಂಸ್ಥೆಯ ಡಾ.ಕೃಪಾ ಫಡ್ಕೆ ಅವರಿಂದ ನೃತ್ಯದ ಸೂಕ್ಷ್ಮತೆಗಳು ಮತ್ತು ತಾಂತ್ರಿಕತೆಗಳನ್ನು ಕಲಿತಿರುವುದು ವಿಶೇಷ ಎಂದರು.

ನೃತ್ಯದಲ್ಲಿ ಒಳಹುಗಳನ್ನು ರಸ–ಭಾವಾಭಿನಯದಲ್ಲಿ ವಿಶೇಷ ತರಬೇತಿಯನ್ನು ಪಂದನಲ್ಲೂರು ಬಾನಿಯ ಹಿರಿಯ ಗುರುಗಳಾದ ಕೆ.ಮುರಳೀಧರ ರಾವ್ ಅವರಿಂದ ಕಲಿತಿದ್ದಾರೆ. ನಂತರ ಹಲವು ವರ್ಷಗಳಿಂದ ನೃತ್ಯ ತರಬೇತಿಯನ್ನು ಕಲಿತು, ಇತರೆ ಯುವಕ–ಯುವತಿಯರಿಗೂ ಭರತನಾಟ್ಯ ಕಲಿಸಿರುವುದು ವಿಶೇಷ ಎಂದರು.

ಶಿವಮೊಗ್ಗದ ಸಿಗಂದೂರು ಶ್ರೀಕ್ಷೇತ್ರ ಚೌಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಎಸ್.ಸಿ.ಶೇಷಗಿರಿ ಭಟ್ ಮಾತನಾಡಿ, ಹೆಚ್.ಸಿ.ಕವಿತ ಮತ್ತು ಆರ್.ಶ್ಯಾಮಸುಂದರ್ ದಂಪತಿಗಳು ಹಲವು ವರ್ಷಗಳಿಂದ ಸಿಗಂದೂರು ಶ್ರೀಕ್ಷೇತ್ರದ ಭಕ್ತರಾಗಿದ್ದಾರೆ. ಇಂದು ಭರತನಾಟ್ಯ ರಂಗಪ್ರವೇಶ ಮಾಡಿರುವ ಎಸ್.ರಕ್ಷಿತ ಅವರು, ಚಿಕ್ಕ ಮಗುವಿನಿಂದಲೂ ಸಿಗಂದೂರು ಶ್ರೀ ಕ್ಷೇತ್ರಕ್ಕೆ ಬಂದು ದೇವಿ ಕೃಪೆಗೆ ಪಾತ್ರರಾಗಿದ್ದಾರೆ ಎಂದು ತಿಳಿಸಿದರು.

ಈ ವೇದಿಕೆಯಲ್ಲಿ ವಿದುಷಿ ಎಂ.ಎಲ್. ಭಾರತಿ(ಸಂಗೀತ), ವಿದುಷಿ ಸಿ.ಎನ್.ಅನಿತ (ನೃತ್ಯ) ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಜೆಎಸ್‌ಎಸ್‌ಎಸ್‌ಐಟಿಡಬ್ಲ್ಯೂ ಆಡಳಿತಾಧಿಕಾರಿ ಅನುಪಮ ಬಿ.ಪಂಡಿತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ನಿರ್ದೇಶಕ ಪ್ರೊ.ಕೆ.ರಾಮಮೂರ್ತಿರಾವ್, ಇತರರಿದ್ದರು. ನೃತ್ಯ ಸಂಯೋಜನೆ ಮತ್ತು ನಟುವಾಂಗ ವಿದುಷಿ ಸಿ.ಎನ್.ಅನಿತ, ಮೈಸೂರಿನ ವಿದ್ವಾನ್ ರಾಕೇಶ್ ಸುಧೀರ್, ಧಾರವಾಡದ ವಿದ್ವಾನ್ ಪಂಚಮ್ ಉಪಾಧ್ಯಾಯ, ಬೆಂಗಳೂರು ವಿದ್ವಾನ್ ರಾಕೇಶ್ ದತ್, ಮೈಸೂರಿನ ವಿದ್ವಾನ್ ವಿನಯ್ ರಂಗಧೋಳ್ ಸಾಥ್ ನೀಡಿದರು.

ಅದ್ದೂರಿ ಮದುವೆಗಳಿಗೆ ಕಡಿವಾಣ ಅತ್ಯಗತ್ಯ

ಶ್ರೀ ರೇಣುಕಾನಂದ ಸ್ವಾಮೀಜಿ ಅಭಿಮತ



ಮೈಸೂರು,ಮಾ.19(ಎಂಟಿವೈ)– ಪೋಷಕರನ್ನು ಸಾಲದ ಸಂಕೋಲೆಗೆ ಸಿಲುಕಿಸುವ ಅದ್ದೂರಿ ಮದುವೆಗಳಿಗೆ ಕಡಿವಾಣ ಹಾಕುವ ಅಗತ್ಯವಿದೆ ಎಂದು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಶ್ರೀ ನಾರಾಯಣಗುರು ಮಹಾ ಸಂಸ್ಥಾನ ಮಠದ ಶ್ರೀ ರೇಣುಕಾನಂದ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ದಿ.ಡಾ.ಪುನೀತ್‌ರಾಜ್ ಕುಮಾರ್ ಜನ್ಮದಿನದ ಅಂಗವಾಗಿ ಡಾ.ಪುನೀತ್ ರಾಜ್‌ಕುಮಾರ್ ಸಮಾಜ ಸೇವಾ ಸಮಿತಿಯ ವತಿಯಿಂದ ಭಾನುವಾರ ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಅದ್ದೂರಿ ಮದುವೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ದುಂದುವೆಚ್ಚ ಅದ್ದೂರಿ ಮದುವೆಗಳು ಹಲವು ಸಮಸ್ಯೆಗಳಿಗೂ ಕಾರಣವಾಗುತ್ತಿವೆ. ಪ್ರತಿಷ್ಠೆಗೆ ಒಳಗಾಗಿ ಹೆಣ್ಣಿನ ಮನೆಯವರು ಸಾಲ ಮಾಡಿ ವಿವಾಹ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಜೀವನವಿಡೀ ದುಡಿದ ಹಣವನ್ನು ಒಂದು ದಿನದಲ್ಲಿ ಖರ್ಚು ಮಾಡಿ, ಮುಂದಿನ ಉಳಿದ ದಿನಗಳನ್ನು ಸಾಲ ತೀರಿಸಲು ಹೆಣಗಾಡುತ್ತಿರುವ ಅನೇಕ ಪೋಷಕರನ್ನು ಕಾಣುವಂತಾಗಿದೆ ಎಂದು ವಿಷಾದಿಸಿದರು.

ಪ್ರತಿಯೊಬ್ಬರು ಸಾಮೂಹಿಕ ವಿವಾಹಕ್ಕೆ ಆದ್ಯತೆ ನೀಡಬೇಕು. ಬಡವರು, ಮಧ್ಯಮ ವರ್ಗದವರು ಸಾಲದಿಂದ ಮುಕ್ತಿ ಪಡೆಯಲು ಸಾಮೂಹಿಕ ವಿವಾಹ ಉತ್ತಮ ಮಾರ್ಗವಾಗಿದೆ. ಅಪ್ಪು ಸಮಾಜ ಒಪ್ಪುವ ಕೆಲಸ ಮಾಡಿ ಅಮರರಾಗಿದ್ದಾರೆ. ಅವರ ಸಿನಿಮಾ ನಟನೆಯಷ್ಟೇ ಅಲ್ಲ, ಸಮಾಜ ಕಾರ್ಯವೂ ಇತರರಿಗೆ ಮಾದರಿಯಾಗಿದೆ. ಅಹಂ ಇಲ್ಲದ ಸರಳತೆ ಮೂಲಕ ಕನ್ನಡಿಗರ ಹೃದಯವನ್ನು ಪುನೀತ್ ರಾಜ್‌ಕುಮಾರ್ ಗೆದ್ದಿದ್ದಾರೆ. ಅವರ ಸೇವಾ ಕೆಲಸಗಳು ಇತರರಿಗೆ ಪ್ರೇರಣೆ ನೀಡಿವೆ ಎಂದರು.

8 ಜೋಡಿಗಳು ದಾಂಪತ್ಯ ಜೀವನವನ್ನು ಪ್ರವೇಶಿಸಿದವು. ನೂತನ ಸತಿ–ಪತಿಗಳಿಗೆ ಗಣ್ಯರು ಹಾರೈಸಿದರು. ಯುವ ನಟ ಆರ್.ಕೆ. ದೀರನ್, ಬೆಂಗಳೂರು ವಿವಿ ಪ್ರಾಧ್ಯಾಪಕ ಡಾ.ರಾಜಪ್ಪ ದಳವಾಯಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಕಾಂಗ್ರೆಸ್ ಮುಖಂಡರಾದ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಸಮಿತಿಯ ಅಧ್ಯಕ್ಷ ಎನ್.ರಾಜು ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರಿನ ಜಂಬುಪುರ ಗ್ರಾಮ ಪಂಚಾಯ್ತಿಗೆ ನೂತನ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ನಾಗರಾಜು ಅವರನ್ನು ಉದ್ಯಮಿ ಹಾಗೂ ಸಮಾಜ ಸೇವಕ ಎಸ್.ಶ್ರೀಕಾಂತ್ ಆತ್ಮೀಯವಾಗಿ ಅಭಿನಂದಿಸಿದರು.

ವರುಣಾ ಕ್ಷೇತ್ರದ ವಸತಿ ಯೋಜನೆಗೆ ಕೆ.ಆರ್.ಕ್ಷೇತ್ರದಲ್ಲಿ ಚಾಲನೆ

ಶಾಸಕ ರಾಮದಾಸ್‌ರಿಂದ ಶಿಷ್ಟಾಚಾರ ಉಲ್ಲಂಘನೆ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಆರೋಪ

ತಿ.ನರಸೀಪುರ ಮಾ.19– ವರುಣಾ ಕ್ಷೇತ್ರದ ಲಲಿತಾದ್ರಿಪುರದಲ್ಲಿ ನಿರ್ಮಿಸಲುದ್ದೇಶಿರುವ ವಸತಿ ಯೋಜನೆ ಕಾಮಗಾರಿಗೆ ಕೆ.ಆರ್.ಕ್ಷೇತ್ರದಲ್ಲಿ ಶಂಕುಸ್ಥಾಪನೆ ಮಾಡುವ ಮೂಲಕ ಶಿಷ್ಟಾಚಾರ ಉಲ್ಲಂಘಿಸಲಾಗಿದೆ. ಶಾಸಕ ಎಸ್.ಎ.ರಾಮದಾಸ್ ಜನರಿಗೆ ಸುಳ್ಳು ಭರವಸೆ ನೀಡಿ ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು.

ಮೈಸೂರು ನಗರದಲ್ಲಿ ಬಿಜೆಪಿ ಶಾಸಕರು ವಸತಿ ಯೋಜನೆ ಮಂಜೂರಾತಿ ಪತ್ರ ವಿತರಣೆ ಕಾರ್ಯಕ್ರಮ ನಡೆಸಿರುವ ಹಿನ್ನೆಲೆಯಲ್ಲಿ ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಭಾನುವಾರ ತುರ್ತು ಸುದ್ದಿಗೋಷ್ಠಿ ನಡೆಸಿ ಆಕ್ಷೇಪ ವ್ಯಕ್ತಪಡಿಸಿದ ಡಾ.ಯತೀಂದ್ರ, ಶಿಷ್ಟಾಚಾರ ಉಲ್ಲಂಘಿಸಿ ಮನೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ. ಲಲಿತಾದ್ರಿಪುರ ಸರ್ವೇ ನಂ.15, 16, 17, 18ರಲ್ಲಿ 1450 ಮನೆಗಳನ್ನು 163 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಲಲಿತಾದ್ರಿಪುರದ ಕಾಮಗಾರಿಗೆ ದಸರಾ ವಸ್ತು ಪ್ರದರ್ಶನದಲ್ಲಿ ಶಂಕುಸ್ಥಾಪನೆ ಮಾಡಲಾಗುತ್ತಿದೆ ಎಂದು ದೂರಿದರು.



ವರುಣಾದಲ್ಲಿ ಮನೆಗಳು ನಿರ್ಮಾಣವಾಗುವುದರಿಂದ ನನ್ನ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಬೇಕಿತ್ತು. ಆದರೆ ಕೆ.ಆರ್.ಕ್ಷೇತ್ರದ ಶಾಸಕ ರಾಮದಾಸ್ ಆತುರ ಮಾಡುತ್ತಿದ್ದಾರೆ. ಎಲೆಕ್ಷನ್‌ಗಾಗಿ ಜನರಿಗೆ ಸುಳ್ಳು ಭರವಸೆ ನೀಡಿ ಅನಗತ್ಯ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಕಳೆದ 2021–22ರಲ್ಲಿ ಭೂ ಸ್ವಾಧೀನ ಆಗಿತ್ತು. ಭೂ ಪರಿಹಾರದ ವಿಚಾರದಲ್ಲಿ ತಕರಾರುಗಳಿವೆ. ನ್ಯಾಯಾಲಯ ತಡೆಯಾಜ್ಞೆ ಕೊಟ್ಟಿದೆ. 2022ರ ಜೂನ್‌ನಲ್ಲಿ ನಡೆದ ಮುಡಾ ಸಭೆಯಲ್ಲಿ ಸದರಿ ಜಾಗವನ್ನು ಪಾಲಿಕೆಗೆ ಹಸ್ತಾಂತರ ಮಾಡಲು ತೀರ್ಮಾನಿಸಲಾಗಿತ್ತು. ತಕರಾರು ತೆಗೆದವರಿಗೆ ಭೂ ಪರಿಹಾರ ಕೊಟ್ಟು ಮುಂದುವರಿಯಬೇಕಿತ್ತು ಎಂದರು.

ವಸತಿ ಯೋಜನೆಗೆ ಕೆ.ಆರ್.ಕ್ಷೇತ್ರದ ಫಲಾನುಭವಿಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ. ಈ ಹಿಂದೆ ವರುಣಾ ಕ್ಷೇತ್ರದವರನ್ನೂ ಆಯ್ಕೆ ಮಾಡಲಾಗಿತ್ತು. ಈ ಬಗ್ಗೆ ನಾನು ಪ್ರತಿಭಟನೆ ಮಾಡಿದ ಕಾರಣಕ್ಕಾಗಿಯೇ ಶಂಕುಸ್ಥಾಪನೆ ಜಾಗವನ್ನು ಬದಲಾವಣೆ ಮಾಡಿ ಕೊಂಡಿದ್ದಾರೆ. ಇಬ್ಬರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿರುವುದರಿಂದ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಮುಂದೆಯೂ ಕಾಮಗಾರಿ ತಾರ್ಕಿಕ ಅಂತ್ಯಕ್ಕೆ ಹೋಗೋದಿಲ್ಲವೆಂದು ತಿಳಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ಭೂ ಸ್ವಾಧೀನ ವಿವಾದ ನ್ಯಾಯಾಲಯದಲ್ಲಿದ್ದರೂ ತರಾತುರಿಯಲ್ಲಿ ಚುನಾವಣೆ ಗಿಮಿಕ್‌ಗಾಗಿ ಮಹತ್ವದ ವಸತಿ ಯೋಜನೆ ಕಾಮಗಾರಿ ಅನುಷ್ಠಾನಗೊಳಿಸಿದ್ದಾರೆ. ಶಿಷ್ಟಾಚಾರ ಉಲ್ಲಂಘಿಸಿ ಇಂತಹ ಅವೈಜ್ಞಾನಿಕ ಯೋಜನೆಯನ್ನು ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕರು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿ.ಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಪುರಸಭಾ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ಮಾಜಿ ಅಧ್ಯಕ್ಷ ಮದನ್ ರಾಜ್, ಜಿಲ್ಲಾ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ಡಿಸಿಸಿ ಸದಸ್ಯ ಹುಣಸೂರು ಬಸವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕ್ಷೇತ್ರ ಆಯ್ಕೆ ಸಿದ್ದರಾಮಯ್ಯರಿಗೆ ಬಿಟ್ಟದ್ದು

ವರುಣಾದಲ್ಲಿಯೇ ಸ್ಪರ್ಧಿಸುವಂತೆ ಹೈಕಮಾಂಡ್ ಸೂಚಿಸಿದ್ದರೂ, ಚುನಾವಣೆಯಲ್ಲಿ ಕ್ಷೇತ್ರ ಆಯ್ಕೆ ಅಂತಿಮವಾಗಿ ಮಾಜಿ ಸಿಎಂ ಸಿದ್ದರಾಮಯ್ಯ ಅವರ ವಿವೇಚನೆಗೆ ಬಿಟ್ಟದ್ದು. ಅವರು ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆಲ್ಲಲಿದ್ದಾರೆ. ಕೋಲಾರದಲ್ಲಿ ನಾನೇ ವೈಯುಕ್ತಿಕವಾಗಿ ನಡೆಸಿದ ಎರಡೂ ಸಮೀಕ್ಷೆಯಿಂದ ಗೆಲ್ಲುವುದನ್ನು ಖಾತರಿ ಪಡಿಸಿಕೊಂಡಿದ್ದೇನೆ.

–ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕ.

ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್ ಮನೆ ಮನೆಗೆ ತಲುಪಿಸಿ

ಶಾಸಕ ಹೆಚ್.ಪಿ.ಮಂಜುನಾಥ್



ಹುಣಸೂರು, ಮಾ.19– ಕಾಂಗ್ರೆಸ್ ಪಕ್ಷ ಗೃಹಲಕ್ಷ್ಮಿ ಯೋಜನೆಯಡಿ 2 ಸಾವಿರ ರೂ., ಗೃಹಜ್ಯೋತಿ ಯೋಜನೆಯಡಿ 200 ಯೂನಿಟ್ ಉಚಿತ ವಿದ್ಯುತ್, ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿಯನ್ನು ಉಚಿತವಾಗಿ ವಿತರಿಸುವ ಜೊತೆಗೆ ವಸತಿ ನಿರ್ಮಾಣಕ್ಕೆ 4 ಲಕ್ಷ ರೂ. ಅನುದಾನ ನೀಡುವುದಾಗಿ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದೆ ಎಂದು ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ನಗರದ ಕಲ್ಕುಣಿಕೆ ಬಡಾವಣೆಯಲ್ಲಿ ಗ್ಯಾರಂಟಿ ಕಾರ್ಡ್‌ಗಳ ಭಿತ್ತಿ ಪತ್ರಗಳನ್ನು ಆಟೋಗಳಿಗೆ ಅಂಟಿಸುವ ಮೂಲಕ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್‌ಗಳನ್ನು ಮನೆ–ಮನೆಗೆ ತಲುಪಿಸುವ ಮೂಲಕ ಪಕ್ಷ ಸಂಘಟಿಸಿ ಎಂದ ಅವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೀಡಿದ 165 ಭರವಸೆಗಳನ್ನು ಈಡೇರಿಸಲಾಗಿದೆ. ಆದ್ದರಿಂದ ಈ ಬಾರಿ ಜನರಿಗೆ ಕಾಂಗ್ರೆಸ್ ಮೇಲೆ ನಂಬಿಕೆ ಬಂದಿದೆ. ರಾಜ್ಯದೆಲ್ಲೆಡೆ ಕಾಂಗ್ರೆಸ್ ಪರವಾದ ಅಲೆಯಿದ್ದು, ಕ್ಷೇತ್ರದ ಜನತೆ ಕಾಂಗ್ರೆಸ್ ಪಕ್ಷ ಸೇರಿದಂತೆ ನನ್ನ ಮೇಲೆ ಅತಿ ಹೆಚ್ಚು ಪ್ರೀತಿ, ವಿಶ್ವಾಸ, ನಂಬಿಕೆ ಇಟ್ಟುಕೊಂಡಿದ್ದಾರೆ ಎಂದ ಅವರು ವಿರೋಧ ಪಕ್ಷಗಳ ಟೀಕೆ ಹಾಗೂ ಬೆದರಿಕೆಗಳಿಗೆ ಎದೆಗುಂದದೆ ಧೈರ್ಯವಾಗಿ ಪಕ್ಷ ಸಂಘಟನೆಯಲ್ಲಿ ಸಕ್ರಿಯಗೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ವೇತಾ ಮಂಜುನಾಥ್, ನಗರ ಕಾಂಗ್ರೆಸ್ ಅಧ್ಯಕ್ಷ ಕಲ್ಕುಣಿಕೆ ರಮೇಶ್, ಕಾರ್ಯಾಧ್ಯಕ್ಷ ವಕೀಲ ಪುಟ್ಟರಾಜ್ ನಗರಸಭಾ ಮಾಜಿ ಅಧ್ಯಕ್ಷೆ ಸೌರಭ, ಪರ್ವೀನ್ ತಾಜ್, ಜಾಕೀರ್ ಹುಸೇನ್, ಮಾಜಿ ಉಪಾಧ್ಯಕ್ಷ ದೇವನಾಯಕ, ನಗರಸಭಾ ಸದಸ್ಯರಾದ ಸ್ವಾಮಿಗೌಡ, ಮನು, ಮಂಜು, ರಂಜಿತಾ, ಹರೀಶ್, ವೆನ್ನಿ ತೋಮಸ್, ರಾಘು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶಿವಪ್ರಸಾದ್, ಪದ್ಮನಾಭ, ಮನೋಜ್ ಇತರರಿದ್ದರು.

ಕ್ರೀಡೆಯಿಂದ ಮಾನಸಿಕ, ದೈಹಿಕ ಆರೋಗ್ಯ ಸದೃಢ

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ



ನಂಜನಗೂಡು, ಮಾ.19– ಕ್ರೀಡೆ ಮನುಷ್ಯನ ಮಾನಸಿಕ, ದೈಹಿಕ ಆರೋಗ್ಯ ಸದೃಢಗೊಳಿಸುವ ಜೊತೆಗೆ ಆತ್ಮವಿಶ್ವಾಸ ವೃದ್ಧಿಸುತ್ತದೆ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ತಿಳಿಸಿದರು.

ತಾಲೂಕಿನ ಕಳಲೆ ಗ್ರಾಮದಲ್ಲಿ ನಟ ಡಾ.ಪುನೀತ್ ರಾಜ್‌ಕುಮಾರ್ ನೆನಪಿನ ಅಂಗವಾಗಿ 24ಮನೆ ತೆಲುಗುಶೆಟ್ಟರ ಜನಾಂಗದ ವತಿಯಿಂದ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಒತ್ತಡದ ಜೀವನದಿಂದಾಗಿ ಎಲ್ಲರೂ ಔಷಧಿಗಳ ದಾಸರಾಗುತ್ತಿದ್ದೇವೆ. ನಮ್ಮ ಆಹಾರ ಪದ್ಧತಿಯೂ ಕೂಡ ಇದಕ್ಕೆ ಕಾರಣ. ವ್ಯಕ್ತಿ ಸದೃಢ ಆರೋಗ್ಯ ಹೊಂದಲು ನಮ್ಮ ಆಹಾರ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದಲ್ಲದೆ, ಪ್ರತಿದಿನ ದೇಹಕ್ಕೆ ವ್ಯಾಯಾಮ ತರಿಸುವಂತಹ ಯಾವುದಾದರೊಂದು ಕ್ರೀಡೆಗಳಲ್ಲಿ ತೊಡಗಿಕೊಳ್ಳಬೇಕು. ಆಗ ಮಾತ್ರ ಮಾನಸಿಕ ಒತ್ತಡದಿಂದ ಹೊರಬರಲು ಸಾಧ್ಯ. ಗ್ರಾಮೀಣ ಕ್ರೀಡಾಪಟುಗಳಿಗೆ ಉತ್ತೇಜನ ದೊರಕಲು ಈ ರೀತಿಯ ಪಂದ್ಯಾವಳಿಗಳು ಹೆಚ್ಚು ಆಯೋಜನೆಗೊಳ್ಳಬೇಕು. ಇದರಿಂದ ಎಲ್ಲರೂ ಒಂದೆಡೆ ಸೇರಲು ಸಹಕಾರಿ ಎಂದರು.

ಜಿಪಂ ಮಾಜಿ ಸದಸ್ಯರಾದ ಎನ್.ಮಹದೇವು ಮಾತನಾಡಿದರು. ಇದೇ ಸಂದರ್ಭ ತೊಂಟಪ್ಪ, ಮಹದೇವಶೆಟ್ಟಿ, ನಾಗಶೆಟ್ಟಿ, ಕೆ.ಬಿ.ನಾಗರಾಜು, ಶಿವನಂಜಯ್ಯ, ಧನುಷ್, ದಿಲೀಪ, ಪ್ರಸನ್ನ, ಜೆ.ರಾಜು, ನಂಜುಂಡಶೆಟ್ಟಿ, ಜಗನಾಥಶೆಟ್ಟಿ ಇದ್ದರು.

ಸಮಾಜ ಕಲ್ಯಾಣ ಇಲಾಖೆ ನೌಕರ ಆತ್ಮಹತ್ಯೆ

ಹೆಚ್.ಡಿ.ಕೋಟೆ, ಮಾ.19– ತಾಲೂಕು ಸಮಾಜ ಕಲ್ಯಾಣ ಇಲಾಖೆ ನೌಕರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನುವಾರ ಪಟ್ಟಣದಲ್ಲಿ ನಡೆದಿದೆ. ಕಲ್ಬುರ್ಗಿ ಪಟ್ಟಣದ ನಿವಾಸಿ ದಿವಂಗತ ಕಂಬ್ರಯ್ಯ ಅವರ ಪುತ್ರ ಜಟ್ಟಿಂಗ್(33) ಆತ್ಮಹತ್ಯೆ ಮಾಡಿಕೊಂಡವರು. ಕಳೆದ 3 ವರ್ಷಗಳಿಂದ ತಾಲೂಕು ಸಮಾಜ ಕಲ್ಯಾಣ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಜಟ್ಟಿಂಗ್, ಪಟ್ಟಣದ ಡ್ರೈವರ್ ಕಾಲೋನಿಯಲ್ಲಿ ಮನೆಯನ್ನು ಬಾಡಿಗೆ ಪಡೆದು ಪತ್ನಿ ಅರ್ಚನಾ ಅವರೊಂದಿಗೆ ವಾಸವಾಗಿದ್ದರು.



ಶನಿವಾರ ಬೆಳಗ್ಗೆ ಕಚೇರಿಗೆ ತೆರಳಿ ರಾತ್ರಿ 9 ಗಂಟೆ ವೇಳೆಗೆ ಪಾನಮತ್ತನಾಗಿ ಬಂದ ಜಟ್ಟಿಂಗ್‌ನನ್ನು ಪತ್ನಿ ಅರ್ಚನಾ ಯಾಕೆ ಇಷ್ಟು ತಡವಾಗಿ ಕುಡಿದು ಮನೆಗೆ ಬಂದಿದ್ದೀರಾ ಎಂದು ಪ್ರಶ್ನಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಜಟ್ಟಿಂಗ್ ಮಾರ್ಚ್ ತಿಂಗಳ ಕೊನೆಯಲ್ಲಿ ಕಚೇರಿಯಲ್ಲಿ ತುಂಬಾ ಕೆಲಸವಿತ್ತು ಎಂದಿದ್ದಾನೆ. ಗಂಡನ ಮಾತನ್ನು ಒಪ್ಪದ ಪತ್ನಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗೆ ಫೋನ್ ಮಾಡಿ ನನ್ನ ಗಂಡ ರಾತ್ರಿ 9ರವರೆಗೂ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರಾ ಎಂದು ಕೇಳಿದ್ದಾಳೆ. ಅದಕ್ಕೆ ಅವರು ನಿತ್ಯ 5.30ಕ್ಕೆ ಹೋಗುತ್ತಾರೆ ಎಂದು ತಿಳಿಸಿದ್ದು, ಅಷ್ಟರೊಳಗೆ ಜಟ್ಟಿಂಗ್ ರೂಂಗೆ ತೆರಳಿ ಬಾಗಿಲು ಹಾಕಿಕೊಂಡಿದ್ದಾರೆ. ಈ ವೇಳೆ ಅರ್ಚನಾ ಎಷ್ಟೇ ಕೂಗಿದರೂ ಬಾಗಿಲು ತೆರೆಯದೇ ನನ್ನಿಂದ ತಪ್ಪಾಯಿತು ಕ್ಷಮಿಸು ಎಂದು ಕೇಳಿಕೊಂಡಿದ್ದಾನೆ. ಈ ವೇಳೆ ಬಾಗಿಲು ತೆರೆಯುವಂತೆ ಎಷ್ಟೇ ಒತ್ತಾಯ ಮಾಡಿದರೂ ಬಾಗಿಲು ತೆರೆಯದ ಕಾರಣ ಅರ್ಚನಾ ಮತ್ತೊಂದು ಕೋಣೆಗೆ ಹೋಗಿ ಮಲಗಿದ್ದಾಳೆ.

ಭಾನುವಾರ ಬೆಳಗ್ಗೆ ಮನೆ ಮಾಲೀಕರು ಬಾಡಿಗೆ ನೀಡುವಂತೆ ಮನೆ ಬಳಿ ಬಂದಾಗ ಅರ್ಚನಾ ರೂಂ ಬಾಗಿಲು ಬಡಿದಿದ್ದಾಳೆ. ಎಷ್ಟು ಬಾರಿ ಕೂಗಿದರೂ ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ ಅಕ್ಕಪಕ್ಕದ ಮನೆಯವರನ್ನು ಕರೆಸಿ ಬಾಗಿಲು ಒಡೆದು ನೋಡಿದಾಗ ಜಟ್ಟಿಂಗ್ ವೇಲ್‌ನಿಂದ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಸ್ಥಳಕ್ಕಾಗಮಿಸಿದ ಸಿಪಿಐ ಶಬ್ಬೀರ್ ಹುಸೇನ್ ಹಾಗೂ ಸಿಬ್ಬಂದಿ ಪರಿಶೀಲಿಸಿದರು. ಹೆಚ್ಚು ಸಾಲ ಮಾಡಿಕೊಂಡಿದ್ದ ಜಟ್ಟಿಂಗ್ ವಿಪರೀತವಾಗಿ ಮದ್ಯಸೇವನೆ ಮಾಡುತ್ತಿದ್ದ ಎನ್ನಲಾಗಿದೆ. ಈತ ಆತ್ಮಹತ್ಯೆಗೂ ಮುನ್ನಾ ಬ್ಯಾಂಕ್‌ನವರಿಗೆ ನಿಮ್ಮ ಸಾಲ ವಜಾ ಆಗಲಿದೆ ಎಂದು ಮೊಬೈಲ್‌ನಿಂದ ಮೇಸೆಜ್ ಕಳುಹಿಸಿದ್ದಾನೆ ಎಂದು ತಿಳಿದು ಬಂದಿದೆ. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಹೆಚ್.ಡಿ.ಕೋಟೆ ತಾಲೂಕಿನ ಸತ್ತಿಗೆಹುಂಡಿ ಗ್ರಾಮದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಗೌತಮ ಬುದ್ಧನ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಹಾಗೂ ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್ ಮಹನೀಯರಿಗೆ ಪುಷ್ಪನಮನ ಸಲ್ಲಿಸಿದರು. ಬಳಿಕ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಡಾ.ಹೆಚ್.ವಿ.ಕೃಷ್ಣಸ್ವಾಮಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳುವಂತೆ ಮನವಿ ಮಾಡಿದರು. ಈ ವೇಳೆ ಗೌತಮಿ ಮಾತಾಜಿ, ಜಿಲ್ಲಾ ಎಸ್ಸಿ ಮೋರ್ಚಾ ಉಪಾಧ್ಯಕ್ಷ ಗೋಪಾಲಯ್ಯ, ಕೃಷ್ಣಸ್ವಾಮಿ ಆಪ್ತ ಸಹಾಯಕ ಶಿವಕುಮಾರ್, ಶಿವು, ಸೋಮಶೇಖರ್, ಶಿವಣ್ಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಪಂಚರತ್ನ ಯಾತ್ರೆ

ಯುವ ಮುಖಂಡ ಸಂಪತ್ ನೇತೃತ್ವದಲ್ಲಿ ಬೃಹತ್ ಬೈಕ್ ರ್‍ಯಾಲಿ



ತಿ.ನರಸೀಪುರ, ಮಾ.19– ತಿ.ನರಸೀಪುರ ಕ್ಷೇತ್ರಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಪಂಚರತ್ನ ಯಾತ್ರೆ ಆಗಮಿಸಿದ ಹಿನ್ನೆಲೆಯಲ್ಲಿ ಜೆಡಿಎಸ್ ಯುವ ಮುಖಂಡ ಸಂಪತ್ ನೇತೃತ್ವದಲ್ಲಿ ಬೃಹತ್ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿತ್ತು.

ಪಟ್ಟಣದ ಎಪಿಎಂಸಿ ಯಾರ್ಡ್‌ನಲ್ಲಿ ಜಮಾಯಿಸಿದ 2 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಶಾಸಕ ಎಂ.ಅಶ್ವಿನ್ ಕುಮಾರ್ ಪರ ಘೋಷಣೆ ಕೂಗುವ ಮೂಲಕ ಬೈಕ್ ರ್‍ಯಾಲಿಯಲ್ಲಿ ಮಡವಾಡಿಗೆ ತೆರಳಿದರು.

ಬೈಕ್ ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದ ಯುವ ಮುಖಂಡ ಸಂಪತ್, ಮಡವಾಡಿಯಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಪಂಚರತ್ನ ಯಾತ್ರೆಗೆ ಚಾಲನೆ ನೀಡುತ್ತಿರುವ ಹಿನ್ನೆಲೆಯಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್ ಅವರನ್ನು ಬೆಂಬಲಿಸಿ ಇದೇ ಮೊದಲ ಬಾರಿಗೆ ಪಟ್ಟಣದಲ್ಲಿ ಬೃಹತ್ ಬೈಕ್ ರ್‍ಯಾಲಿ ನಡೆಸುತ್ತಿದ್ದೇವೆ. ಅಶ್ವಿನ್ ಕುಮಾರ್ ಪರ ಕ್ಷೇತ್ರದಲ್ಲಿ ಯುವಕರ ಪಡೆ ಕೆಲಸ ಮಾಡುತ್ತಿದೆ. ಸದಾ ಹಸನ್ಮುಖಿಯಾಗಿ ಜನಪರ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅವರು ಕ್ಷೇತ್ರದ ಜನರ ಕಷ್ಟ ಸುಖದಲ್ಲಿ ಭಾಗಿಯಾಗುವ ಮೂಲಕ ಈ ಭಾಗದ ಜನಪ್ರಿಯ ಶಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಸಾಮಾನ್ಯ ಜನರ ಕೈಗೆಟಕುವ ಸರಳ ಸಜ್ಜನಿಕೆಯ ಅಶ್ವಿನ್ ಕುಮಾರ್‌ರಂತಹ ಶಾಸಕರು ಕ್ಷೇತ್ರಕ್ಕೆ ಮತ್ತೊಮ್ಮೆ ಬೇಕಿದೆ. ಹಾಗಾಗಿ ಅವರನ್ನು ಬೆಂಬಲಿಸಿ ನಾವು ಅವರೊಂದಿಗೆ ಕೆಲಸ ಮಾಡುತ್ತೇವೆ ಎಂದರು.

ರಾಜ್ಯದಲ್ಲಿ ರೈತರು, ಬಡವರು, ಹಿಂದುಳಿದವರ ಏಳಿಗೆಗೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತೊಮ್ಮೆ ಅಧಿಕಾರದ ಗದ್ದುಗೆ ಏರಬೇಕು. ಅವರು ಅಧಿಕಾರಾವಧಿಯಲ್ಲಿ ರೈತರ ಸಂಪೂರ್ಣ ಸಾಲ ಮನ್ನಾ ಮಾಡುವ ಮೂಲಕ ರೈತ ಪರ ಸರ್ಕಾರ ನಡೆಸಿದ್ದಾರೆ. ಪಂಚರತ್ನ ಯೋಜನೆ ಮೂಲಕ ರಾಜ್ಯದ ಜನತೆಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅವರನ್ನು ಮುಖ್ಯಮಂತ್ರಿ ಮಾಡಲು ನಾವೆಲ್ಲರೂ ಶ್ರಮಿಸಬೇಕು. ಅವರ ಕೈ ಬಲಪಡಿಸಲು ಕ್ಷೇತ್ರದಲ್ಲಿ ಅಶ್ವಿನ್ ಅವರಿಗೆ ಮತ್ತೊಂದು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಬೃಹತ್ ಬೈಕ್ ರ್‍ಯಾಲಿ ಹಿನ್ನೆಲೆಯಲ್ಲಿ ರಸ್ತೆ ಸಂಚಾರದಲ್ಲಿ ವ್ಯತ್ಯಯವಾಗಿ ಸಾರ್ವಜನಿಕರು ಪರದಾಡುವಂತಾಯಿತು.

ಆಲಿಕಲ್ಲು ಮಳೆಗೆ ಬಾಳೆ ಬೆಳೆ ನಾಶ

ಮಲ್ಲುಂಡಿ, ಮಾ.19– ಶುಕ್ರವಾರ ರಾತ್ರಿ ಸುರಿದ ಬಿರುಗಾಳಿ ಸಮೇತ ಆಲಿಕಲ್ಲು ಮಳೆಗೆ ಬಾಳೆ ಬೆಳೆ ಸಂಪೂರ್ಣ ನಾಶವಾಗಿರುವ ಘಟನೆ ಸಮೀಪದ ಆಂಜನಪುರ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಶಿವ ಎಂಬುವರಿಗೆ ಸೇರಿದ 3 ಎಕರೆ ಜಮೀನಿನಲ್ಲಿ ಬೆಳೆದಿದ್ದ 2 ಸಾವಿರ ಬಾಳೆ ಗಿಡಗಳು ಬಿರುಗಾಳಿ ಮಳೆಗೆ ನೆಲಕಚ್ಚಿವೆ. ಇದ್ದರಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಈ ವೇಳೆ ಮಾತನಾಡಿದ ಶಿವ ಸಾಲ ಮಾಡಿ ಬೆಳೆದ ಫಸಲು ನಾಶವಾದರೆ ರೈತರು ಮಾಡಿದ ಸಾಲ ತೀರಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದ ಅವರು, ಸರ್ಕಾರ ಬೆಳೆ ನಷ್ಟಕ್ಕಾಗಿ ಅಲ್ಪಸ್ವಲ್ಪ ಪರಿಹಾರ ನೀಡುತ್ತದೆ. ಇದ್ದರಿಂದ ಸಾಲ ತಿರಿಸಲು ಸಾಧ್ಯವಿಲ್ಲ. ಹೀಗಾಗಿ ರೈತರ ಕಷ್ಟ ಅರಿತು ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಕಂಪಲಾಪುರ ಪಿಎಸಿಎಸ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕಂಪಲಾಪುರ, ಮಾ.19– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಸಣ್ಣಮ್ಮ ಹಾಗೂ ಉಪಾಧ್ಯಕ್ಷರಾಗಿ ರಾಜೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ, ಉಪಾಧ್ಯಕ್ಷರಾಗಿದ್ದ ಜಯಣ್ಣ ಹಾಗೂ ಮಹೇಶ್ ಅವರು ಆಂತರಿಕ ಒಪ್ಪಂದದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಣ್ಣಮ್ಮ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರಾಜೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹೆಚ್.ಕೆ.ಜಗದೀಶ್ ಘೋಷಿಸಿದರು. ಇದೇ ವೇಳೆ ಸಂಘದ ಸಿಇಓ ಕೆ.ಎನ್.ಹರ್ಷ, ಸಲಹೆಗಾರರಾದ ಪಿ.ವೈ.ಮಂಜುಳಾ, ನಿರ್ದೇಶಕರಾದ ಕೆ.ಕುಮಾರ್, ಕೆ.ಎಂ.ಲಕ್ಷ್ಮಣ್, ಸಂತೋಷ್, ಜಯಣ್ಣ, ಮಹೇಶ್, ರವಿ, ಸತ್ಯನಾರಾಯಣ, ಕೆಂಪಯ್ಯ, ಸಾಕಮ್ಮ, ಲೋಕೇಶ್, ಪುರಸಭೆ ಅಧ್ಯಕ್ಷ ಕೆ.ಮಹೇಶ್, ಮುಖಂಡರಾದ ಉಮೇಶ್, ಮುತ್ತುರಾಜ್, ಪರಮೇಶ್, ಪುಟ್ಟೇಗೌಡ ಸೇರಿದಂತೆ ಇನ್ನಿತರರಿದ್ದರು.

ಹೆಚ್.ಡಿ.ಕೋಟೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಶ್ರಮಿಸಲು ಕರೆ

ಸರಗೂರು, ಮಾ.19– ತಳಮಟ್ಟದಿಂದ ಪಕ್ಷ ಸಂಘಟಿಸುವ ಮೂಲಕ ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ಶ್ರಮಿಸಿ ಎಂದು ಎಐಸಿಸಿ ಸದಸ್ಯೆ ಜಯಮಂಗಳ ಭೃಂಗೀಶ್ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ಸರಗೂರು ಟೌನ್ ಕಾಂಗ್ರೆಸ್ ನೂತನ ಅಧ್ಯಕ್ಷ ಎಸ್.ಎನ್.ನಾಗರಾಜು ಅಧ್ಯಕ್ಷತೆಯಲ್ಲಿ ನಡೆದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಶ್ರದ್ಧಾಂಜಲಿ ಸಭೆ, ಪಕ್ಷ ಸಂಘಟನೆ ಸಭೆ ಹಾಗೂ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಸರಗೂರು ನೂತನ ತಾಲೂಕಾಗಿ ಘೋಷಣೆಯಾಯಿತು ಎಂದ ಅವರು, ಸರಗೂರು ಪಟ್ಟಣದ ಅಭಿವೃದ್ಧಿಗೆ ಶಾಸಕ ಅನಿಲ್ ಚಿಕ್ಕಮಾದು ಶಕ್ತಿಮೀರಿ ಶ್ರಮಿಸುತ್ತಿದ್ದಾರೆ. ಹೀಗಾಗಿ ಈ ಬಾರಿ ಮತ್ತೊಮ್ಮೆ ಅವರನ್ನು ಗೆಲ್ಲಿಸಲು ಕಾರ್ಯಕರ್ತರು ಶ್ರಮಿಸಬೇಕು ಎಂದರು.

ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿ, ನೂತನ ಟೌನ್ ಅಧ್ಯಕ್ಷ ಎಸ್.ಎನ್.ನಾಗರಾಜು ಕ್ರಿಯಾಶೀಲರಾಗಿದ್ದು, ಸಂಘಟನಾ ಚತುರರಾಗಿದ್ದಾರೆ. ಇಂತಹವರು ಅಧ್ಯಕ್ಷರಾಗಿರುವುದು ಸಂತಸದ ವಿಚಾರವಾಗಿದ್ದು, ಮುಂದಿನ ದಿನಗಳಲ್ಲಿ ಪಕ್ಷದ ಏಳಿಗೆಗಾಗಿ ದುಡಿಯಲಿದ್ದಾರೆ ಎಂದರು.

ಇತ್ತೀಚೆಗೆ ನಿಧನರಾದ ಧ್ರುವನಾರಾಯಣ್ ಅವರು ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ನಿಧನ ರಾಜ್ಯಕ್ಕೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟ ಎಂದರು.

ಟೌನ್ ಕಾಂಗ್ರೆಸ್ ಅಧ್ಯಕ್ಷ ಎಸ್.ಎನ್.ನಾಗರಾಜ್ ಮಾತನಾಡಿ, ಎಲ್ಲರೂ ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಬೇಕು. ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್ ಗೃಹಜ್ಯೋತಿ ಯೋಜನೆ ಮೂಲಕ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್, ಮನೆಯೊಡತಿಗೆ 2 ಸಾವಿರ ರೂ. ಪ್ರೋತ್ಸಾಹ ಧನ ನೀಡಲು ಗೃಹಲಕ್ಷ್ಮಿ ಯೋಜನೆ ಜಾರಿ, ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕಾರ್ಡ್‌ದಾರರಿಗೆ 10 ಕೆಜಿ ಅಕ್ಕಿ ಉಚಿತವಾಗಿ ನೀಡುವುದಾಗಿದೆ. ಹೀಗಾಗಿ ಎಲ್ಲರೂ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು ಎಂದು ಮನವಿ ಮಾಡಿದರು.




ಟೌನ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಯೋಗೀಶ್, ಪಪಂ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಎಂ.ಕೆಂಡಗಣ್ಣಸ್ವಾಮಿ ಮಾತನಾಡಿ, ತಾಲೂಕಿನ ಪ್ರತಿ ಹಳ್ಳಿಗಳಲ್ಲಿ ಅಂಬೇಡ್ಕರ್ ಭವನ, ವಾಲ್ಮೀಕಿ ಭವನ, ವಿಶ್ವಕರ್ಮ ಸಮುದಾಯ ಭವನ ಸೇರಿದಂತೆ ಭವನಗಳು ನಿರ್ಮಾಣಗೊಳ್ಳಲು ಧ್ರುವನಾರಾಯಣ್ ಶ್ರಮ ಅಪಾರ. ಅವರ ಸರಳತೆ, ನಾಯಕತ್ವ ಗುಣ, ಕಾರ್ಯ ವೈಖರಿಗಳನ್ನು ಭಾವುಕರಾಗಿ ಸ್ಮರಿಸಿ, ಗುಣಗಾನ ಮಾಡಿದರು.

ಕಾಂಗ್ರೆಸ್ ಮುಖಂಡರಾದ ಭೃಂಗೀಶ್, ಮುಜೀಬ್, ಎಸ್.ಎನ್.ನಾಗಯ್ಯ, ರಮೇಶ್, ವೆಂಕಟಪ್ಪ, ದಾಸರಾಜು, ಭೀಮಯ್ಯ, ಮೆಡಿಕಲ್ ನಿತೀನ್, ಹನುಮಂತಯ್ಯ, ಕೃಷ್ಣ, ಕಾಳಿಪ್ರಸಾದ್, ನೀಲಾಧರ್, ಸೂಯೆಲ್, ಸುಭಾನ್, ಮಹದೇವ, ಶಿವಲಿಂಗಯ್ಯ, ವೈಕುಂಠಯ್ಯ, ಗೋಪಾಲಯ್ಯ, ಡ್ರೈವರ್ ವೆಂಕಟಪ್ಪ, ಪ್ರಕಾಶ್, ಜನಾರ್ಧನ್, ಶಿವು, ನಂಜುಂಡ, ಉಮೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಇದಕ್ಕೂ ಮುನ್ನಾ ಇತ್ತೀಚೆಗೆ ನಿಧನರಾದ ಮಾಜಿ ಸಂಸದ ಆರ್.ಧ್ರುವನಾರಾಯಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಇದೇ ಸಂದರ್ಭ ಸರಗೂರು ಟೌನ್‌ನ ಕಾಂಗ್ರೆಸ್‌ಗೆ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಎಸ್.ಎನ್.ನಾಗರಾಜು ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಅಭಿನಂದಿಸಿದರು.

ಮುಕ್ಕಾಟೀರ ಎಸ್.ರಾಮಚ್ಚ ನಿಧನ



ಹುಣಸೂರು, ಮಾ.19– ಹುಣಸೂರಿನ ಹಿರಿಯ ವಕೀಲ ಮುಕ್ಕಾಟೀರ ಆರ್.ಹರೀಶ್ ಅವರ ತಂದೆ ನಿವೃತ್ತ ಉಪತಹಸೀಲ್ದಾರ್ ಮುಕ್ಕಾಟೀರ ಎಸ್.ರಾಮಚ್ಚ (83) ಭಾನುವಾರ ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಓರ್ವ ಪುತ್ರ ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೊಡಗಿನ ವಿರಾಜಪೇಟೆ ತಾಲೂಕು ಗೋಣಿಕೊಪ್ಪ ಹೋಬಳಿ ಬಿಟ್ಟಂಗಾಲ ಸಮೀಪದ ಕೊಳತ್ತೂರು ಗ್ರಾಮದ ಮೃತರ ತೋಟದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು, ಮೈಸೂರು ನಗರ, ಕುಂಬಾರಕೊಪ್ಪಲು, ನಿಂಗಯ್ಯನಕೆರೆ ರಸ್ತೆ. ಮನೆ ನಂ.395ರಲ್ಲಿ ವಾಸವಾಗಿರುವ ಲೇಟ್ ಅಣ್ಣಯ್ಯಪ್ಪ ರವರ ಮಗನಾದ ಶ್ರೀ.ದೊರೆಸ್ವಾಮಿಗೌಡ ಮತ್ತು ಶ್ರೀ ದೊರೆಸ್ವಾಮಿಗೌಡರವರ ಮಗನಾದ ಶ್ರೀ ಡಿ.ಶಿವಕುಮಾರ ರವರಿಂದ ಶುದ್ಧ ಕ್ರಯ ಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ 10 (ಹತ್ತು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾವುದೇ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮದಲ್ಲಿರುವ ಅನ್ಯಕ್ರಾಂತವಾಗಿರುವ ಸರ್ವೆ ನಂ.49/1ಎ ವಿಸ್ತೀರ್ಣ 1 ಎಕರೆ 38 ಗುಂಟೆ ಜಮೀನಿನಲ್ಲಿ ನಿರ್ಮಿಸಿರುವ ಬೋಗಾದಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಖಾಲಿ ನಿವೇಶನದ ಖಾತ ಜಂಜರ್ ನಂ.2449, ಸ್ವತ್ತಿನ ಸಂಖ್ಯೆ 2449/1 (ಯುನಿಕ್ ಸಂಖ್ಯೆ 152200403000120079) ಇದರ ವಿಸ್ತೀರ್ಣ 2973.36 ಚದರ ಮೀಟರ್ (32005 ಚದರ ಅಡಿ)ಯ ಖಾಲಿ ನಿವೇಶನ. ಇದಕ್ಕೆ ಚಕ್ಕುಬಂಧಿ:

ಪೂರ್ವಕ್ಕೆ: ಶ್ರೀ ಆರ್. ಶರತ್ ಜೋಯಿಸ್ ರವರಿಗೆ ಸೇರಿದ ಸರ್ವೆ ನಂ.49/1ಎ ರ ಉಳಿಕೆ ಸ್ವತ್ತು, ಪಶ್ಚಿಮಕ್ಕೆ: ಶ್ರೀ ಶಶಿಕಾಂತ್ ರವರಿಗೆ ಸೇರಿದ ಸ್ವತ್ತಿನ ಸಂಖ್ಯೆ 2449/2, ಉತ್ತರಕ್ಕೆ: ಮೈಸೂರು–ಗದ್ದಿಗೆ ರಸ್ತೆ, ದಕ್ಷಿಣಕ್ಕೆ: ಎಸ್.ಬಿ.ಎಂ ಬಡಾವಣೆ.

Sd/- J.M.Aiyanna B.Sc., LL.B.
Advocate, KAR NO. 1635/1995
Mobile: 9845113628, Office: #1143/1E,
1st Floor, Chanakya Circle, Geetha Road, Chamarajapuram,
Mysuru - 570005. Ph: 0821-4287199
ದಿನಾಂಕ: 17.03.2023, ಸ್ಥಳ: ಮೈಸೂರು

ಮೈಸೂರು ಮಿತ್ರ
ಬೇಕಾಗಿದ್ದಾರೆ

1. **ಉಪ ಸಂಪಾದಕರು / ವರದಿಗಾರರು**
   ಅನುಭವಿಗಳಿಗೆ ಆದ್ಯತೆ
2. **ಡಿಟಿಪಿ ಆಪರೇಟರ್**
   ಪೇಜ್‌ಮೇಕರ್-7, ಫೋಟೋಶಾಪ್, ಕೋರಲ್‌ಡ್ರಾ, ನುಡಿ ಮತ್ತು ಬರಹ ಲಿಪಿ ತಿಳಿದಿರಬೇಕು.

ಅನುಭವ ಆಧರಿಸಿ ಉತ್ತಮ ಸಂಭಾವನೆ, ಇತರೆ ಭತ್ಯೆ ನೀಡಲಾಗುವುದು ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸಲು ಇಚ್ಛೆಯುಳ್ಳವರು, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವುಳ್ಳ ಸ್ವ-ವಿವರದೊಂದಿಗೆ ಕೂಡಲೇ ಸಂಪರ್ಕಿಸಿ.

ಸಮಯ: ಮಧ್ಯಾಹ್ನ 3 ರಿಂದ 5

ವ್ಯವಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ'
ಪ್ರಾದೇಶಿಕ ಬೆಳಗಿನ ದಿನಪತ್ರಿಕೆ, ಬನ್ನಿಮಂಟಪ, ಮೈಸೂರು 570015.

ಮೂರನೇ ವರ್ಷದ ಪುಣ್ಯಸ್ಮರಣೆ



ವಿ. ರಾಜೀವ

ನೀವು ನಮ್ಮನ್ನು ಅಗಲಿ ಇಂದಿಗೆ ಮೂರು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖಿತರು.
ತಾಯಿ ವಿಜಯಲಕ್ಷ್ಮಿ ಹಾಗೂ ಕುಟುಂಬವರ್ಗದವರು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬೇಕಾಗಿದ್ದಾರೆ

ಬಿ.ಬಿ. ಮೋಟಾರ್ಸ್
ಅಧಿಕೃತ ಬಜಾಜ್ ಆಟೋ ಮಾರಾಟಗಾರರು
ಮೈಸೂರು, ಕುಶಾಲನಗರ, ಮಂಡ್ಯ ವಿಭಾಗಕ್ಕೆ

1. ಸೇಲ್ಸ್ ಎಕ್ಸಿಕ್ಯೂಟಿವ್ಸ್ (6 No.)
   ಎಸ್‌ಎಸ್‌ಎಲ್‌ಸಿ / ಪಿಯುಸಿ
   ಸಂಬಳ + ಇನ್ಸೆಂಟಿವ್ + ಟಿ.ಎ.&ಡಿ.ಎ.
2. ಬ್ಯಾಕ್ ಎಂಡ್ ಆಪರೇಟರ್ಸ್ (3 No.)
   (ಹುಡುಗ ಮತ್ತು ಹುಡುಗಿಯರಿಗೆ)
3. ಪಿಡಿಐ ಟೆಕ್ನಿಷಿಯನ್ಸ್ (3 No.)
4. ಮೆಕಾನಿಕ್ಸ್ (5 No.)

7349491808
bcpsit@gmail.com

ಹಸಿರು ನಮ್ಮ ಉಸಿರು

SITE FOR SALE
Paramananda Sagara, 40x60 North Facing, Hunsur Road, Mysore
6364682868

ನೇರ II ಪಿಯುಸಿ

ಮೊದಲ ಪಿಯುಸಿ ಪಾಸಾಗುವ ಅಗತ್ಯವಿಲ್ಲ ನಾವು ನಿಮ್ಮನ್ನು ನೇರ II ಪಿಯುಸಿಗೆ ಕೂರಿಸಿ, ಮುದ್ರಿತ ನೋಟ್ಸ್‌ಗಳೊಂದಿಗೆ ಪಾಠ ಬೋಧಿಸಿ, ಪರೀಕ್ಷೆಗೆ ಉತ್ತಮವಾಗಿ ಅಣಿಗೊಳಿಸುತ್ತೇವೆ. 1999 ರಿಂದ 100% ಫಲಿತಾಂಶ. ಸಿಟಿ ಮತ್ತು ಕುವೆಂಪುನಗರ ಶಾಖೆಗಳು
www.direct2puc.com
9844355941|9482674031

LAND FOR SALE

8 Acre Residential Converted land, adjacent to De Paul International School and Peripheral Ring Road.

2 Acre Residential Converted Land behind Infosys and adjacent to 80ft Ring Road and Emarald Enclave.

Call for more details: **9845995584**

PRERANA MOTORS SINCE 32 YEARS — TATA MOTORS

ಸಮಸ್ತ ಟಾಟಾ ಗ್ರಾಹಕರಿಗೆ
ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು
Happy Ugadi
ವಿಶೇಷ ಆಫರ್‌ನೊಂದಿಗೆ ಖರೀದಿಸಿ
ಹೊಸ ಟಾಟಾ ಇಂಟ್ರಾ...... ನಿಮ್ಮ ಆದಾಯದ ಯಂತ್ರ......
ಪ್ರತಿ ಖರೀದಿಗೆ ವಿಶೇಷ ರೂ. 25,000 ರಿಯಾಯಿತಿ
+
Additional Bonus upto Rs. 30,000/-
(Captive/ Loyalty/ Welcome ಗ್ರಾಹಕರಿಗೆ)
+
INTRA V30- SMART TRUCK
ಪ್ರತಿ ಟ್ರಿಪ್‌ನಲ್ಲೂ ಅಧಿಕ ಆದಾಯ
Rs.39,999 /-* DP Scheme
ಕಡಿಮೆ ಬಂಡವಾಳದ ಯೋಜನೆ
INTRA V50- HEAVY DUTY PICK UP
ಅಧಿಕ ಲೋಡ್+ ಅಧಿಕ ಪಿಕ್‌ಅಪ್+ಅಧಿಕ ಲಾಭ
ಹಾಲಿ ಟಾಟಾ ಇಂಟ್ರಾ ಗ್ರಾಹಕರಿಗೆ Rs.5000/- ವಿಶೇಷ Referal Bonus
ಈ ಕೊಡುಗೆ ಮಾರ್ಚ್ 25.2023 ರವರೆಗೆ ಮಾತ್ರ
* Conditions Apply
ಸಂಪರ್ಕಿಸಿ:
ಪ್ರೇರಣ ಮೋಟಾರ್ಸ್, ಆಲನಹಳ್ಳಿ, ಬನ್ನೂರು ರಸ್ತೆ, ಮೈಸೂರು.
Ph: 9845488272

Alpha International School
Admission Open

PREKG, LKG, UKG, 1ST TO 8TH STD
NEP implemented ICSE School
Cambridge English language Assessment
• Discovery lab • Martial arts • Yoga • Pollution free campus of 3.5 acre
78299 37469 | 91083 51235 Near Ring Road signal junction, Srirampura, Mysuru - 8
UPCOMING BLOCK 3

Don't Miss.. Last Chance for MYSORE Citizens
New Stock Just Arrived Sale Last 3 Days

UGADI FESTIVAL BIG OFFER
BRANDED READYMADE GARMENTS BIGGEST DISCOUNT SALE

Like Ladies, Gents & Kids Garments
"For Direct Retail Customers"
Up to 80% Heavy Disscount

ಸೂಚನೆ: 2022 ವರೆಗಿನ ಬ್ರಾಂಡೆಡ್ ರೆಡಿಮೇಡ ಗಾರ್ಮೆಂಟ್ಸ್ ಗೋಡೌನ್‌ನಲ್ಲಿ ಬಾರಿ ಪ್ರಮಾಣದಲ್ಲಿ ಸಂಗ್ರಹವಾದ ಕಾರಣ ಕಂಪನಿಯು ಆರ್ಥಿಕ ಬಿಕ್ಕಟ್ಟನ್ನು ಎದುರಿಸಿತು ಆದ್ದರಿಂದ ಯುಗಾದಿ ಹಬ್ಬಕ್ಕಾಗಿ **ಮೈಸೂರು** ಜನರಿಗೆ ಭಾರಿ ರಿಯಾಯಿತಿ ನೀಡಲಾಗುತ್ತಿದೆ
ಈ ಅವಕಾಶವನ್ನು ಕಳೆದುಕೊಳ್ಳಬೇಡಿ ತ್ವರೆಮಾಡಿ...
@ ಹೋಟೆಲ್ ಪೈ ವಿಸ್ತಾ, ಮೈಸೂರು
Sincere Request : To the customers to maintain silence during shopping

10,000 ವಿವಿಧ ಪ್ರಕಾರದ ಜೇಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಇತರೆ
Just Rs.150/- to 350/-

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್: MRP: 1499/- to 4999/-
INDIAN TERRAIN, INDIGO NATION, DANIEL HECHTER, BARE, IZOD, HIGHLANDER, SCULLERS
Choose 30,000 Verities Jeans Pant, Cotton Pant, Formal, Shirts, T-Shirts, Lower Etc.
Just Rs. 499/- to 999/-

ಬ್ರಾಂಡೆಡ್ ಲೇಡಿಸ್ ಕುರ್ತಿಸ್ ಮೇಳಾ, ಕುರ್ತಿ ಮತ್ತು ಪಾಶ್ಚಿಮಾತ್ಯ ಬಟ್ಟೆಗಳು MRP : Up to 3999/-
BIBA, JACK&JONES, VERO MODA, aibof, ONLY
Choose 20,000 Plazo, Pant, Kurti & Western Outfits ectc
Just Rs. 200/-, 400/-, 600/-

ಕೊನೆಯ 3 ದಿನಗಳು ಮಾತ್ರ 20 ಸೋಮ, 21 ಮಂಗಳ & 22 ಬುಧವಾರ ಮಾರ್ಚ್ 2023 Time : 10am to 10pm

HOTEL PAI VISTA — **ಹೋಟೆಲ್ ಪೈ ವಿಸ್ತಾ**
Bangalore - Nilagiri Road, Opp. Subrban Bus Stand, MYSORE - 570001
ಬೆಂಗಳೂರು–ನೀಲಗಿರಿ ರಸ್ತೆ, ಸಬರ್ಬನ್ ಬಸ್ ಸ್ಟಾಂಡ್ ಹತ್ತಿರ, ಮೈಸೂರು–570001
*This offer till stock lasts *Condition apply
FREE PARKING ENTRANCE
All Major Debit / Credit Cards. Google Pay, PhonePe Accepted

ಶುಭಂ ದಿ ಎಲೆಕ್ಟ್ರಾನಿಕ್ ಶಾಪಿ — **SHUBHAM** The Electronic Shopee
Auspicious beginnings. Lasting relationships.
SHUBHAM LIFETIME FREE SERVICE
START THE NEW YEAR WITH GREAT SAVINGS
UGADI UPTO 20% Cash Back Utsav
CELEBRATING 1995 28 2022 YEARS OF SUCCESS
ನಾಡಿನ ಸಮಸ್ತ ಜನತೆಗೆ ಯುಗಾದಿ ಹಬ್ಬದ ಶುಭಾಶಯಗಳು
ಹಣ ಉಳಿತಾಯಿಸಿ 50000 ವರೆಗೆ

Offer	MRP	Offer Price	You Save	Free
Buy AIR CONDITIONER	₹56,990/-	₹48,900/-	₹29,080/-	TOP LOAD WASHING MACHINE Worth ₹20,990/-
Buy AIR CONDITIONER	₹51,750/-	₹45,900/-	₹18,840/-	35 Ltrs. AIR COOLER Worth ₹12,990/-
Buy AIR COOLER (55 Liters)		₹15,399/-	₹13,590/-	TOWER SPEAKER Worth ₹12,990/-
Buy 55" SMART LED TV	₹89,990/-	₹62,990/-	₹51,990/-	40 Ltrs. COOLER & TOWER SPEAKER Worth ₹24,990/-

Only CASH, DEBIT / CREDIT Cards. Applicable on select product & select scheme

SONY SAMSUNG LG PHILIPS ONIDA IVEE Whirlpool Godrej Kelvinator IFB BOSCH Haier BAJAJ DAIKIN OPPO mi lenovo hp Butterfly Preethi Prestige Crompton Aquaguard USHA EUREKA FORBES FABER
BAJAJ FINSERV, IDFC FIRST Bank, HDB FINANCIAL SERVICES, TVS CREDIT, HOME CREDIT, kotak, Pine Labs, HDFC BANK

Kuvempunagar - 9164753609 | Vijayanagar - 9164753632 | NR Moholla - 8861286904
JP Nagar - 9164753631 | VV Moholla - 9164753614 | KT Street - 9164753625 | Rajkumar Road - 9164753626
Mandya - 9164753618 | Chamarajanagar - 6364892907 | Hassan - 6364892908 | T.Narasipura - 6364892919
info@shubhamworld.com | www.shubhamworld.com | @shubhamgroups | @shubham_electronics